ಕರ್ನಾಟಕ ಸರ್ಕಾರ

# ಕರ್ನಾಟಕ ವಿಕಾಸ

## Karnataka Vikas

ಡಿಸೆಂಬರ್ DECEMBER 2016



**ಮರುಕಳಿಸಿದೆ ರಾಜ್ಯದಲ್ಲಿ ಬರ :**
**ಪರಿಹಾರ ಕ್ರಮಗಳಿಗೆ ಮುಂದಾಗಿದೆ ಸರ್ಕಾರ**

ದಿನಾಂಕ: 24.11.2016 ರಂದು ಮಾನ್ಯ ಶ್ರೀ. ಎಚ್. ಕೆ. ಪಾಟೀಲ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಬೆಳಗಾವಿ ಜಿಲ್ಲೆಯ ಅಳಗ ಗ್ರಾಮ ಪಂಚಾಯತಿಗೆ ಭೇಟಿ ನೀಡಿ ಪರಿಶೀಲಿಸಿದರು.






ಬೆಳಗಾವಿ ಜಿಲ್ಲೆಯ ನಾಗರಮುನ್ನೋಳಿ ಗ್ರಾಮ ಪಂಚಾಯತಿಯಲ್ಲಿ ನಡೆದ ವಿಶೇಷ ಗ್ರಾಮಸಭೆಯ ಛಾಯಾಚಿತ್ರ

# ಕರ್ನಾಟಕ ವಿಕಾಸ


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಡಿಸೆಂಬರ್ 2016 | ಸಂಪುಟ : 58 | ಸಂಚಿಕೆ : 01

December 2016 | Volume : 58 | Issue : 01


## ಈ ಸಂಚಿಕೆಯೊಳಗೆ


| | | |
|---|---|---|
| 5 | ಸಚಿವಾಲಯದಿಂದ ಸಂದೇಶ | – ಡಾ. ಎನ್. ನಾಗಾಂಬಿಕಾ ದೇವಿ |
| 7 | ಲೇಖನ | – ಹೆಚ್. ಎಸ್. ಪ್ರಕಾಶ್ ಕುಮಾರ್ |
| | | – ಡಾ॥ ಬೂವನಹಳ್ಳಿ ನಾಗರಾಜ್ |
| | | – ಗಂಗಾಧರ್ ಸ್ವಾಮಿ ಎಸ್. |
| | | – ಮಧುಸೂಧನ್ ಸಿ. ಆರ್. |
| | | – ಶ್ರೀನಿವಾಸ ಚಿತ್ರಗಾರ |
| 22 | ಯಶೋಗಾಥೆ | – ಉಮೇಶ್ ಹೆಚ್. ಸಿ. |
| 26 | ಲೇಖನ | – ನಿಂಗೇಗೌಡ |
| 44 | ಸುತ್ತೋಲೆ | |



ಪ್ರಕಾಶಕರು

**ಎಂ.ಕೆ.ಕೆಂಪೇಗೌಡ**

ನಿರ್ದೇಶಕರು(ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಪ್ರಧಾನ ಸಂಪಾದಕರು

**ಡಾ॥ ಬೂವನಹಳ್ಳಿ ನಾಗರಾಜ್**

ನಿರ್ದೇಶಕರು, ಸುವರ್ಣ ಗ್ರಾಮೋದಯ
ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ
ಉಪ ಕಾರ್ಯದರ್ಶಿ

**ಮುಬಾರಕ್ ಅಹ್ಮದ್**

ಸಂಪಾದಕರು ಹಾಗೂ
ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು

**ನಾಗರಾಜ್. ಬಿ. ವಾಗಾ**



### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ವಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಛೇರಿ ವಿಳಾಸ

ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 22353857
www.rdpr.kar.nic.in
Email : kvrdpr@gmail.com

### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,

ಕರ್ನಾಟಕ ವಿಕಾಸ ಪತ್ರಿಕೆ ಓದುಗರಿಗೆ ಶ್ರದ್ಧೆ, ಆಸಕ್ತಿ, ಉತ್ಸಾಹ ಮೂಡಿಸಿದೆ. ರೈತರು ಪ್ರಜೆ- ಪ್ರತಿನಿಧಿಗಳು, ಸ್ಥಳೀಯ ಸಂಸ್ಥೆ, ನೌಕರರು ಮತ್ತು ಸಾರ್ವಜನಿಕರು ಮುಂತಾದ ಓದುಗರಿಗೆ ತಾಜ ಮಾಹಿತಿ, ವಾಸ್ತವ ಸಂಗತಿ ನೀಡುತ್ತಿರುವುದು ಉಪಯುಕ್ತ. ಮಾಸ ಪತ್ರಿಕೆಯು ಬದುಕಿನ ಬದಲಾವಣೆಯಾಗಲು ಪ್ರೇರಣೆಯಾಗಿ ಮಾರ್ಗದರ್ಶನ ನೀಡುತ್ತಿದೆ. ಸಭೆ ಸಮಾರಂಭ, ವರದಿಗಳು, ವರ್ಣರಂಜಿತ ಚಿತ್ರಗಳು, ಉತ್ತಮ ಲೇಖನ, ಕವಿಯ(ಕ್ಷ) ಪ್ರಶ್ನೆ, ಕಾವ್ಯ ವಿಕಾಸ, ಸುತ್ತೋಲೆ ಇವೆಲ್ಲಾ ಚೆನ್ನಾಗಿ ಮೂಡಿ ಬಂದು ಆಕರ್ಷಣೀಯವಾಗಿದೆ.

**ಶ್ರೀ ಮರಿದೇವರ ಸಿದ್ದಪ್ಪ**

ನಿವೃತ್ತ ಶಿಕ್ಷಕರು, ಚೌಡಾಪುರ ಅಂಚೆ, ಕೂಡ್ಲಿಗಿ ತಾಲೂಕು, ಬಳ್ಳಾರಿ 583135.

ನವೆಂಬರ್ 2016ರ 'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯು ಕರ್ನಾಟಕದ ಪ್ರಸಿದ್ಧ ವ್ಯಕ್ತಿಗಳ ಭಾವಚಿತ್ರದೊಂದಿಗೆ ಕರ್ನಾಟಕ ಭೂಪಟವನ್ನು ಚಿತ್ರಿಸಿರುವುದು ಹರ್ಷದಾಯಕವಾಗಿದೆ. ಡಾ॥ಎನ್.ನಾಗಾಂಬಿಕ ದೇವಿಯವರ ಸಚಿವಾಲಯದ ಸಂದೇಶದಲ್ಲಿ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಹೇಳಿರುವುದು, ನಮ್ಮ ನಾಡು ನುಡಿಯ ಉಳಿವಿಗಾಗಿ ಕೈಗೊಂಡಿರುವ ಕ್ರಮಗಳು ಸ್ವಾಗತಾರ್ಹವಾದುದು. ಪತ್ರಿಕೆಯಲ್ಲಿನ ಲೇಖನಗಳು, ಯಶೋಗಾಥೆಗಳು ಪ್ರಯೋಜನಕಾರಿಯಾಗಿವೆ. ಇಂತಹ ಹೊಸ ಹೊಸ ವಿಷಯಗಳೊಂದಿಗೆ ಪತ್ರಿಕೆಯು ಮೂಡಿಬರಲಿ ಎಂದು ಆಶಿಸುತ್ತಾ ಇಲಾಖೆಯ ಎಲ್ಲಾ ಅಧಿಕಾರಿ ನೌಕರರುಗಳಿಗೆ ಹೊಸ ವರ್ಷದ ಹಾರ್ಧಿಕ ಶುಭಾಶಯಗಳು.

**ಶ್ರೀ ಹೆಚ್.ಜಿ. ನಿಶಾಂತ್**

ನಂ.46/1, 1ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ,
ಗಂಗಾನಗರ, ಆರ್.ಟಿ.ನಗರ ಅಂಚೆ, ಬೆಂಗಳೂರು-560032.

ಕರ್ನಾಟಕದ ನಾಡು ನುಡಿಯ ಸಂಕೇತವಾಗಿ ಮೂಡಿ ಬಂದಿರುವ ನವೆಂಬರ್ ಮಾಸ ಪತ್ರಿಕೆಯ ಮುಖಪುಟವು ಆಕರ್ಷಣೀಯವಾಗಿದೆ. ನಿಂಗೇಗೌಡರು ಬರೆದಿರುವ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಮುಖ ಪ್ರಕರಣಗಳಿಗೆ ಸಂಬಂಧಿಸಿದಂತೆ ಪೂರಕ ಟಿಪ್ಪಣಿ (ಬಾಗ-1) ಲೇಖನವು ಪಂಚಾಯತಿ ಅಭಿವೃದ್ಧಿ ಅದಿಕಾರಿಗಳು ಹಾಗೂ ಕಾರ್ಯದರ್ಶಿ ಹುದ್ದೆಗಳ ತಯಾರಿಯಲ್ಲಿರುವ ವಿಧ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿದೆ. ಡಾ॥ ರೇವಯ್ಯ ಒಡೆಯರ್‌ರವರ ಸಾಧಕರ ಸಂದರ್ಶನ ಅಂಕಣದಲ್ಲಿ ಶ್ರೀಮತಿ ಪ್ರೇಮಾ ತಿಮ್ಮನಗೌಡರ್‌ರವರ ಸಂದರ್ಶನ ಮಾಡಿರುವುದು, ಅವರ ಸಾಧನೆಗಳ ಕುರಿತು ಪ್ರಕಟಿಸಿರುವುದು ಇತರ ಗ್ರಾಮ ಪಂಚಾಯತಿ ಅಧ್ಯಕ್ಷರುಗಳಿಗೆ ಮಾರ್ಗದರ್ಶಿವಾಗಿದೆ. ನರೇಗ ಯೋಜನೆಯಡಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಾರಿಗೆ ತರುತ್ತಿರುವುದು ಉತ್ತಮ ಮುನ್ನಡೆಯಾಗಿದೆ.

**ಕುಮಾರಿ ಹಂಸಿಕ**

ಬಿಂಡಿಗನವಿಲೆ ಹೋಬಳಿ, ನಾಗಮಂಗಲ ತಾಲೂಕು, ಮಂಡ್ಯ ಜಿಲ್ಲೆ.

## ಸಚಿವಾಲಯದಿಂದ
# ಸಂದೇಶ



**ಡಾ॥ ಎನ್. ನಾಗಾಂಬಿಕಾ ದೇವಿ**
ಭಾ.ಆ.ಸೇ
**ಸರ್ಕಾರದ ಪ್ರಧಾನ ಕಾರ್ಯದರ್ಶಿ**


ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ, ಬೆಂಗಳೂರು.


ಪ್ರಿಯ ಬಂಧುಗಳೇ,

ರಾಜ್ಯವು ಸತತವಾಗಿ ಕಳೆದ 6 ವರ್ಷಗಳಿಂದ ಬರದ ಪರಿಸ್ಥಿತಿಯನ್ನು ಎದುರಿಸುತ್ತಾ ಬಂದಿದೆ. ಪ್ರಸ್ತುತ ಈ ಸಾಲಿನಲ್ಲಿ ನವೆಂಬರ್ ತಿಂಗಳ ಮೊದಲ ವಾರದಲ್ಲೇ ಬರದ ಪರಿಸ್ಥಿತಿಯು ತಲೆದೋರಿ ರಾಜ್ಯವನ್ನು ಮತ್ತು ರಾಜ್ಯದ ಜನರನ್ನು ಸಂಕಷ್ಟಕ್ಕೆ ದೂಡಿದೆ. ರಾಜ್ಯದಲ್ಲಿ ಮುಂಗಾರು ಮಳೆ ವಿಫಲವಾಗಿ ರೈತರು ನಾಟಿ ಮಾಡಿದ್ದ ಪಸಲುಗಳು ವಿಫಲವಾಗಿ ರೈತ ಕಂಗೆಟ್ಟಿದ್ದಾನೆ. ನಾಟಿ ಮಾಡಿದ ಬಿತ್ತನೆ ಬೀಜದ ಹಣವು ಸಹ ಕೈಗೆಟುಕದೆ ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾನೆ. ಕುಡಿಯುವ ನೀರಿಗೂ ಸಹ ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗುವ ಸಂದರ್ಭಗಳು ಬರಲಿವೆ.

ಜನ-ಜಾನುವಾರುಗಳು, ಉದ್ಯೋಗಕ್ಕಾಗಿ ಮತ್ತು ಆಹಾರಕ್ಕಾಗಿ ಗುಳೆ ಹೋಗುವ ಪರಿಸ್ಥಿತಿಗಳು ಮುಂದಿನ ದಿನಮಾನಗಳಲ್ಲಿ ಊಹಿಸಬಹುದಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದ ಬರ ನಿರ್ವಹಣೆ ಕೈಪಿಡಿ ಮಾರ್ಗಸೂಚಿ ಅನ್ವಯ 2016-17ನೇ ಸಾಲಿನಲ್ಲಿ 139 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಲಾಗಿರುವುದು ನಿಮಗೆಲ್ಲಾ ತಿಳಿದ ವಿಷಯವಾಗಿದೆ.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ತೊಡಗಿಸಿಕೊಂಡಿರುವ ವಿವಿಧ ಸ್ತರದ ಜನ ಪ್ರತಿನಿಧಿಗಳ, ಅಧಿಕಾರಿ ನೌಕರರ ಪಾತ್ರ ಮಹತ್ವ ಪಡೆದುಕೊಳ್ಳಲಿದೆ. ಎಲ್ಲರು ತಮ್ಮ ತಮ್ಮ ಜವಾಬ್ದಾರಿ ಮತ್ತು ಹೊಣೆಗಾರಿಕೆಗಳನ್ನು ಅರಿತು ಕೆಲಸ ನಿರ್ವಹಿಸಬೇಕಿದೆ. ತಮ್ಮ ಕರ್ತವ್ಯಗಳನ್ನು ಪಾಲಿಸುವಾಗ ಅಜಾಗರೂಕತೆಯಿಂದ ನಡೆದುಕೊಂಡಲ್ಲಿ ಸಂಕಷ್ಟಕ್ಕೆ ಸಿಲುಕಿದ ಗ್ರಾಮೀಣ ಜನತೆಗೆ ಬಹಳ ತೊಂದರೆಗಳು ಉಂಟಾಗುತ್ತವೆ. ಇಂತಹ ಅಹಿತಕರ ಘಟನೆಗಳಿಗೆ ಅವಕಾಶ ನೀಡದೆ ಕೆಲಸ ನಿರ್ವಹಿಸಬೇಕೆಂದು ಸೂಚಿಸಬಯಸುತ್ತೇನೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿಯಮಾವಳಿಗಳನ್ವಯ ಸಕಾಲದಲ್ಲಿ ಅರ್ಹ ಕೃಷಿ ಕಾರ್ಮಿಕ, ಭೂ ರಹಿತ ಕಾರ್ಮಿಕ, ಸಣ್ಣ ಮತ್ತು ಅತಿ ಸಣ್ಣ ರೈತ ಜನರಿಗೆ ಉದ್ಯೋಗ ಒದಗಿಸುವ ಕೆಲಸಗಳನ್ನು ವಿಳಂಬ ಮಾಡದೇ ತ್ವರಿತಗತಿಯಲ್ಲಿ ಕೈಗೆತ್ತಿಕೊಂಡು ಉದ್ಯೋಗಾವಕಾಶಗಳನ್ನು ಕಲ್ಪಿಸಿ ಗುಳೆ ಹೋಗುವ ಪರಿಸ್ಥಿತಿಯನ್ನು ತಪ್ಪಿಸಲು ಕ್ರಮ ಕೈಗೊಳ್ಳುವುದು.

ಇಂತಹ ಬರದ ಪರಿಸ್ಥಿತಿಯಲ್ಲಿ ಯೋಜನೆಯ ಮಾರ್ಗಸೂಚಿಯಲ್ಲಿ ಅವಕಾಶ ಕಲ್ಪಿಸಿರುವಂತೆ ಗ್ರಾಮೀಣ ಪ್ರದೇಶದ ರೈತರಿಗೆ ಅನುಕೂಲವಾಗುವಂತಹ ಆಸ್ತಿಗಳನ್ನು ಸೃಜನೆ ಮಾಡುವಂತಹ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರುವುದು. ಬರದ ಸಂದರ್ಭದಲ್ಲಿ, ಕಾಲಮಿತಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುವಾಗ ಹಾಗೂ ಯೋಜನೆಯ ಅರ್ಹ ಫಲಾನುಭವಿಗಳಿಗೆ ಸವಲತ್ತುಗಳನ್ನು ಕಲ್ಪಿಸುವ ಉದ್ದೇಶಗಳನ್ನು ಸಾಕಾರಗೊಳಿಸುವಾಗ ಯಾವುದೇ ಅವ್ಯವಹಾರಗಳಿಗೆ ಅಸ್ಪದವಾಗದ ರೀತಿಯಲ್ಲಿ ನಿಮ್ಮ ನಡವಳಿಕೆ ಇರಬೇಕು. ಜನರ ಸಂಕಷ್ಟದ ಸಂದರ್ಭದಲ್ಲಿ ಸ್ವಹಿತಾಸಕ್ತಿಗಳನ್ನು ಹೊಂದದೇ ಸೇವಾ ಮನೋಭಾವದಿಂದ ಕಾರ್ಯತತ್ಪರರಾಗಬೇಕು.

ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಇಳಿಮುಖವಾಗಿ ಕುಡಿಯುವ ನೀರಿಗೆ ಕಲ್ಪಿಸಿರುವ ವ್ಯವಸ್ಥೆಗಳು ಸಮರ್ಪಕವಾಗಿ ಕೆಲಸ ನಿರ್ವಹಿಸದೇ ಇರುವ ಸಂದರ್ಭದಲ್ಲಿ ಜನ ಸಾಮಾನ್ಯರಿಗೆ ಕುಡಿಯುವ ನೀರಿಗೆ ಯಾವುದೇ ವ್ಯತ್ಯಯವಾಗದಂತೆ ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳತಕ್ಕದ್ದು.

ಕಂದಾಯ ಇಲಾಖೆಯು ಜಾನುವಾರುಗಳಿಗೆ ಮೇವು ಮತ್ತು ನೀರಿನ ತೊಂದರೆಯನ್ನು ನಿವಾರಿಸಲು ಗೋಶಾಲೆಗಳನ್ನು ತೆರೆದಿರುತ್ತದೆ. ಇದರ ಸೌಲಭ್ಯವನ್ನು ಪಡೆದುಕೊಳ್ಳಲು ರೈತಾಪಿ ವರ್ಗಕ್ಕೆ ನೆರವು ನೀಡುವುದು.

ಬಿಸಿಲಿನ ತಾಪಮಾನ ಹೆಚ್ಚಿದಂತೆಲ್ಲ ಸಾಂಕ್ರಾಮಿಕ ರೋಗಗಳು ಅನೈರ್ಮಲ್ಯದ ಕಾರಣದಿಂದಾಗಿ ಹರಡುವ ಸಂಭವವು ಹೆಚ್ಚಾಗಿರುತ್ತದೆ. ಈ ಕಾರಣದಿಂದಾಗಿ ಗ್ರಾಮ ಪಂಚಾಯಿತಿಗಳು ಬಹು ಎಚ್ಚರಿಕೆಯಿಂದ ನೀರು ಸರಬರಾಜು ವ್ಯವಸ್ಥೆಯ ಸಂಪರ್ಕಗಳು ಮತ್ತು ರಸ್ತೆ, ಚರಂಡಿಗಳನ್ನು ಕಾಲಕಾಲಕ್ಕೆ ಸ್ವಚ್ಛಗೊಳಿಸುವುದು. ಜೊತೆಗೆ ಸೊಂಕು ನಿವಾರಕಗಳನ್ನು ಪಾರದರ್ಶಕ ನಿಯಮಗಳನ್ವಯ ಖರೀದಿಸಿ ಸಾಂಕ್ರಾಮಿಕ ರೋಗಗಳು ಹರಡದಂತೆ ನಿಯಂತ್ರಣ ಮತ್ತು ಮುನ್ನೆಚ್ಚರಿಕೆಯ ಕ್ರಮ ಕೈಗೊಳ್ಳುವುದು.

ಮೇಲಿನ ಎಲ್ಲಾ ಕ್ರಮಗಳನ್ನು ಸಕಾಲ ಹಾಗೂ ಸಮಯೋಚಿತವಾಗಿ ನಿರ್ವಹಿಸುವ ಮೂಲಕ ಬರದ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಿ ಗ್ರಾಮೀಣ ಜನತೆಯ ಮೆಚ್ಚುಗೆಗೆ ಪಾತ್ರರಾಗುತ್ತೀರ ಎಂಬ ಆಶಯ ನನ್ನದು.

(ಡಾ॥ ಎನ್. ನಾಗಾಂಬಿಕಾ ದೇವಿ)

ಲೇಖನ

# ರಾಜ್ಯದಲ್ಲಿ ಬರಗಾಲ : ಇಲಾಖೆಯಿಂದ ಕ್ರಮ

–ಹೆಚ್. ಎಸ್. ಪ್ರಕಾಶ್ ಕುಮಾರ್

ರಾಜ್ಯದಲ್ಲಿ ಬರಪರಿಹಾರಕ್ಕಾಗಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಕೈಗೊಂಡ ಕ್ರಮದ ಕುರಿತು ಲೇಖನ.

ರಾಜ್ಯದ 60220 ಗ್ರಾಮೀಣ ಜನವಸತಿಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಸುರಕ್ಷಿತ ಕುಡಿಯುವ ನೀರನ್ನು ಒದಗಿಸುವ ಮೂಲಕ ಜನರ ಜೀವನ ಮಟ್ಟವನ್ನು ಸುಧಾರಿಸಲು ಸರ್ಕಾರ ಹೆಚ್ಚಿನ ಮಹತ್ವವನ್ನು ನೀಡಿದೆ. ಪ್ರತಿ ದಿನ ಪ್ರತಿ ವ್ಯಕ್ತಿಗೆ ತಲಾ 55 ರಿಂದ 85 ಲೀಟರ್ ಕುಡಿಯುವ ನೀರು ಒದಗಿಸುವ ಉದ್ದೇಶವನ್ನು ಸರ್ಕಾರ ತಳೆದಿದೆ. ಗ್ರಾಮೀಣ ಪ್ರದೇಶಗಳಿಗೆ ಕೆಳಕಂಡ ಕಾರ್ಯಕ್ರಮಗಳ ಮೂಲಕ ಸುರಕ್ಷಿತ ಕುಡಿಯುವ ನೀರನ್ನು ಪೂರೈಸಲಾಗುತ್ತಿದೆ. (NRDWP ಮಾರ್ಗಸೂಚಿ–2013 ರಂತೆ) ವಿವಿಧ ಸೂಕ್ತ ಕುಡಿಯುವ ನೀರನ್ನು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.



(i) ಕೊಳವೆ ನೀರು ಸರಬರಾಜು ಯೋಜನೆ

(ii) ಕಿರು ನೀರು ಸರಬರಾಜು ಯೋಜನೆ

(iii) ಕೈಪಂಪು ಕೊಳವೆ ಬಾವಿ

(iv) ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆಗಳು.

2015–16ನೇ ಸಾಲಿನಲ್ಲಿ ಕುಡಿಯುವ ನೀರಿನ ಯೋಜನೆಗಾಗಿ NRDWP ಕಾರ್ಯಕ್ರಮದಡಿ ಬಿಡುಗಡೆ ಮಾಡಲಾದ ಒಟ್ಟು ರೂ. 2143.35 ಕೋಟಿಗೆ ಎದುರಾಗಿ ರೂ. 1838.17 ಕೋಟಿ ವೆಚ್ಚ ಮಾಡಲಾಗಿದ್ದು, ಬಿಡುಗಡೆ ಮಾಡಲಾದ ಅನುದಾನಕ್ಕೆ ಶೇ. 85.74% ಪ್ರಗತಿ ಸಾಧಿಸಲಾಗಿದೆ.

2015–16ನೇ ಸಾಲಿನಲ್ಲಿ ಇದರಡಿಯಲ್ಲಿ 2558 ಕಿರು ನೀರು ಸರಬರಾಜು

ಮುಖ್ಯ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು



ಯೋಜನೆಗಳು, 2803 ಕೊಳವೆ ನೀರು ಸರಬರಾಜು ಯೋಜನೆಗಳು ಹಾಗೂ 2699 ಕೊಳವೆ ಬಾವಿ ಮತ್ತು ಕೈ-ಪಂಪು ಮತ್ತು ಇನ್ನಿತರೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

2015-16ನೇ ಸಾಲಿನಲ್ಲಿ 1164 ಗುಣಮಟ್ಟ ಬಾಧಿತ ಜನವಸತಿಗಳಿಗೆ ಹಾಗೂ 16587 ಭಾಗಶಃ ಆವರಿಸಲ್ಪಟ್ಟ ಜನವಸತಿಗಳಿಗೆ ಸೂಕ್ತ ಕುಡಿಯುವ ನೀರಿನ ಯೋಜನೆಗಳನ್ನು ಕಲ್ಪಿಸಲಾಗಿದೆ ಮತ್ತು 679 ನಿರಂತರತೆ ಕಾಮಗಾರಿಗಳನ್ನು ಪೂರ್ಣಗೊಳಿಸ ಲಾಗಿದೆ.

ಅಂತರ್ಜಲ ಅತಿ ಬಳಕೆಯಿಂದಾಗಿ ಅಂತರ್ಜಲ ಮೂಲಗಳಲ್ಲಿ ರಾಸಾಯನಿಕ ಕಲುಷಿತಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದು ಕಂಡು ಬಂದಿರುತ್ತದೆ. ಆದುದರಿಂದ ಅಂತರ್ಜಲ ಮೂಲಗಳ ಅವಲಂಬನೆಯನ್ನು ಕಡಿಮೆ ಮಾಡಲು ಭೂಮೇಲ್ಮೈ ಜಲಮೂಲಗಳನ್ನು ಆಧರಿಸಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ರಾಜ್ಯದ 23 ಜಿಲ್ಲೆಗಳಲ್ಲಿ ಈವರೆವಿಗೆ 307 ಬಹುಗ್ರಾಮ ಯೋಜನೆಗಳನ್ನು ಪೂರ್ಣಗೊಳಿಸಲಾಗಿದ್ದು, ಇದರಿಂದ 3141 ಜನವಸತಿಗಳಲ್ಲಿ 65,26,324 ಗ್ರಾಮಸ್ಥರಿಗೆ ಶುದ್ಧ ಕುಡಿಯುವ ನೀರನ್ನು ಭೂಮೇಲ್ಮೈ ಜಲಮೂಲಗಳಿಂದ ಒದಗಿಸಲಾಗಿದೆ. ಇದಲ್ಲದೆ 202 ಬಹುಗ್ರಾಮ ಯೋಜನೆಗಳು ಪ್ರಗತಿಯ ವಿವಿಧ ಹಂತದಲ್ಲಿದ್ದು, 6870 ಜನವಸತಿಗಳಲ್ಲಿ 1,07,02,385 ಗ್ರಾಮಸ್ಥರಿಗೆ ಕುಡಿಯುವ ನೀರನ್ನು ಒದಗಿಸಲು ಯೋಜಿಸಿದೆ.

ದಿನಾಂಕ:01-04-2016ರ ವಸ್ತುಸ್ಥಿತಿಯಂತೆ ಕುಡಿಯುವ ನೀರಿನ ವ್ಯವಸ್ಥೆಯಿಂದ ಆವರಿಸಲ್ಪಟ್ಟ ಜನವಸತಿಗಳ ವಿವರ ಕೆಳಕಂಡಂತಿರುತ್ತದೆ.

| ಜನವಸತಿ ವರ್ಗೀಕರಣ | 1/4/2016 ರಂತೆ ವಸ್ತುಸ್ಥಿತಿ |
|---|---|
| 0 ಜನಸಂಖ್ಯೆ ಆವರಿಸಲ್ಪಟ್ಟ ಜನವಸತಿಗಳು | 0 |
| 0-25% ಜನಸಂಖ್ಯೆ ಆವರಿಸಲ್ಪಟ್ಟ ಜನವಸತಿಗಳು | 6166 |
| 25-50% ಜನಸಂಖ್ಯೆ ಆವರಿಸಲ್ಪಟ್ಟ ಜನವಸತಿಗಳು | 18762 |
| 50-75% ಜನಸಂಖ್ಯೆ ಆವರಿಸಲ್ಪಟ್ಟ ಜನವಸತಿಗಳು | 12778 |
| 75-100% ಜನಸಂಖ್ಯೆ ಆವರಿಸಲ್ಪಟ್ಟ ಜನವಸತಿಗಳು | 12170 |
| 100% ಜನಸಂಖ್ಯೆ ಆವರಿಸಲ್ಪಟ್ಟ ಜನವಸತಿಗಳು | 8198 |
| ಗುಣಮಟ್ಟದ ಭಾದೆಗೊಳಗಾದ ಜನವಸತಿಗಳು | 2146 |
| **ಒಟ್ಟು** | **60220** |

**ಟಿಪ್ಪಣಿ:** 25% ಆವರಿಸಲ್ಪಟ್ಟ ಜನವಸತಿಗಳು ಎಂದರೆ ಆ ಜನವಸತಿಗಳಲ್ಲಿ ಶೇ.25ರಷ್ಟು ಜನರಿಗೆ 55 LPCD ಪ್ರಮಾಣದಲ್ಲಿ ಒದಗಿಸುವಷ್ಟು ನೀರು ಸರಬರಾಜಾಗುತ್ತಿದೆ.

**ಮಾರ್ಚ್-2016ರ ಅಂತ್ಯದವರೆಗೆ ರಾಜ್ಯದಲ್ಲಿ ಒಟ್ಟಾರೆ ಸ್ಥಾಪಿಸಲಾಗಿರುವ ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆಗಳ ವಿವರ ಈ ಕೆಳಗಿನಂತಿವೆ:**

| | |
|---|---|
| ಕೈಪಂಪು ಕೊಳವೆ ಬಾವಿಗಳು (HP/BW) | **2,23,703** |
| ಕಿರು ನೀರು ಸರಬರಾಜು ಯೋಜನೆಗಳು (MWS) | **49,904** |
| ಕೊಳವೆ ನೀರು ಸರಬರಾಜು ಯೋಜನೆಗಳು (PWS) | **36,634** |
| ಬಹು ಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳು (MVS) | **302** |



ದಿನಾಂಕ:19.03.2016ರಂದು ರಾಜ್ಯದ 189 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ ಪ್ರತಿ ಕ್ಷೇತ್ರಕ್ಕೆ ರೂ. 50.00 ಲಕ್ಷಗಳಂತೆ ಒಟ್ಟು ರೂ. 94.50 ಕೋಟಿಗಳನ್ನು ಮಾನ್ಯ ಶಾಸಕರ ನೇತೃತ್ವದ ಟಾಸ್ಕ್‌ಫೋರ್ಸ್ ಸಮಿತಿಗೆ ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನ ಮಾಡಲು ಬಿಡುಗಡೆ ಮಾಡಲಾಗಿರುತ್ತದೆ. ಈ ಪೈಕಿ ರೂ.77.32 ಕೋಟಿ ವೆಚ್ಚವಾಗಿದ್ದು, ಇದರಡಿಯಲ್ಲಿ ಒಟ್ಟು 6905 ಕಾಮಗಾರಿಗಳನ್ನು ಕೈಗೊಂಡಿದ್ದು, ಈವರೆವಿಗೆ 6557 ಕಾಮಗಾರಿಗಳನ್ನು ಪೂರ್ಣಗೊಳಿಸಿ ನೀರು ಸರಬರಾಜು ಮಾಡಲಾಗುತ್ತಿದೆ.

2016-17ನೇ ಸಾಲಿಗೆ ಕುಡಿಯುವ ನೀರು ಸರಬರಾಜು ಯೋಜನೆಗಾಗಿ ರೂ. 1980.00 ಕೋಟಿಗಳನ್ನು ಆಯವ್ಯಯದಲ್ಲಿ ಹಂಚಿಕೆ ಮಾಡಲಾಗಿದ್ದು, ಈವರೆವಿಗೆ ರೂ. 1375.55 ಕೋಟಿಗಳನ್ನು ಬಿಡುಗಡೆಗೊಳಿಸಲಾಗಿದೆ. ಹಾಗೂ ರೂ. 765.92 ಕೋಟಿಗಳನ್ನು ವೆಚ್ಚ ಮಾಡಲಾಗಿದೆ.

ಸದ್ಯಕ್ಕೆ ಕುಡಿಯುವ ನೀರಿನ ತೀವ್ರ ಅಭಾವವಿರುವ 13 ಜಿಲ್ಲೆಗಳಲ್ಲಿನ 285 ಗ್ರಾಮಗಳಿಗೆ (ಸುಮಾರು 1.576 ಲಕ್ಷ ಜನಗಳಿಗೆ) ಟ್ಯಾಂಕರ್‌ನಿಂದ ನೀರನ್ನು ಒದಗಿಸಲಾಗುತ್ತಿದ್ದು, ಪ್ರತಿದಿನ 527 ಟ್ಯಾಂಕರ್ ನೀರನ್ನು ಒದಗಿಸಲಾಗುತ್ತಿದೆ.

ರಾಜ್ಯದ 139 ಬರಪೀಡಿತ ತಾಲ್ಲೂಕುಗಳಲ್ಲಿ ತುರ್ತು ಕುಡಿಯುವ ನೀರು ಕಾಮಗಾರಿಗಳಿಗಾಗಿ ಹಾಗೂ ಬಹುಗ್ರಾಮ ಕುಡಿಯುವ ನೀರು ಕಾಮಗಾರಿಗಳನ್ನು ಪೂರ್ಣಗೊಳಿಸಲು ಮತ್ತು ಪುನಃಶ್ಚೇತನಗೊಳಿಸಲು ರೂ.1733.27ಕೋಟಿ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಈ ಕೆಳಗಿನ ಅಂಶಗಳಿಗೆ ಸಲ್ಲಿಸಲಾಗಿದೆ.

1. ಜಲಮೂಲಕ್ಕಾಗಿ ಹೊಸ ಕೊಳವೆ ಬಾವಿಗಳಿಂದ ನೀರು ಸರಬರಾಜು ಮಾಡಲು ಪೈಪ್‌ಲೈನ್ ವಿಸ್ತರಣೆಗಾಗಿ ರೂ.201.50ಕೋಟಿ
2. ಹೊಸ ಜಲಮೂಲಗಳನ್ನು ಗುರುತಿಸಿ ಪಂಪ್ ಅಳವಡಿಸಿ ವಿದ್ಯುಚ್ಛಕ್ತಿ ಸಂಪರ್ಕ ಕಲ್ಪಿಸಲು ರೂ.421.13ಕೋಟಿ
3. ಹೈಡ್ರೋಫ್ರಾಕ್ಚರಿಂಗ್ ಮತ್ತು ಕೊಳವೆ ಬಾವಿ ಮರು ಆಳಗೊಳಿಸುವುದು ಮತ್ತು ಸ್ವಚ್ಛಗೊಳಿಸುವುದು



ರೂ.37.74ಕೋಟಿ

4. ಚಾಲ್ತಿಯಲ್ಲಿರುವ ಬರಪೀಡಿತ ಪ್ರದೇಶಗಳಲ್ಲಿನ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳನ್ನು ಪೂರ್ಣಗೊಳಿಸಲು ರೂ.1072.90 ಕೋಟಿ

ರಾಜ್ಯದ 189 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಿಗೆ ತುರ್ತು ಕೆಲಸಗಳಿಗಾಗಿ ಟಾಸ್ಕ್‌ಫೋರ್ಸ್ ನಡಿ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/450/ ಗ್ರಾಕುನೀನೈಇ / 2016 ಬೆಂಗಳೂರು ದಿನಾಂಕ: 22.11.2016ರಲ್ಲಿ ರೂ. 106.40 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ನಿರಂತರತೆ ಕಾಪಾಡಲು NREಉಂದಂತಹ ಯೋಜನೆಯುಲ್ಲಿ ಜಲ ಮರುಪೂರಣ ಯೋಜನೆಗಳನ್ನು ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಕೈಗೊಂಡಿದೆ.

ಮುಖಪುಟ ಲೇಖನ

# ರಕ್ಷಣಾ ಗೋಡೆ ಕಾಮಗಾರಿಗೆ ಡಾ. ನಾಗಾಂಬಿಕಾದೇವಿ ರವರಿಂದ ಚಾಲನೆ

– ಡಾ|| ಬೂವನಹಳ್ಳಿ ನಾಗರಾಜ್

ಬೆಳಗಾವಿ ತಾಲೂಕಿನ ಮಾಸ್ತಮರಡಿ ಗಾಮ ಪಂಚಾಯತಿ ವ್ಯಾಪ್ತಿಯ ಶಗಣಮಟ್ಟಿ ಗ್ರಾಮವು ಸುವರ್ಣ ವಿಧಾನ ಸೌಧದ ಸನಿಹದಲ್ಲಿದ್ದು, ಇತ್ತಿಚಿಗೆ ಪ್ರಗತಿ ಹಾದಿ ಹಿಡಿದ ಪುಟ್ಟ ಗ್ರಾಮವಾಗಿದೆ. ಸದರಿ ಗ್ರಾಮವು ಸುಮಾರು 185 ಕುಟುಂಬಗಳನ್ನು ಹೊಂದಿ ಸುಮಾರು 1650 ಜನಸಂಖ್ಯೆಯ ಹೊಂದಿರುತ್ತದೆ. ಈ ಗ್ರಾಮಕ್ಕೆ ಇಲಾಖಾ ವತಿಯಿಂದ 163 ಶೌಚಾಲಯಗಳನ್ನು ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ




ಖಾತರಿ ಯೋಜನೆ ಹಾಗೂ ಸ್ವಚ್ಛ ಭಾರತ ಯೋಜನೆಯಡಿ ನಿರ್ಮಿಸಲಾಗಿರುತ್ತದೆ. ಈ ಗ್ರಾಮಕ್ಕೆ ಬೆಳಗಾವಿ ಅಧಿವೇಶನಕ್ಕೆ ಬಂದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ|| ನಾಗಾಂಬಿಕಾದೇವಿರವರು ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಮುಖಾಮುಖಿಯಾಗಿ ಚರ್ಚಿಸಿದರು. ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಮಂಜೂರಾಗಿದ್ದ ಗ್ರಾಮದ ಸರ್ಕಾರಿ ಶಾಲಾ ಕಟ್ಟಡದ ಸಮೀಪದ ಹಳ್ಳಕ್ಕೆ ತಡೆಗೋಡೆ ರಕ್ಷಣಾ ಕಾಮಗಾರಿಗೆ ಚಾಲನೆ ನೀಡಿದರು. ಶುದ್ಧ ಕುಡಿಯುವ ನೀರಿನ ಘಟಕದ ಉಪಯುಕ್ತತೆ ಹಾಗೂ ನಿರ್ವಹಣೆ ಬಗ್ಗೆ ಪರಿಶೀಲಿಸಿ ಇದರ

ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಬೆಳಗಾವಿ ತಾಲ್ಲೂಕಿನ ಶಗಣಮಟ್ಟಿ ಗ್ರಾಮದ ಸರ್ಕಾರಿ ಶಾಲಾ ಕಟ್ಟಡದ ಸಮೀಪದ ಹಳ್ಳಕ್ಕೆ ತಡೆಗೋಡೆ ರಕ್ಷಣಾ ಕಾಮಗಾರಿಗೆ ಚಾಲನೆ ನೀಡಿದರು.

ನಿರ್ದೇಶಕರು, ಸುವರ್ಣ ಗ್ರಾಮೋದಯ, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ



ಸದುಪಯೋಗ ಪಡೆದುಕೊಳ್ಳಬೇಕೆಂದು ಗ್ರಾಮಸ್ಥರಿಗೆ ತಿಳಿ ಹೇಳಿದರು.

ಅಲ್ಲದೇ ಗ್ರಾಮದಲ್ಲಿ ಸ್ವಚ್ಛತಾ ಕಾರ್ಯಕ್ರಮದ ಶ್ರಮದಾನದ ಚಟುವಟಿಕೆಗಳಿಗೆ ಚಾಲನೆ ನೀಡಿ ಗ್ರಾಮವನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವ ಬಗ್ಗೆ ಹಾಗೂ ಇನ್ನು ಗ್ರಾಮದಲ್ಲಿ ನಿರ್ಮಿಸಿಕೊಳ್ಳಬೇಕಾಗಿರುವ 22 ಕುಟುಂಬಗಳು ಸಹ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲು ಪ್ರೇರೆಪಣೆ ನೀಡಿ ಹಾಗೂ ಶೌಚಾಲಯ ನಿರ್ಮಾಣಕ್ಕಾಗಿ ಸರ್ಕಾರದ ಸೌಲಭ್ಯವನ್ನು ವಿಸ್ತರಿಸಿ ಸದರಿ ಕುಟುಂಬಗಳು ಸಹ ಶೌಚಾಲಯ ಹೊಂದಿ ಅವುಗಳನ್ನು ಉಪಯೋಗಿಸುವಂತೆ ಮಾಡಿ ಬಯಲು ಬಹಿರ್ದೇಸೆ ಮುಕ್ತ ಗ್ರಾಮವನ್ನಾಗಿ ಮಾಡಲು ಹಾಗೂ ಗ್ರಾಮದೊಳಗಿನ ರಸ್ತೆಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿ ಪಡಿಸಲು ಜಿಲ್ಲಾ ಪಂಚಾಯತ ಉಪಕಾರ್ಯದರ್ಶಿ ಶ್ರೀ ಮುಳ್ಳಳ್ಳಿ ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದರು.

ಸದರಿ ಗ್ರಾಮದಲ್ಲಿ ನಮ್ಮ ಗ್ರಾಮ ನಮ್ಮ ರಸ್ತೆ ಯೋಜನೆ ಹಂತ-3 ರ ಕಾಮಗಾರಿಯ ಅನುಷ್ಠಾನವು ಸಮರ್ಪಕವಾಗಿ ನಡೆಯುತ್ತಿಲ್ಲದಿರುವುದನ್ನು ಪರಿಶೀಲಿಸಿದ ಪ್ರಧಾನ ಕಾರ್ಯದರ್ಶಿಗಳು ಗುಣಮಟ್ಟದ ಕಾಮಗಾರಿ ಯನ್ನು ಅನುಷ್ಠಾನಕ್ಕೆ ತರುವಂತೆ ಸ್ಥಳದಲ್ಲಿದ್ದ ಕಾರ್ಯಪಾಲಕ ಅಭಿಯಂತರರಿಗೆ ಸೂಚನೆ ನೀಡಿದರು. ಹಾಗೂ ಈಗ ಆಗಿರುವ ಕಾಮಗಾರಿಯ ಗುಣಮಟ್ಟವನ್ನು ಪರಿಶೀಲಿಸಿ ವರದಿ ನೀಡಲು ಪಿ.ಎಮ್.ಜಿ.ಎಸ್.ವೈ ಯೋಜನೆಯ ರಾಜ್ಯ ಗುಣಮಟ್ಟ ನಿಯಂತ್ರಕರಾದ ಶ್ರೀ ಕೃಷ್ಣಮೂರ್ತಿಯವರಿಗೆ ಸೂಚಿಸುವಂತೆ ಡಾ॥ ಬೂವನಹಳ್ಳಿ ನಾಗರಾಜ್, ನಿರ್ದೇಶಕರು, ಸುವರ್ಣ ಗ್ರಾಮೋದಯ ಇವರಿಗೆ ಆದೇಶ ನೀಡಿದರು.

ಶಗಣಮಟ್ಟಿ ಗ್ರಾಮದ ಪ್ರವಾಸದ ವೇಳೆ ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಾದ ಡಾ॥ ನಾಗಾಂಬಿಕದೇವಿಯವರು ಪಾಠಶಾಲೆಗೆ ಭೇಟಿ ನೀಡಿ ಮಕ್ಕಳ ಪಾಠ ಪ್ರವಚನಗಳ ಹಾಗೂ ಅಕ್ಷರ ದಾಸೋಹದ ಗುಣಮಟ್ಟದ ಬಗ್ಗೆ



ಪರಿಶೀಲಿಸಿದರು. ಶಾಲೆಗಳಿಗೆ ಪೂರೈಸಿರುವ ಗಣಕಯಂತ್ರಗಳನ್ನು ಉಪಯೋಗಿಸದೇ ಇರುವುದಕ್ಕೆ ಅಸಮಧಾನ ವ್ಯಕ್ತಪಡಿಸಿ ಶಾಲಾ ಮಕ್ಕಳಿಗೆ ಗಣಕಯಂತ್ರದ ತರಬೇತಿಯನ್ನು ಚಾಚು ತಪ್ಪದೇ ನೀಡಬೇಕೆಂದು ಶಾಲಾ ಮುಖ್ಯೋಪಾಧ್ಯರಿಗೆ ಸೂಚನೆ ನೀಡಿದರು. ಇವರ ಶಗನಮಟ್ಟಿ ಗ್ರಾಮದ ಭೇಟಿಯ ಸಂದರ್ಭದಲ್ಲಿ ಸ್ವಚ್ಛ ಭಾರತ ಅಭಿಯಾನದ ಅಪರ ನಿರ್ದೇಶಕರಾದ ಶ್ರೀ ಕೃಷ್ಣಪ್ಪ ಮತ್ತು ಬೆಳಗಾವಿ ಪಿ.ಆರ್.ಇ.ಡಿ. ವಿಭಾಗ ಶ್ರೀ ಗಾಣಿಗೇರ ಇವರು ಉಪಸ್ಥಿತರಿದ್ದರು.

ಲೇಖನ

# ಬರಗಾಲ ನಿರ್ವಹಣೆಗೆ ನರೇಗಾ ಯೋಜನೆ

– ಗಂಗಾಧರ್ ಸ್ವಾಮಿ ಎಸ್.
– ನಾಗೇಂದ್ರಕುಮಾರ ಜೆ. ಟಿ.

ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಬರದಿಂದ ಜನಸಾಮನ್ಯರು ತತ್ತರಿಸಿದ್ದಾರೆ. ಜಾನುವಾರುಗಳಿಗೆ ಮೇವು ಮತ್ತು ಕುಡಿಯುವ ನೀರಿಗೆ ತತ್ವಾರ ಎದುರಾಗಿದೆ. ಜನ ಸಾಮಾನ್ಯರು ಜೀವನ ನಿರ್ವಹಣೆಗೆ ಉದ್ಯೋಗ ಅರಿಸಿ ನಗರಗಳತ್ತ ಗುಳೆ ಹೋಗುತ್ತಿದ್ದಾರೆ. ಗುಳೆ ತಡೆಯಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಗ್ರಾಮ/ಗ್ರಾಮಪಂಚಾಯಿತಿ ಮಟ್ಟದಲ್ಲಿ ಬರನಿರ್ವಹಣೆ ಕಾಮಗಾರಿಗಳನ್ನು ಅನುಷ್ಠಾನಿಸಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ. ದುಡಿಯುವ ಕೈಗಳಿಗೆ ಅಕುಶಲ ಉದ್ಯೋಗವನ್ನು ನೀಡಿ ಬರಗಾಲವನ್ನು ಸಮರ್ಪಕವಾಗಿ ನಿರ್ವಹಿಸಲು ಯೋಜನೆ ಸಹಕಾರಿಯಾಗುತ್ತಿದೆ.

ರಾಜ್ಯದಲ್ಲಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಾಗೃತಿ ಮೂಡಿಸಲು ರೋಜ್‌ಗಾರ್ ವಾಹಿನಿಯನ್ನು ಸಿದ್ಧಪಡಿಸಿ ಕಾರ್ಯಕ್ರಮಗಳನ್ನು ಕೈಗೊಂಡು ವ್ಯಾಪಕ ಪ್ರಚಾರ ಮಾಡಲಾಗಿದೆ.



ಬರದ ಛಾಯೆಯಿಂದ ಭೂಮಿಯಲ್ಲಿ ನೀರಿನ ತೇವಾಂಶ ಕುಸಿದು ಬಿತ್ತಿದ ಬೆಳೆ ಫಸಲು ನೀಡದೆ ಸೊರಗಿದೆ. ಬೆಳೆಯನ್ನೆ ನಂಬಿದ ಗ್ರಾಮೀಣ ಜನರಿಗೆ ಬರಬಡಿದಂತಾಗಿದೆ. ದನಕರುಗಳಿಗೆ ಮೇವು ಒದಗಿಸಲು ಸಾಧ್ಯವಾಗದ ಪರಿಸ್ಥಿತಿಯಲ್ಲಿದ್ದಾರೆ. ಕುಡಿಯುವ ನೀರಿನ ಕೊಳವೆ ಬಾವಿಗಳಲ್ಲಿ ನೀರಿನ ಇಳುವರಿ ಕುಸಿದು ನೀರಿಗೂ ಸಮಸ್ಯೆ ಎದುರಾಗಿದೆ. ಇವುಗಳಿಂದ ರಾಜ್ಯದ ಹಳ್ಳಿಗಳ ಕುಟುಂಬಗಳು ಜೀವನ ನಿರ್ವಹಣೆಗೆ ಪರ್ಯಾಯ ಮಾರ್ಗಗಳನ್ನು ಹುಡುಕಲು ನಗರಗಳತ್ತ ವಲಸೆ ಹೋಗುವ ಪ್ರವೃತ್ತಿ ಸಾಮಾನ್ಯವಾಗಿ ಕಂಡುಬರುತ್ತಿದೆ.

ಜಂಟಿ ನಿರ್ದೇಶಕರು (ತೋಟಗಾರಿಕೆ) ಮತ್ತು ರಾಜ್ಯ ಐಇಸಿ ಸಂಯೋಜಕರು,
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು

## ಮಹಾತ್ಮಗಾಂಧಿ ನರೇಗಾ ಯೋಜನೆಯ ಬರಗಾಲ ನಿರ್ವಹಣೆ ಕಾರ್ಯಚಟುವಟಿಕೆಗಳು:

ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಬೇಡಿಕೆ ಆಧರಿಸಿ ಸ್ಥಳೀಯವಾಗಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಯ ಕಾಮಗಾರಿಗಳಾದ ಕೆರೆ ಅಭಿವೃದ್ಧಿ ಮತ್ತು ಸಾಂಪ್ರದಾಯಿಕ ನೀರಿನ ಮೂಲಗಳನ್ನು ಅಭಿವೃದ್ಧಿ ಪಡಿಸಲು ಈಗಾಗಲೇ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಿಂದ ಜಿಲ್ಲೆಗಳಿಗೆ ಸೂಚನೆ ನೀಡಲಾಗಿದೆ. ಅದರಲ್ಲಿ ವಿಶೇಷವಾಗಿ ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡ, ಮಹಿಳೆಯರು ಮತ್ತು ದುರ್ಬಲ ವರ್ಗದವರಿಗೆ ಹೆಚ್ಚಿನ ಉದ್ಯೋಗ ಒದಗಿಸಲು ನಿರ್ದೇಶನವನ್ನು ಜಿಲ್ಲೆಗಳಿಗೆ ನೀಡಲಾಗಿದೆ.

## ಐಇಸಿ ಕಾರ್ಯಕ್ರಮ:

ಜನರಿಗೆ ಯೋಜನೆಗೆ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸುವ ಅಗತ್ಯತೆ ಕಂಡುಬಂದಿದೆ. ಇದಕ್ಕಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ವ್ಯಾಪಕ ಮತ್ತು ಪರಿಣಾಮಕಾರಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳನ್ನು ಕೈಗೊಳ್ಳಲು ಸೂಚನೆ ನೀಡಿದ್ದಾರೆ. ಸಚಿವರ ಸೂಚನೆಯಂತೆ ಗ್ರಾಮೀಣಾಭಿವೃದ್ಧಿ ಆಯುಕ್ತಾಲಯದಿಂದ ಮಾಹಿತಿ, ಶಿಕ್ಷಣ ಮತ್ತು ಸಂವಹನ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ. ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮ ಕುರಿತ ಜಾಗೃತಿ ಮೂಡಿಸಲು ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಆಯ್ದ ಗ್ರಾಮಪಂಚಾಯಿತಿ ಕೇಂದ್ರ ಸ್ಥಾನಗಳಲ್ಲಿ ಹೋರ್ಡಿಂಗ್‌ಗಳನ್ನು ಅಳವಡಿಸಲಾಗಿದೆ.





ರಾಜ್ಯದ ಆಕಾಶವಾಣಿ ಕೇಂದ್ರಗಳ ಮೂಲಕ ವೈಯಕ್ತಿಕ ಕಾಮಗಾರಿಗಳಿಗೆ ಇರುವ ಅವಕಾಶಗಳ ಕುರಿತು ಜಿಂಗಲ್ಸ್‌ಗಳನ್ನು ಮೂರು ತಿಂಗಳ ಕಾಲ ದಿನವೊಂದಕ್ಕೆ ಐದು ಬಾರಿ ಪ್ರಸಾರ ಮಾಡಲಾಗುತ್ತಿದೆ. ಮಹಾತ್ಮಗಾಂಧಿ ನರೇಗಾ ಯೋಜನೆಯ ಸಂಕ್ಷಿಪ್ತ ಮಾಹಿತಿಯ ರಿಂಗ್‌ಬ್ಯಾಕ್ ಟೋನ್‌ನ್ನು ಸಿಯುಜಿ ಸಿಮ್‌ಗಳಿಗೆ ಒಂದು ವರ್ಷದ ಅವಧಿಗೆ ಚಂದಾದಾರವನ್ನು ಮಾಡಲಾಗಿದೆ. ಜಿಲ್ಲೆಗಳಿಂದ ಗ್ರಾಮ / ಗ್ರಾಮಪಂಚಾಯಿತಿ ಮಟ್ಟದಲ್ಲಿ 18835 ರೋಜ್‌ಗಾರ್ ಕಾರ್ಯಕ್ರಮಗಳನ್ನು ನಡೆಸಿ ಗ್ರಾಮೀಣ ಜನರಿಗೆ ಮಹಾತ್ಮಗಾಂಧಿ ನರೇಗಾ ಯೋಜನೆ ಕುರಿತ ಜಾಗೃತಿ ಮತ್ತು ಅಕುಶಲ ಕಾರ್ಮಿಕರಿಂದ ಉದ್ಯೋಗ ಬೇಡಿಕೆಯನ್ನು ಪಡೆದಿದ್ದಾರೆ.

ಇದಲ್ಲದೆ ಸಮಸ್ಯಾತ್ಮಕ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಜಾಗೃತಿ ಮೂಡಿಸಲು ಜಿಲ್ಲಾ ಪಂಚಾಯಿತಿ ಯೋಜನೆಯಡಿ ಅರಿವು ಮೂಡಿಸಲು ರೋಜ್‌ಗಾರ್ ವಾಹಿನಿಯನ್ನು ಸಿದ್ಧಪಡಿಸಿ ಗ್ರಾಮ/ಗ್ರಾಮಪಂಚಾಯಿತಿ ಮಟ್ಟದಲ್ಲಿ 1448 ಕಾರ್ಯಕ್ರಮಗಳನ್ನು ಕೈಗೊಂಡು ವ್ಯಾಪಕ ಪ್ರಚಾರ ಮಾಡಿದ್ದಾರೆ.

**ದಿನಾಂಕ:29/11/2016ರಲ್ಲಿದ್ದಂತೆ**

| ವರ್ಷ | ಪ್ರಾರಂಭಿಕ ಶಿಲ್ಕು (ಕೋಟಿಗಳಲ್ಲಿ) | ಬಿಡುಗಡೆ | | | ಒಟ್ಟು ಲಭ್ಯವಿರುವುದು (ಕೋಟಿಗಳಲ್ಲಿ) | ವೆಚ್ಚ (ಕೋಟಿಗಳಲ್ಲಿ) | ಶೇಕಡಾವಾರು ವೆಚ್ಚ | ಒಟ್ಟು ಮಾನವ ದಿನಗಳು (ಕೋಟಿಗಳಲ್ಲಿ) | ಮಹಿಳೆಯರು (ಕೋಟಿಗಳಲ್ಲಿ) | ಪ.ಜಾ, ಪ.ಪಂ (ಕೋಟಿಗಳಲ್ಲಿ) | ಸರಾಸರಿ ಮಾನವ ದಿನಗಳು |
|---|---|---|---|---|---|---|---|---|---|---|---|
| | | ಕೇಂದ್ರ (ಕೋಟಿಗಳಲ್ಲಿ) | ರಾಜ್ಯ (ಕೋಟಿಗಳಲ್ಲಿ) | ಇತರೆ (ಕೋಟಿಗಳಲ್ಲಿ) | | | | | | | |
| 2006-07 | 78.49 | 242.5 | 20.34 | 0.00 | 341.33 | 251.9 | 73.80 | 2.22 | 1.12 | 1.08 | 41 |
| 2007-08 | 124.63 | 268.52 | 25.54 | 0.56 | 419.25 | 236.69 | 56.46 | 1.97 | 0.99 | 0.97 | 36 |
| 2008-09 | 235.65 | 379.39 | 43.98 | 8.75 | 667.77 | 357.87 | 53.59 | 2.88 | 1.45 | 1.19 | 32 |
| 2009-10 | 353.42 | 2407.08 | 253.71 | 24.68 | 3038.89 | 2216.93 | 72.95 | 20.04 | 6.85 | 5.07 | 57 |
| 2010-11 | 821.87 | 1941.55 | 143.53 | 49.46 | 2956.41 | 1860.47 | 62.93 | 10.98 | 4.91 | 2.80 | 49 |
| 2011-12 | 1095.93 | 662.87 | 159.06 | 37.81 | 1955.68 | 1640.99 | 83.90 | 7.01 | 3.23 | 1.68 | 42 |
| 2012-13 | 314.68 | 1231.94 | 205.99 | 36.15 | 1788.76 | 1457.03 | 81.45 | 6.21 | 2.87 | 1.60 | 46 |
| 2013-14 | 320.43 | 1596.07 | 265.03 | 11.36 | 2192.89 | 2095.22 | 95.54 | 7.18 | 3.34 | 1.71 | 50 |
| 2014-15 | 117.43 | 1568.79 | 138.82 | 4.25 | 1829.29 | 1683.65 | 92.04 | 4.35 | 2.03 | 1.05 | 40 |
| 2015-16 | 180.85 | 991.55 | 726.18 | 5.81 | 1904.40 | 1824.90 | 95.83 | 5.99 | 2.83 | 1.51 | 48 |
| 2016-17 | **-41.13** | **1499.23** | **660.78*** | **3.70** | **2122.57** | **1959.98** | **92.33** | **5.42** | **2.56** | **1.34** | **42** |

ಜಾಬ್‌ಕಾರ್ಡ್ ಪರಿಶೀಲನೆ ಮತ್ತು ಕುಟುಂಬವಾರು ಉದ್ಯೋಗ ಒದಗಿಸುವ ಮಾಹಿತಿಯನ್ನು ನೀಡಲು ಜಿಲ್ಲಾ ಮತ್ತು ತಾಲ್ಲೂಕು ಸಂಯೋಜಕರು ಗ್ರಾಮಪಂಚಾಯಿತಿ ಸಿಬ್ಬಂದಿಗಳನ್ನು ಸೇರಿಸಿಕೊಂಡು 5124 ಮನೆ ಮನೆ ಭೇಟಿ ನೀಡಿ ಕಾರ್ಯಕ್ರಮವನ್ನು ನಡೆಸಲಾಗಿದೆ. ಇದಲ್ಲದೆ ಜಿಲ್ಲಾ ಯೋಜನಾ ಕಾರ್ಯಕ್ರಮ ಅಧಿಕಾರಿಗಳು ಸ್ಥಳೀಯವಾಗಿ ಐಇಸಿ ಕಾರ್ಯಕ್ರಮಗಳನ್ನು ರೂಪಿಸಿ ಜಾಗೃತಿ ಮೂಡಿಸಲು ಅಗತ್ಯ ಕ್ರಮಕೈಗೊಳ್ಳುತ್ತಿದ್ದಾರೆ.



ಬರನಿರ್ವಹಣೆ ಕಾಮಗಾರಿ: ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಮಳೆಯಾಶ್ರಿತ ಪ್ರದೇಶದಲ್ಲಿ ಅಂತರ್ಜಲ ವೃದ್ಧಿಸುವ ಬಾಳಿಕೆಯ ಆಸ್ತಿಗಳನ್ನು ಸೃಜಿಸಲು ಅಗಾದ ಅವಕಾಶ ನೀಡಲಾಗಿದೆ. ಈ ಕಾಮಗಾರಿಗಳು ಲಭ್ಯವಿರುವ ಜಲಾನಯನ ಪ್ರದೇಶ, ಇಳಿಜಾರು ಪ್ರದೇಶದ ಆಧಾರದ ಮೇಲೆ ಚಟುವಟಿಕೆಗಳನ್ನು ತಯಾರಿಸುವುದು ಮತ್ತು ಇವು ಯೋಜನೆಯ ಮೂಲ ಉದ್ದೇಶಗಳನ್ನು ಈಡೇರಿಸಲು ಮಹಾತ್ಮ ಗಾಂಧಿ ನರೇಗಾ ಯೋಜನೆಯ ಗರಿಷ್ಠ ಹಣವನ್ನು ಬಳಸಬಹುದಾಗಿದೆ.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮಗಳಲ್ಲಿ ನಮ್ಮೂರ ಕೆರೆ ಮತ್ತು ನಮ್ಮ ಹಳ್ಳಿ ನಮ್ಮ ನೀರಿಗೆ ಹೆಚ್ಚಿನ ಒತ್ತು ನೀಡಿದ್ದು ಗ್ರಾಮಪಂಚಾಯಿತಿ ಮಟ್ಟದಲ್ಲಿ ಜಾನುವಾರು ನೀರು ಪೂರೈಸಲು ನೀರಿನ ತೊಟ್ಟಿಗಳನ್ನು ನಿರ್ಮಿಸಲಾಗುತ್ತಿದೆ.

ಕುಡಿಯುವ ನೀರಿನ ಕೊಳವೆ ಬಾವಿಗಳ ಸುತ್ತ ಮುರುಪೂರಣ ಕಾಮಗಾರಿ ಅನುಷ್ಠಾನಿಸಿ ಮಳೆ ನೀರನ್ನು ಇಂಗಿಸಿ ಕೊಳವೆ ಬಾವಿಗಳನ್ನು ಜೀವಂತಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಇದಲ್ಲದೆ ಹಳ್ಳಗಳಲ್ಲಿ ರಭಸವಾಗಿ ಹರಿಯುವ ನೀರನ್ನು ತಡೆದು ತೆವಳುವಂತೆ ಮಾಡಲು ಬಹುಕಮಾನು ತಡೆಗೋಡೆಗಳನ್ನು ನಿರ್ಮಿಸಲಾಗುತ್ತಿದೆ. ವೇದಾವತಿ, ಪಾಲರ್ ಮತ್ತು




ಕುಮುದಾವತಿ ನದಿಗಳನ್ನು ಪುನಶ್ಚೇತನ ಗೊಳಿಸಲಾಗುತ್ತಿದ್ದು ನದಿ ನೀರನ್ನು ಹಂತ ಹಂತವಾಗಿ ಭೂಮಿಯಲ್ಲಿ ಇಂಗಿಸಿ ಭೂಮಿಯಲ್ಲಿ ಅಂತರ್ಜಲವನ್ನು ವೃದ್ಧಿಸಲು ಕ್ರಮಕೈಗೊಳ್ಳಲಾಗಿದೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಕೂಡ ರಾಜ್ಯದ 18 ಜಿಲ್ಲೆಗಳ 60 ಬ್ಲಾಕ್‌ಗಳು ನೈಸರ್ಗಿಕ ಸಂಪನ್ಮೂಲವನ್ನು ಅತಿ ಬಳಕೆ ಮಾಡಿರುವ (Over Exploited Blocks) ಮತ್ತು 15 ಜಿಲ್ಲೆಗಳ 21 ಬ್ಲಾಕ್‌ಗಳನ್ನು ನೈಸರ್ಗಿಕ ಸಂಪನ್ಮೂಲಗಳನ್ನು ಅತಿ ಬಳಕೆ ಅಂಚಿನಲ್ಲಿರುವ ಬ್ಲಾಕ್‌ಗಳನ್ನು (Critical Blocks) ಗುರುತಿಸಿ ಈ ಬ್ಲಾಕ್‌ಗಳಲ್ಲಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕಾಮಗಾರಿಗಳನ್ನು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಪ್ರಧಾನ್ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY) ಹಾಗೂ ಸಮಗ್ರ ಜಲಾನಯನ ನಿರ್ವಹಣೆ ಕಾರ್ಯಕ್ರಮಗಳನ್ನು ಒಗ್ಗೂಡಿಸುವ ಮೂಲಕ ಅನುಷ್ಠಾನಿಸಲು ಸೂಚಿಸಿರುತ್ತದೆ.

ಮುಖ್ಯಮಂತ್ರಿಗಳ ಬರ ಪರಿಶೀಲನೆ ಪ್ರವಾಸ: ಸನ್ಮಾನ್ಯ ಮುಖ್ಯಮಂತ್ರಿಗಳ ಬರ ನಿರ್ವಹಣೆಯಡಿ ಜಿಲ್ಲಾಡಳಿತ ವಿವಿಧ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳನ್ನು ಪರಿಶೀಲಿಸಲು ಜಿಲ್ಲೆಗಳ ಪ್ರವಾಸ ಕೂಡ ನಡೆಸಿದ್ದಾರೆ. ಅದೇ ರೀತಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ತಮ್ಮ ಜಿಲ್ಲೆಗಳಲ್ಲಿ ಬರ ನಿರ್ವಹಣೆಯಡಿ ಮಹಾತ್ಮಗಾಂಧಿ ನರೇಗಾ ಯೋಜನೆ ಕಾಮಗಾರಿಗಳನ್ನು ಪರಿಶೀಲಿಸಿ ಅನುಷ್ಠಾನ ಅಧಿಕಾರಿಗಳಿಗೆ ಸಮರ್ಪಕವಾಗಿ ನಿರ್ವಹಿಸಲು ಸೂಚನೆಗಳನ್ನು ನೀಡಿರುತ್ತಾರೆ.

ಮಹಾತ್ಮಗಾಂಧಿ ನರೇಗಾ ಯೋಜನೆ ಕಾಮಗಾರಿ ಅನುಷ್ಠಾನದಿಂದ ಗ್ರಾಮೀಣ ಪ್ರದೇಶದಲ್ಲಿ ಬಾಳಿಕೆಯ ಆಸ್ತಿ ಸೃಜನೆಯಾಗುತ್ತಿದೆ. ಆಸ್ತಿ ಸೃಜನೆಯಿಂದ ಅಕುಶಲ ಕಾರ್ಮಿಕರಿ ಉದ್ಯೋಗ ಲಭ್ಯವಾಗಿ ಕುಟುಂಬಗಳ ನಿರ್ವಹಣೆಗೆ ಆರ್ಥಿಕ ನೆರುವ ಲಭ್ಯವಾಗಿ ಗುಳೆ ಪ್ರಮಾಣವನ್ನು ತಗ್ಗಿಸಿ ಬರಗಾಲವನ್ನು ನಿರ್ವಹಿಸಲಾಗುತ್ತಿದೆ.

ಲೇಖನ

# ಪೋಷಕ ಕಾಲುವೆಗಳ ನಿರ್ವಹಣೆ



**ಮಧುಸೂಧನ್ ಸಿ. ಆರ್.**

ಚಿತ್ರದುರ್ಗ ಜಿಲ್ಲೆಯಲ್ಲಿ ಸದಾ ಜೀವ ಜಲಕ್ಕಾಗಿ ಪರದಾಟ. ಈ ವಿಷಯವನ್ನು ಮನಗಂಡು ಕೆರೆಗಳ ಪೋಷಕ ಕಾಲುವೆಗಳನ್ನು ಗುರುತಿಸಿ ಅವುಗಳ ಪೋಷಣೆ ಮಾಡುವುದರ ಮೂಲಕ ಬರ ಪರಿಹಾರ ಕಾಮಗಾರಿಗೆ ಒತ್ತು ನೀಡಲಾಯಿತು.

ಗ್ರಾಮೀಣ ಜನರಿಗೆ ಕೆರೆಗಳು ಜೀವನಾಡಿಯಿದ್ದಂತೆ, ಕೆರೆಗಳಿಗೆ ಪೋಷಕ ಕಾಲುವೆಗಳು ರಕ್ತನಾಡಿಯಿದ್ದಂತೆ, ಕೆರೆಗಳಿಗೆ ನೀರು ಸರಾಗವಾಗಿ ಹರಿದು ಬರಲು ಸಾಧ್ಯವಾಗಬೇಕಾದರೆ ಪೋಷಕ ಕಾಲುವೆಗಳು ಮೊದಲು ಅಭಿವೃದ್ಧಿಗೊಳ್ಳಬೇಕು. ಆದರೆ ಕೆರೆಗಳನ್ನು ಅಭಿವೃದ್ಧಿಪಡಿಸುತ್ತೇವೆ ಎಂದು ಹೇಳಿಕೊಳ್ಳುವ ಇಲಾಖೆಗಳು ಕೆರೆಗಳಲ್ಲಿ ಹೂಳು ತೆಗೆದು ಸುಮ್ಮನಾಗಿ ಬಿಡುತ್ತಿವೆ. ಪೋಷಕ ಕಾಲುವೆಗಳ ಅಭಿವೃದ್ಧಿಯ ಗೋಜಿಗೆ ಹೋಗುತ್ತಿಲ್ಲ. ಇದರಿಂದಾಗಿ ಪೋಷಕ ಕಾಲುವೆಗಳು ಒತ್ತುವರಿ ಹೂಳು ಹಾಗೂ ಗಿಡಗಂಟೆಗಳಿಂದಾಗಿ ತುಂಬಿ ಹೋಗಿವೆ. ಹೀಗಾಗಿ ನೀರು ಕೆರೆಗಳಿಗೆ ಸಮರ್ಪಕವಾಗಿ ಹರಿಯಲು ಸಾಧ್ಯವಾಗದೆ, ಕೆರೆಗಳಲ್ಲಿ ನೀರು ಸಂಗ್ರಹಗೊಳ್ಳದೆ ಪೋಲಾಗುತ್ತಿದೆ.



ಪೋಷಕ ಕಾಲುವೆಗಳು ಅಭಿವೃದ್ಧಿಯಾಗದೇ ಕೆರೆಗಳಿಗೆ ನೀರು ಬಾರದು ಎಂಬುದನ್ನು ಅರಿತಿದ್ದ ಚಿತ್ರದುರ್ಗ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ನಿತೇಶ್ ಪಾಟೀಲ್ ಅವರು ಜಿಲ್ಲೆಯ ಕೆರೆಗಳ ಪೋಷಕ ಕಾಲುವೆಗಳ ಅಭಿವೃದ್ಧಿಗೆ ಟೊಂಕಕಟ್ಟಿ ನಿಂತರು. ಎಲ್ಲರಂತೆ ಇವರು ಕೆರೆಗಳಲ್ಲಿ ಹೂಳು ತೆಗೆದು ಸುಮ್ಮನಾಗಲಿಲ್ಲ. ಮೊದಲಿಗೆ ಕೆರೆಗಳ ಪೋಷಕ ಕಾಲುವೆಗಳನ್ನು ಗುರುತು ಮಾಡಿ ಅವುಗಳ ಸ್ಥಿತಿಗತಿಗಳನ್ನು ಅಧ್ಯಯನ ಮಾಡಿ ಕೆರೆಗೆ ನೀರು ವ್ಯವಸ್ಥಿತವಾಗಿ ಹರಿದು ಬರಲು ಬೇಕಾಗಿರುವ ವ್ಯವಸ್ಥೆಗಳನ್ನು ಮಾಡಿದರು. ಎರಡು ಮೂರು ದಶಕಗಳಿಂದಲು ಹೂಳು, ಗಿಡಗಂಟೆಗಳನ್ನು ತೆಗೆಯದಿದ್ದರಿಂದ ಈ ಕಾಲುವೆಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿದ್ದವು. ಇವುಗಳ ಮಾರ್ಗಗಳನ್ನು ಪತ್ತೆ ಹಚ್ಚುವುದು ಸಹ ದುಸ್ಥರವಾಗಿತ್ತು. ದುರ್ಗಮವಾಗಿದ್ದ ಕೆರೆಕಾಲುವೆಗಳ ಹಾದಿಯನ್ನು ಸುಗಮವಾಗಿಸುವ ನಿಟ್ಟಿನಲ್ಲಿ ಯಶಸ್ವಿಯಾದರು. ನೀರಿನ ಹರಿವಿಗೆ ಯಾವ ಅಡೆತಡೆಗಳಿಲ್ಲದೆ ನೇರವಾಗಿ ಕೆರೆಗಳಿಗೆ ತಲುಪುವ ದಾರಿಯನ್ನು ತೋರಿದರು.

ಜಿಲ್ಲಾ ಸಹಾಯಕ ಐ.ಇ.ಸಿ ಸಂಯೋಜಕ, ಜಿಲ್ಲಾ ಪಂಚಾಯತಿ, ಚಿತ್ರದುರ್ಗ

## ಯೋಜನೆ ತಯಾರಿ

ಚಿತ್ರದುರ್ಗ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ಇಲಾಖೆ / ಸಣ್ಣ ನೀರಾವರಿ ಇಲಾಖೆ ಮತ್ತು ಜಿಲ್ಲಾ ಪಂಚಾಯಿತಿ ವ್ಯಾಪ್ತಿಯಲ್ಲಿನ ಕೆರೆಗಳ ನಕ್ಷೆಯನ್ನು ತೆಗೆದುಕೊಂಡು ತಾಂತ್ರಿಕ ತಂಡಗಳೊಂದಿಗೆ ಸರ್ವೆ ಕಾರ್ಯ ಆರಂಭಿಸಲಾಯಿತು. ಕೆರೆಯೊಂದಕ್ಕೆ ಎಷ್ಟು ಪೋಷಕ ಕಾಲುವೆಗಳಿವೆ, ಅವುಗಳು ಎಲ್ಲಿಂದ ಹರಿದು ಬರುತ್ತವೆ, ಗುಡ್ಡಗಳಿಂದ ಎಷ್ಟು ಪೋಷಕ ಕಾಲುವೆಗಳು ಹುಟ್ಟುತ್ತವೆ, ಕಾಲುವೆಗಳ ಒತ್ತುವರಿ, ಸಂಗ್ರಹ ಗೊಂಡಿರುವ ಗಿಡಗಂಟೆಗಳು ಹಾಗೂ ಹೂಳಿನ ಪ್ರಮಾಣ, ಗುಡ್ಡದಿಂದ ಹರಿಯುವ ನೀರು ಬೇರೆಡೆಗೆ ಹೋಗುತ್ತಿರುವ ಪ್ರದೇಶಗಳ ಪತ್ತೆ ಹೀಗೆ ಕಾಲುವೆಯ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿಕೊಂಡು ಪೋಷಕ ಕಾಲುವೆಗಳನ್ನು ಯಾವ ರೀತಿ ಅಭಿವೃದ್ಧಿ ಪಡಿಸಬೇಕು ಎಂಬ ಬಗ್ಗೆ ಸ್ಥಳೀಯರೊಂದಿಗೆ ಚರ್ಚಿಸಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸಿಕೊಂಡು ಕೆಲಸ ಆರಂಭಿಸಲಾಯಿತು.



## ಕೆರೆಗೆ ಮುನ್ನ ಪೋಷಕ ಕಾಲುವೆಗಳನ್ನು ಅಭಿವೃದ್ಧಿ : ಐಇಸಿ ಚಟುವಟಿಕೆ

ಹ್ಯಾಂಡ್ ಮೈಕ್ ಹಿಡಿದು ಗ್ರಾಮಗಳಲ್ಲಿ ಸಂಚರಿಸಿ ಉದ್ಯೋಗ ಖಾತರಿಯಡಿ ಗ್ರಾಮೀಣ ವಾಸಿಗಳಿಗೆ ಒಂದು ಆರ್ಥಿಕ ವರ್ಷದಲ್ಲಿ 100 ಮಾನವ ದಿನಗಳ ಉದ್ಯೋಗ ಒದಗಿಸುವ ಬಗ್ಗೆ ಜಾಗೃತಿ ಮೂಡಿಸಲಾಯಿತು.

ಬೇಡಿಕೆ ಸಲ್ಲಿಸಿದ 15 ದಿನದೊಳಗೆ ಕೂಲಿಕಾರರ ಖಾತೆಗೆ ನೇರವಾಗಿ ಹಣ ವರ್ಗಾವಣೆ ಕುರಿತು ಜಾಗೃತಿ ಮೂಡಿಸಲಾಯಿತು.



ಗ್ರಾಮದ ಪ್ರಮುಖ ಸ್ಥಳದಲ್ಲಿ ಗುಂಪಾಗಿ ಜನರನ್ನು ಸೇರಿಸಿ ದೂರು ಮತ್ತು ವಿಲೇವಾರಿ ಮಾಡುವ ಕೆಲಸ ಮತ್ತು ಜನರಿಂದ ಕೆಲಸದ ಬೇಡಿಕೆ ಪಡೆದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಉದ್ಯೋಗ ಬೇಡಿಕೆ ಆಧಾರದ ಮೇಲೆ ಕೆಲಸ ಆರಂಭಿಸಲು ಸೂಚನೆಗಳನ್ನು ನೀಡಲಾಯಿತು.

ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕಾಮಗಾರಿಯಡಿ ಕೆರೆ ಅಭಿವೃದ್ಧಿಗಿಂತ ಮೊದಲು ಕೆರೆಗೆ ಹರಿದು ಬರುವ ಪೊಷಕ ಕಾಲುವೆಗೆ ಮೊದಲ ಆದ್ಯತೆ ನೀಡಲಾಯಿತು.

- ಗ್ರಾಮಗಳ ಕೆರೆಯ ಹೂಳು ತೆಗೆಯಲು ಬರುವ ಅಧಿಕಾರಿಗಳಿಗೆ ಮೊದಲು ಪೋಷಕ ಕಾಲುವೆಗಳನ್ನು ಸರಿಪಡಿಸುವಂತೆ ಒತ್ತಾಯಿಸಿ,
- ರೈತರ ಜಮೀನಿನ ಸುತ್ತ ಹಾದು ಹೋಗುವ ಪೋಷಕ ಕಾಲುವೆಗಳ ಮಾರ್ಗವನ್ನು ಬದಲಾಯಿಸದಿರುವುದು,
- ರೈತರು ತಮ್ಮ ಜಮೀನಿನ ವ್ಯಾಪ್ತಿಯಲ್ಲಿ ಹರಿಯುವ ಪೋಷಕ ಕಾಲುವೆಗಳಲ್ಲಿ ಹೂಳು ತುಂಬಿಕೊಳ್ಳದಂತೆ ಸ್ವಚ್ಛವಾಗಿಟ್ಟುಕೊಳ್ಳಲು ಸಹಕರಿಸಿ.

### ರೈತರ ಅಭಿಪ್ರಾಯ

ನಾವು ಪ್ರತಿವರ್ಷ ಬೆಂಗಳೂರಿಗೆ ಕೂಲಿಗೆ ಹೋಗ್ತಾ ಇದ್ವಿ, ಈ ವರ್ಷ ನಮ್ಮೂರಲ್ಲೆ ನಮಗೆ ಕೆಲ್ಸ ಸಿಕ್ತು. ನಮ್ಮೂರ ಕೆರೆಯ ಕಾಲುವೆಗಳಲ್ಲಿ ಹೂಳು, ಜಂಗಲ್ ತುಂಬ್ಕೊಂಡು ಕೆರೆಗೆ ನೀರು ಸರಿಯಾಗಿ ಬರ್ತಾ ಇರಲಿಲ್ಲ. ಯಾವಾಗ್ಲು ಕೆರೆಲಿ ಹೂಳು ತೆಗೆತಿದ್ರೆ ಹೊರತು ಕಾಲುವೆಲಿ ಮಾತ್ರ ಹೂಳು ತೆಗಿತಿರಲಿಲ್ಲ ಜಿಲ್ಲಾ ಪಂಚಾಯಿತಿಯ ಅಧಿಕಾರಿಯ ಆಸಕ್ತಿಯಿಂದ ಕಾಲುವೆಲಿ ಹೂಳು ತೆಗೆಯಲಾಗುತ್ತಿದೆ.

– **ರಾಮಪ್ಪ, ರೈತ**
**ಯಲ್ಲದಕೆರೆ ಗ್ರಾಮ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.**

● ಪೋಷಕ ಕಾಲುವೆಗಳನ್ನು ಯಾರೂ ಒತ್ತುವರಿ ಮಾಡದಂತೆ ಎಚ್ಚರ ವಹಿಸುವಂತೆ ಗ್ರಾಮಸ್ಥರಿಗೆ ಮನವರಿಕೆ ಮಾಡಿಕೊಡಲಾಯಿತು.

ಚಿತ್ರದುರ್ಗ ಜಿಲ್ಲೆಯಲ್ಲಿ ಸದಾ ಜೀವ ಜಲಕ್ಕಾಗಿ ಪರದಾಟ. ಈ ವಿಷಯವನ್ನು ಮನಗಂಡು ಕೆರೆಗಳ ಪೋಷಕ ಕಾಲುವೆಗಳನ್ನು ಗುರುತಿಸಿ ಅವುಗಳಿಗೆ ಪೋಷಣೆ ನೀಡುವುದರ ಜೊತೆಗೆ ಸಾರ್ವಜನಿಕ ಸ್ಥಳಗಳ ನಿಷ್ಕ್ರಿಯ ಕೊಳವೆ ಬಾವಿಗಳಿಗೆ ಜಲ ಮರುಪೂರಣ, ರೈತನ ಕೃಷಿ ಜಮೀನುಗಳಲ್ಲಿ ಕೃಷಿ ಹೊಂಡಗಳ ನಿರ್ಮಾಣ, ವೇದಾವತಿ ನದಿಯ ಪುನಶ್ಚೇತನ, ಮಲ್ಟಿ ಆರ್ಚ್ ಚೆಕ್‌ಡ್ಯಾಂಗಳ ನಿರ್ಮಾಣ



ಗ್ರಾಮಗಳಲ್ಲಿ ಪಾಳುಬಿದಿದ್ದ ತೆರೆದ ಬಾವಿಗಳನ್ನು ಸ್ವಚ್ಛಗೊಳಿಸಿ ಮಹಾತ್ಮಗಾಂಧಿ ನರೇಗ ಯೋಜನೆಯ ಮುಖಾಂತರ ಜಿಲ್ಲೆಯಲ್ಲಿ ನೀರು ಸಂಗ್ರಹಿಸಿಕೊಳ್ಳಲು ಬೇಕಿರುವ ವ್ಯವಸ್ಥೆಗಳನ್ನು ಮಾಡಿ ನೀರು ಸಂಗ್ರಹಣ ಆಸ್ತಿಗಳಿಗೆ ಜೀವಕಳೆ ತುಂಬಲಾಗಿದೆ.

### ರೈತರ ಅಭಿಪ್ರಾಯ

ಕಳೆದ ವರ್ಷ ನಮ್ಮೂರಿಗೆ ಚೆನ್ನಾಗಿ ಮಳೆಯಾಯ್ತು, ಆದರೆ ಕೆರೆ ತುಂಬಲೇ ಇಲ್ಲ. ಕಾಲುವೆಯಲ್ಲ ನೀರು ಪೋಲಾಗಿ ಹೋಗಿತ್ತು. ಈ ವರ್ಷ ನಮ್ಮೂರ ಕೆರೆಯ ಕಾಲುವೆಗಳಲ್ಲಿ ಹೂಳು ಗಿಡಗಂಟೆಗಳನ್ನು ತೆಗೆದು ಸ್ವಚ್ಛಗೊಳಿಸಿಕೊಂಡಿದ್ದೇವೆ. ಇನ್ನೂ ಮುಂದೆ ಮಳೆ ಬಂದರೆ ಕೆರೆ ತುಂಬುವುದಿಲ್ಲ ಎಂಬ ಪ್ರಶ್ನೆಯೇ ಇಲ್ಲ.

– **ರಾಜಲಕ್ಷ್ಮಿ, ರೈತ ಮಹಿಳೆ,**
**ಜಾನಕಲ್ ಗ್ರಾಮ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.**



### ಭೌತಿಕ ಮತ್ತು ಆರ್ಥಿಕ ಪ್ರಗತಿ:

ಚಿತ್ರದುರ್ಗ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲಾದ ಕೆರೆಗಳು ಒಟ್ಟು: 123, ಖರ್ಚಾದ ವೆಚ್ಚ 413.00 ಲಕ್ಷಗಳು ಹಾಗೂ ಕಾಲುವೆಗಳು ಒಟ್ಟು: 346, ಖರ್ಚಾದ ವೆಚ್ಚ: 666.53 ಲಕ್ಷಗಳು.

### ಸಂತಸಗೊಂಡ ರೈತರು:

ಚಿತ್ರದುರ್ಗ ಜಿಲ್ಲೆಯಲ್ಲಿ ಕಳೆದ ವರ್ಷಕ್ಕಿಂತ ಈ ವರ್ಷ ಮಳೆಯ ಪ್ರಮಾಣ ಕಡಿಮೆ. ಆದರೂ ಹಲವು ವರ್ಷಗಳಿಂದ ತುಂಬದ ಕೆಲವು ಕೆರೆಗಳು ಈ ಬಾರಿ ಕಡಿಮೆ ಮಳೆಗೆ ತುಂಬಿಕೊಂಡಿವೆ. ಕಾರಣ ಕೆರೆಗಳ ಪೋಷಕ ಕಾಲುವೆಗಳನ್ನು ಸರಿಪಡಿಸಿ ನೀರನ್ನು ಕೆರೆಗೆ ನೇರವಾಗಿ ಹರಿಯಲು ಸಾಧ್ಯಮಾಡಿದ್ದು. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕಿನ ಕಾಲುವೆಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಯಾದಲಗಟ್ಟೆ ಗ್ರಾಮದಲ್ಲಿ ಪ್ರತಿ ವರ್ಷವು ಜನ ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ತೊಂದರೆಯಾಗುತ್ತಿತ್ತು. ಈ ವರ್ಷ ನಮಗೆ ಕೃಷಿ ಚಟುವಟಿಕೆಗೂ ನೀರು ದೊರಕುತ್ತಿದೆ ಎನ್ನುತ್ತಾರೆ ಗ್ರಾಮದ ರೈತ ಅಜ್ಜಣ್ಣ. ಇದೇ ರೀತಿ ಚಿತ್ರದುರ್ಗ ತಾಲ್ಲೂಕಿನ ಕೊಗುಂಟೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಬಹದ್ದೂರುಗಟ್ಟೆ ಗ್ರಾಮದಲ್ಲಿ ಒಣಗುತ್ತಿದ್ದ ಪುಷ್ಪ ಬೆಳೆಗೆ ಜೀವ ಬಂದಿದೆ. ಹಿರಿಯೂರು ತಾಲ್ಲೂಕಿನ ದಿಂಡಾವರ ಗ್ರಾಮ ಪಂಚಾಯತಿ ವ್ಯಾಪ್ತಿಯ ಲಕ್ಕೆನಹಳ್ಳಿ ಗ್ರಾಮದಲ್ಲಿ ತರಕಾರಿ ಬೆಳೆಗಳನ್ನು ಬೆಳೆದುಕೊಂಡು ಬದುಕು ಸಾಗಿಸುತ್ತಿದ್ದ ಸಾಕಷ್ಟು ಕುಟುಂಬಗಳಿಗೆ ಕೆರೆಯ ನೀರು ಆಸರೆಯಾಗಿದೆ. ಹಿರಿಯೂರು ತಾಲ್ಲೂಕಿನ ಗೌಡನಹಳ್ಳಿ ಗ್ರಾಮದ ರೈತರು ಪೋಷಕ ಕಾಲುವೆಗಳ ಜೀರ್ಣೋದ್ಧಾರ ದಿಂದ ಸಂತಸಗೊಂಡಿದ್ದಾರೆ. ಇಂತಹ ಯಶಸ್ವಿ ಪ್ರಕರಣಗಳು ತೆರೆಮರೆಯಲ್ಲಿ ಸಾಕಷ್ಟಿವೆ. ಜೊತೆಗೆ ಆಗಬೇಕಾಗಿರುವ ಪೋಷಕ ಕಾಲುವೆಗಳ ಅಭಿವೃದ್ಧಿ ಕಾರ್ಯವು ದೊಡ್ಡ ಪ್ರಮಾಣದಲ್ಲಿಯೆ ಇದೆ.

ಲೇಖನ



ಶ್ರೀನಿವಾಸ ಚಿತ್ರಗಾರ

# ಬರ : ಜಾಗೃತ ಕಾರ್ಯಕ್ರಮ

ಕಳೆದ ಎರಡು ವರ್ಷದಿಂದ ಎದುರಾಗಿರುವ ಬರಗಾಲದಿಂದ ಕೊಪ್ಪಳ ಜಿಲ್ಲೆ ಹೊರತಾಗಿಲ್ಲ. ಇಲ್ಲಿನ ಗ್ರಾಮೀಣ ಜನರು ಜೀವನ ನಿರ್ವಹಣೆಗೆ ಕೂಲಿ ಅರಸಿ ನಗರಗಳತ್ತ ವಲಸೆ ಹೋಗುತ್ತಿರುವುದು ಸಾಮಾನ್ಯ ಸಂಗತಿಯಾಗಿದೆ. ಇದನ್ನು ತಡೆದು ಜನರು ವಾಸಿಸುವ ಸ್ಥಳದಲ್ಲೆ ಉದ್ಯೋಗ ಒದಗಿಸುವ ಮಹಾತ್ಮಗಾಂಧಿ ನರೇಗಾ ಯೋಜನೆಯ ಬಗ್ಗೆ ಜಾಗೃತಿ ಮೂಡಿಸಲು 'ಗುಳೆ ತಡೆ ಅಭಿಯಾನ' ಮೂಲಕ ಅಕುಶಲ ಕಾರ್ಮಿಕರನ್ನು ಯೋಜನೆಯಲ್ಲಿ ಹೆಚ್ಚು ಹೆಚ್ಚು ಭಾಗಿಯಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಕುರಿತ ಲೇಖನ ಇಲ್ಲಿದೆ.



ಕೊಪ್ಪಳ ಜಿಲ್ಲೆಯಲ್ಲಿ ಬರ ಪರಿಹಾರಕ್ಕಾಗಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕೈಗೊಂಡ ಕಾರ್ಯಕ್ರಮಗಳ ವಿವರ.

**ಕಾರ್ಯಚಟುವಟಿಕೆ:**

**ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮ:** ಕೊಪ್ಪಳ ಜಿಲ್ಲೆ ನಾಲ್ಕು ತಾಲ್ಲೂಕುಗಳನ್ನು ಹೊಂದಿದ್ದು, ರಾಜ್ಯ ಅಕ್ಕಿಯ ಕಣಜವಾದ ಗಂಗಾವತಿ ತಾಲ್ಲೂಕು ಕೂಡ ಈ ಜಿಲ್ಲೆಯ ವ್ಯಾಪ್ತಿಯಲ್ಲಿದೆ. ಆದರೆ ಉಳಿದ ಮೂರು ತಾಲ್ಲೂಕುಗಳಾದ ಯಲ್ಬುರ್ಗಾ, ಕೊಪ್ಪಳ ಮತ್ತು ಕುಷ್ಟಗಿ ತಾಲ್ಲೂಕುಗಳಲ್ಲಿ ಕಳೆದ ಎರಡು ವರ್ಷಗಳಿಂದ ಬರಗಾಲದ ಛಾಯೆ ಆವರಿಸಿದೆ. ಗ್ರಾಮೀಣ ಪ್ರದೇಶದ ಬಹುತೇಕ ಕುಟುಂಬಗಳು ಕೃಷಿಯನ್ನೇ ಅವಲಂಬಿಸಿದ್ದು ಮಳೆಯಾಶ್ರಿತ ಬೆಳೆಯನ್ನು ಬೆಳೆಯುತ್ತಿದ್ದಾರೆ. ಬರದಿಂದ ಕೃಷಿ ಕೈಕೊಟ್ಟಿದ್ದರಿಂದ ಜನರ ಜೀವನ ನಿರ್ವಹಣೆಗೆ ಕಷ್ಟವಾಗಿದೆ. ಇದಕ್ಕಾಗಿ ಕೂಲಿ ಅರಸಿ ನಗರಗಳತ್ತ ಗುಂಪು ಗುಂಪಾಗಿ ವಲಸೆ ಹೋಗುತ್ತಿರುವುದು ಕಂಡುಬಂದಿದೆ. ಇದನ್ನು ತಪ್ಪಿಸಿ ಇರುವ ಸ್ಥಳದಲ್ಲೇ ಕೂಲಿ ಒದಗಿಸಲು ಜಿಲ್ಲಾಡಳಿತ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಸನ್ಮಾನ್ಯ ಮುಖ್ಯಮಂತ್ರಿಗಳ 21 ಅಂಶಗಳ ಕಾರ್ಯಕ್ರಮ

ಜಿಲ್ಲಾ ಐ.ಇ.ಸಿ ಸಂಯೋಜಕರು, ನರೇಗಾ ವಿಭಾಗ, ಜಿಲ್ಲಾ ಪಂಚಾಯತ್, ಕೊಪ್ಪಳ

ಕಾಮಗಾರಿಗಳಾದ ಕೆರೆ ಅಭಿವೃದ್ಧಿ, ನಮ್ಮ ಹೊಲ ನಮ್ಮ ದಾರಿ, ಕೃಷಿ ಹೊಂಡ, ಸ್ಮಶಾನ ಅಭಿವೃದ್ಧಿ, ಆಟದ ಮೈದಾನ ಅಭಿವೃದ್ಧಿ ಅನುಷ್ಠಾನಿಸಲು ಅಗತ್ಯ ಕ್ರಮಕೈಗೊಂಡಿದೆ.

**ಜಾಗೃತಿ (ಐಇಸಿ) ಅಭಿಯಾನ:**



ಮಹಾತ್ಮಗಾಂಧಿ ನರೇಗಾ ಯೋಜನೆಯ ಬಗ್ಗೆ ಗ್ರಾಮೀಣ ಜನರಲ್ಲಿ ಜಾಗೃತಿ ಇಲ್ಲದಿರುವುದರಿಂದ ಜನರು ಗ್ರಾಮ ಪಂಚಾಯಿತಿಗಳಿಗೆ ಆಗಮಿಸಿ ಕೂಲಿ ಬೇಡಿಕೆ ಸಲ್ಲಿಸದಿರುವುದು ಮತ್ತು ಜನರಲ್ಲಿ ತಪ್ಪು ಕಲ್ಪನೆ ಇರುವುದು ಕಂಡುಬಂತು. ಇದಕ್ಕಾಗಿ ಕೊಪ್ಪಳ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಯೋಜನೆಯಡಿ ವಿನೂತನವಾಗಿ ಐಇಸಿ ಕಾರ್ಯಕ್ರಮಗಳನ್ನು ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಹಮ್ಮಿಕೊಳ್ಳಲು ಕಾರ್ಯಕ್ರಮ ರೂಪಿಸಿದರು. ಇದಕ್ಕಾಗಿ ರೋಜ್‌ಗಾರ್ ವಾಹಿನಿಯನ್ನು ಸಿದ್ಧಪಡಿಸಿ ಧ್ವನಿವರ್ಧಕಗಳ ಮೂಲಕ ಮಾಹಿತಿ ಪೂರೈಸಲು ಅಭಿಯಾನ ಕೈಗೊಂಡರು.

- **ಗುಳೆ ತಡೆ ಅಭಿಯಾನ ರಥ ಕಾರ್ಯಕ್ರಮ:** ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕುರಿತು 153 ಗ್ರಾಮಪಂಚಾಯತಿ / ಗ್ರಾಮ ಮಟ್ಟದಲ್ಲಿ ಆಡಿಯೋ ಮೂಲಕ ಗ್ರಾಮಸ್ಥರಿಗೆ ಉದ್ಯೋಗ ಖಾತ್ರಿ ಯೋಜನೆಯಲ್ಲಿನ ಸವಲತ್ತುಗಳು, ಸಮುದಾಯ ಮತ್ತು ವೈಯಕ್ತಿಕ ಕಾಮಗಾರಿಗಳ ಅನುಷ್ಠಾನದಲ್ಲಿ ಕೂಲಿಕಾರರು ಭಾಗವಹಿಸುವಂತೆ ಅರಿವು ಮೂಡಿಸಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಕೆಲಸ ಒದಗಿಸಲಾಗಿದೆ.

- **ರೋಜ್‌ಗಾರ್ ದಿವಸ್ ಆಚರಣೆ:** 2016–17 ನೇ ಸಾಲಿನಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಮತ್ತು ಗ್ರಾಮಗಳಲ್ಲಿ 1384 ರೋಜ್‌ಗಾರ್ ದಿವಸಗಳನ್ನು ಆಚರಿಸಿ ಕೂಲಿಕಾರರಿಂದ ಬೇಡಿಕೆಯನ್ನು ಪಡೆದು ಸಮುದಾಯ ಆಧಾರಿತ ಕಾಮಗಾರಿಗಳನ್ನು ಮತ್ತು ವೈಯಕ್ತಿಕ ಕಾಮಗಾರಿಗಳಲ್ಲಿ ಉದ್ಯೋಗ ಒದಗಿಸಲಾಗಿದೆ

- **ಕಾಯಕ ಬಂಧುಗಳಿಗೆ ಸಮಾವೇಶ:** ಪ್ರತಿ ಕಾರ್ಯಕ್ಷೇತ್ರದಲ್ಲಿ ಕೆಲಸದ ಉಸ್ತುವಾರಿ ನೋಡಿಕೊಳ್ಳುವ ಕಾಯಕ ಬಂಧುವಿಗೆ ಕೆಲಸಗಾರರಿಂದ ಪಡೆಯಬೇಕಾದ ಕೆಲಸದ ಪ್ರಮಾಣ ಮತ್ತು ಅವರಿಗೆ ನೀಡಬೇಕಾದ ವೇತನದ ಜವಾಬ್ದಾರಿಗಳ ಕುರಿತು ಅರಿವು ಮೂಡಿಸಲಾಗಿದೆ ಮತ್ತು ಗ್ರಾಮದ ಕೂಲಿಕಾರರು ಸದರಿ ಈ ಯೋಜನೆಯಲ್ಲಿ ಹೆಚ್ಚು ಹೆಚ್ಚು ಕೆಲಸ ನಿರ್ವಹಿಸಲು ಪ್ರೋತ್ಸಾಹಿಸಲಾಯಿತು.

- **ಮನೆ–ಮನೆ ಭೇಟಿ ಕಾರ್ಯಕ್ರಮ:** ಪ.ಜಾ/ ಪ.ಪಂ ಕಾಲೋನಿಗಳಲ್ಲಿ ಹಾಗೂ ಸಣ್ಣ ಮತ್ತು ಅತಿ ಸಣ್ಣ ರೈತರ ಮನೆಗಳಿಗೆ ಭೇಟಿ ನೀಡಿ ಉದ್ಯೋಗ ಚೀಟಿ ಪರಿಶೀಲಿಸಿ ಸದರಿ ಸಾಲಿನಲ್ಲಿ ಕುಟುಂಬವಾರು ಲಭ್ಯವಿರುವ ಮಾನವ ದಿನಗಳ ಸೃಜನೆ ಮತ್ತು ಜಾಬ್ ಕಾರ್ಡ್ ಹೊಂದಿರುವ ಎಲ್ಲಾ ಕುಟುಂಬಗಳನ್ನು ಸಕ್ರಿಯಾ ಭಾಗಿದಾರರನ್ನಾಗಿ



ಮಾಡುವಲ್ಲಿ ಈ ಮನೆ ಮನೆ ಭೇಟಿ ಹೆಚ್ಚು ಪ್ರಯೋಜಕಾರಿಯಾಗಿದೆ. ಹಾಗಾಗಿ 654 ಮನೆ ಮನೆ ಭೇಟಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದರ ಜೊತೆಯಲ್ಲಿ ಐಇಸಿ ಕಾರ್ಯಕ್ರಮಗಳಾದ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿ ಕೊಳ್ಳಲಾಗಿದೆ.

- ಗೋಡೆ ಬರಹಗಳ ಮೂಲಕ ಅರಿವು ಕಾರ್ಯಕ್ರಮ
- ಸ್ವ-ಸಹಾಯ ಸಂಘಗಳಿಗೆ (SHG) ಕಾರ್ಯಾಗಾರ
- ಸಂಘ ಸಂಸ್ಥೆಗಳೊಂದಿಗೆ ಯೋಜನೆಯ ಕುರಿತು ಕಾರ್ಯಾಗಾರ
- ಪ.ಜಾ / ಪ.ಪಂ ಹಾಗೂ ಸಣ್ಣ ಅತಿ ಸಣ್ಣ ರೈತರೊಂದಿಗೆ ಯೋಜನೆಯ ಉಪಯೋಗಗಳ ಕುರಿತು ಸಂವಾದ
- ಜಿಲ್ಲಾ ಮಟ್ಟದಲ್ಲಿ ಉಚಿತ ಸಹಾಯವಾಣಿ ಕೇಂದ್ರ
- ಕಲಾಜಾಥಾ, ಕರ ಪತ್ರಗಳ ಮುಖಾಂತರ ಮತ್ತು ಆಟೋಗಳ ಮುಖಾಂತರ ಅರಿವು ಕಾರ್ಯಕ್ರಮ
- ಸ್ಥಳೀಯ ಮತ್ತು ರಾಜ್ಯ ಮಟ್ಟದ ದಿನಪತ್ರಿಕೆಗಳ ಮೂಲಕ ಉದ್ಯೋಗ ಖಾತ್ರಿ ಕೆಲಸಕ್ಕೆ ಹಾಜರಾಗುವಂತೆ ಪತ್ರಿಕಾ ವರದಿ
- ಗ್ರಾಮ ಪಂಚಾಯತಿಗಳಲ್ಲಿ ಮತ್ತು ಗ್ರಾಮಗಳಲ್ಲಿ ಡಂಗೂರ ಸಾರುವುದರ ಮೂಲಕ ಯೋಜನೆಯ ಕುರಿತು ಜಾಗೃತಿ
- ಅನುಷ್ಠಾನ ಅಧಿಕಾರಿಗಳಿಗೆ ಯೋಜನೆಯ ಕುರಿತು ತರಬೇತಿ

## ಮಾನವ ದಿನ ಸೃಜನೆ ಏರಿಕೆ:

ವ್ಯಾಪಕ ಐಇಸಿ ಕಾರ್ಯಕಮ ಹಮ್ಮಿಕೊಂಡಿದ್ದರ ಫಲವಾಗಿ ಗ್ರಾಮಪಂಚಾಯಿತಿ ಮಟ್ಟದಲ್ಲಿ ಅಕುಶಲ ಕೂಲಿಕಾರರಿಂದ ದಿನೆ ದಿನೇ ಬೇಡಿಕೆ ಹೆಚ್ಚಾಗಿ ಕಂಡುಬರುತ್ತಿದ್ದು, ಭೌತಿಕ ಮತ್ತು ಆರ್ಥಿಕ ವಿವರ ಈ ಕೆಳಕಂಡಂತಿದೆ.

### 2016-17ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಪ್ರಗತಿ ವರದಿ (29/11/2016)

| ಕ್ರ.ಸಂ | ತಾಲೂಕ | ಉದ್ಯೋಗ ಚೀಟಿಗಳು | ಅನುಮೋದಿತ ಉದ್ಯೋಗ ಗುರಿ (ಲಕ್ಷ ಮಾನವ ದಿನಗಳು) | ಸೃಜಿಸಿದ ಮಾನವ ದಿನಗಳು | ಶೇಕಡ(%) | 100 ದಿನಗಳು ಪೂರೈಸಿದ ಕುಟುಂಬಗಳ ಸಂಖ್ಯೆ | ಆರ್ಥಿಕ ಪ್ರಗತಿ (ರೂ.ಕೋಟಿ) | | |
|---|---|---|---|---|---|---|---|---|---|
| | | | | | | | ಕೂಲಿ | ಸಾಮಗ್ರಿ | ಒಟ್ಟು |
| 1 | ಗಂಗಾವತಿ | 60819 | 6.89 | 5.16 | 75 | 613 | 13.22 | 7.73 | 20.95 |
| 2 | ಕೊಪ್ಪಳ | 47347 | 5.88 | 3.88 | 66 | 486 | 9.52 | 3 | 12.52 |
| 3 | ಕುಷ್ಟಗಿ | 46176 | 6.55 | 5.06 | 77 | 1070 | 12.89 | 7.88 | 20.77 |
| 4 | ಯಲಬುರ್ಗಾ | 55979 | 5.35 | 3.07 | 57 | 239 | 7.62 | 2.98 | 10.6 |
| ಒಟ್ಟು | | **210321** | **24.68** | **17.19** | **70** | **2408** | **43.27** | **21.6** | **64.87** |

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸರ್ಮಪಕವಾಗಿ ಅನುಷ್ಠಾನಗೊಂಡು ಅದರ ಪ್ರಯೋಜನವು ಈ ಗ್ರಾಮಗಳಿಗೆ ದೊರೆಕುತ್ತಿರುವುದು ಸಂತೋಷದ ಸಂಗತಿಯಾಗಿದೆ. ಕೆರೆ ಅಭಿವೃದ್ಧಿ ಕಾಮಗಾರಿ, ಕೃಷಿ ಹೊಂಡ, ನಮ್ಮ ಹೊಲ ನಮ್ಮ ದಾರಿ, ಕುರಿ ದನದ ದೊಡ್ಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಲ್ಲಿ ಗ್ರಾಮ ಪಂಚಾಯತಿಯ ಎಲ್ಲಾ ಸಿಬ್ಬಂದಿಗಳು ಪಾಲ್ಗೊಂಡು ನೀಡುತ್ತಿರುವ ಸಹಕಾರ ಗ್ರಾಮಗಳ ಅಭಿವೃದ್ಧಿಗೆ ನಿಜಕ್ಕೂ ಇದು ಪ್ರಶಂಸನಿಯವಾಗಿದೆ ಎಂದು ಗ್ರಾಮಗಳ ಜನಪ್ರತಿನಿಧಿಗಳು, ಕೂಲಿಕಾರರು ತಮ್ಮ ಅಭಿಪ್ರಾಯವನ್ನು ತಿಳಿಸಿದರು.

# ಪರಿಣಾಮಕಾರಿ 'ಬರನಿರ್ವಹಣೆ' : ಖಾತರಿ ಯೋಜನೆ



ಉಮೇಶ್ ಹೆಚ್. ಸಿ.

**ತುಮಕೂರು ಜಿಲ್ಲೆಯಲ್ಲಿ ಸಮರ್ಥವಾಗಿ ಬರನಿರ್ವಹಣೆ ಮಾಡುವ ಸಲುವಾಗಿ ಮಹಾತ್ಮಗಾಂಧಿ ನರೇಗಾ ಯೋಜನೆಯ ಬಗ್ಗೆ ಅಧಿಕಾರಿಗಳಿಗೆ ಮತ್ತು ಜನಪ್ರತಿನಿಧಿಗಳಿಗೆ ವಿಶಿಷ್ಠ ಹಾಗೂ ವಿನೂತನವಾದ ತರಬೇತಿ ಹಾಗೂ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.**

ಭಾರತ ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಬಡವರ ಏಳಿಗೆಗಾಗಿ ಸಾವಿರಾರು ಯೋಜನೆಗಳನ್ನು ಸರ್ಕಾರವು ಅನುಷ್ಠಾನಗೊಳಿಸುತ್ತಲೇ ಬಂದಿದೆ. ಆದಾಗ್ಯೂ ಬಡತನವನ್ನು ಆಮೂಲಾಗ್ರವಾಗಿ ನಿರ್ಮೂಲನೆ ಮಾಡಲು ಸಾಧ್ಯವಾಗಿರುವುದಿಲ್ಲ. ಭಾರತ ದೇಶವು ಕೃಷಿ ಆಧಾರಿತ ದೇಶ ವಾಗಿರುವುದರಿಂದ ಬರಗಾಲಕ್ಕೂ ಬಡತನಕ್ಕೂ ನೇರವಾದ ಸಂಬಂಧವಿದೆ.

ತುಮಕೂರು ಜಿಲ್ಲೆಯಲ್ಲಿ ಬರನಿರ್ವಹಣೆ ಮಾಡಲು ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ತರಬೇತಿ ಹಾಗೂ ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.




ಈ ವರ್ಷದ ಮುಂಗಾರು ಕೈಕೊಟ್ಟ ಪರಿಣಾಮವಾಗಿ ಹಿಂದೆಂದೂ ಕಾಣದೇ ಇದ್ದಂತಹ ಕೆಟ್ಟ ಬರದ ಪರಿಸ್ಥಿತಿ ಈಗ ತಲೆದೋರಿದೆ. ಮಳೆ ಬಾರದೆ ಕೇವಲ ಬೆಳೆಗಳಷ್ಟೇ ಅಲ್ಲ ಕಾಡಿನ ಮರಗಳು ಕೂಡ ಒಣಗಿ ಹೋಗುವಂತಹ ಭೀಕರ ಬಿಸಿಲು ಕಾಡನ್ನೂ ಬೆಂಗಾಡನ್ನಾಗಿ ಮಾಡಿದೆ. ಇತ್ತೀಚಿನ ವರ್ಷಗಳಲ್ಲಿ ನಮ್ಮ ರಾಜ್ಯದ ಹಲವಾರು ಜಿಲ್ಲೆಗಳು ನಿರಂತರ ಬರಗಾಲಕ್ಕೆ ತುತ್ತಾಗುತ್ತಲೇ ಇವೆ. ಅವುಗಳಲ್ಲಿ ತುಮಕೂರು ಜಿಲ್ಲೆಯೂ ಒಂದು.

ತುಮಕೂರು ಜಿಲ್ಲೆಯು ಕಳೆದ ಮೂರು ವರ್ಷಗಳಿಂದ ಸತತವಾಗಿ ಬರಕ್ಕೆ ಈಡಾಗಿ ಗ್ರಾಮೀಣ ಜನರ ಬದುಕು ಅಕ್ಷರಶಃ ಬರಡಾಗಿ ಹೋಗಿದೆ. ಮಳೆಗಾಲದಲ್ಲಿ ಮಳೆಯು ಬಿದ್ದೇ ಬೀಳುತ್ತದೆಂಬ ಅದಮ್ಯ ನಂಬಿಕೆಯಿಂದ

ಜಿಲ್ಲಾ ಐ.ಇ.ಸಿ. ಸಂಯೋಜಕರು, ತುಮಕೂರು ಜಿಲ್ಲಾ ಪಂಚಾಯತ್, ತುಮಕೂರು



ರೈತಾಪಿ ಜನರು ಸಾಲಸೂಲ ಮಾಡಿ ಜಮೀನು ಹಸನು ಗೊಳಿಸಿಕೊಂಡು ಬೀಜ–ಗೊಬ್ಬರ ಹೊಂದಿಸಿಕೊಂಡು ಬಿತ್ತನೆ ಮಾಡಿದ ಬೀಜ ಮೊಳಕೆಯಲ್ಲೇ ಸತ್ತು, ಬಡ ರೈತಾಪಿಗಳ ಜೀವನವು ಬಾಣಲೆಯಿಂದ ಜಾರಿ ಬೆಂಕಿಗೆ ಬಿದ್ದಂತಾಗಿರುತ್ತದೆ. ಕೃಷಿ ಚಟುವಟಿಕೆಗಳು ಸ್ಥಬ್ದವಾಗಿ ಜನ ಜಾರುವಾರುಗಳಿಗೆ ಕುಡಿಯುವ ನೀರು ಹಾಗೂ ಮೇವು ದೊರೆಯುವುದು. ದುಸ್ತರವಾಗಿದೆ. ವಾಸಸ್ಥಳದಲ್ಲಿ ಕೂಲಿನಾಲಿ ಮಾಡಿ ಜೀವಿಸಲು ಅವಕಾಶಗಳಿಲ್ಲ. ಇಂತಹ ಹೃದಯ ವಿದ್ರಾವಕ ಪರಿಸ್ಥಿತಿಯನ್ನು ನಿಭಾಯಿಸಲು ಜಿಲ್ಲಾ ಆಡಳಿತವು ಇನ್ನಿಲ್ಲದ ಪ್ರಯತ್ನವನ್ನು ಮಾಡುತ್ತಲಿದೆ.

ಈ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತ್ ಅಭಿವೃದ್ಧಿ ಶಾಖೆಯಿಂದ ಒಂದು ವಿಭಿನ್ನವಾದ, ವಿಶಿಷ್ಠವಾದ ಹಾಗೂ ಪರಿಣಾಮಕಾರಿಯಾದ ತರಬೇತಿ ಹಾಗೂ ಸಂವಾದ ಕಾರ್ಯಕ್ರಮವನ್ನು ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿಯೂ ಆಯೋಜಿಸಲಾಗಿತ್ತು.

ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯನ್ನು ಜನಮುಖಿ ಕಾರ್ಯಕ್ರಮವನ್ನಾಗಿಸಿ ನಿಜವಾದ ಅರ್ಹ ಫಲಾನುಭವಿಗಳಿಗೆ ಸಕಾಲದಲ್ಲಿ ತಲುಪುವಂತೆ ಮಾಡಲು ಜಿಲ್ಲೆಯಾದ್ಯಂತ ಬರನಿರ್ವಹಣೆ ಅಂಗವಾಗಿ ಕೂಲಿ ಬೇಡಿಕೆಯನ್ನು ಈಡೇರಿಸಲು ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯನ್ನು ಸಮರ್ಥವಾಗಿ ಬಳಸಿಕೊಳ್ಳಲು ಕ್ರಮವಾಗಿ ಪಾರದರ್ಶಕವಾಗಿ, ಕಾಲಬದ್ಧವಾಗಿ, ಜನಮುಖಿ ಯೋಜನೆಯನ್ನಾಗಿ ಮಾಡುವ ಮಹದುದ್ದೇಶದಿಂದ ವಿಶಿಷ್ಠ ಹಾಗೂ ವಿನೂತನವಾದ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯತ್, ನರೇಗ ಶಾಖೆ ವತಿಯಿಂದ ಹಮ್ಮಿಕೊಂಡು ಯಶಸ್ವಿ ಮಾಡಲಾಯಿತು.

ಬರಗಾಲವನ್ನು ಸಮರ್ಥವಾಗಿ ನಿಭಾಯಿಸಿ ನಿರ್ವಹಿಸುವ ಸಲುವಾಗಿ ಜಿಲ್ಲೆಯ ಎಲ್ಲ 10 ತಾಲ್ಲೂಕುಗಳ ಎಲ್ಲಾ 331 ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು ಚುನಾಯಿತ ಪ್ರತಿನಿಧಿಗಳು ಸಾರ್ವಜನಿಕರ ಮಧ್ಯೆ ಸಮನ್ವಯತೆಯನ್ನು ಸಾಧಿಸಿ ಒಂದೇ ವೇದಿಕೆಯಡಿಯಲ್ಲಿ ಅವರವರ ಶಂಕೆ ಸಮಸ್ಯೆ ಹಾಗೂ ಭಿನ್ನಾಭಿಪ್ರಾಯಗಳನ್ನು ಸ್ಥಳದಲ್ಲಿಯೇ ಪರಿಹರಿಸಲು ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ತರಬೇತಿ ಹಾಗೂ ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ಜಿಲ್ಲೆಯ ಒಟ್ಟು ಹತ್ತು ತಾಲ್ಲೂಕುಗಳಲ್ಲಿ ಪ್ರತಿಯೊಂದು ಅನುಷ್ಠಾನ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು, ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳು ಹಾಗೂ ಉಪಾಧ್ಯಕ್ಷರುಗಳನ್ನು ಆಯಾ ತಾಲ್ಲೂಕಿನ ಕೇಂದ್ರ ಸ್ಥಳದಲ್ಲಿ ಸಭೆಕರೆದು ತರಬೇತಿ ಕಾರ್ಯಕ್ರಮ



ಹಾಗೂ ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಹಾತ್ಮ ಗಾಂಧಿ ನರೇಗ ಯೋಜನೆಯ ಬಗ್ಗೆ ಸಮರ್ಪಕವಾದ ಹಾಗೂ ಕೂಲಂಕುಶವಾದ ತರಬೇತಿ ನೀಡುವುದರ ಮುಖಾಂತರ ಯೋಜನೆಯ ಅನುಷ್ಠಾನದಲ್ಲಿ ಅಧಿಕಾರಿ / ನೌಕರರು ಎದುರಿಸುತ್ತಿದ್ದ ಸವಾಲುಗಳು, ಸಂಶಯಗಳು, ತೊಡಕುಗಳು ಹಾಗೂ ಕ್ರಮಬದ್ಧವಾಗಿ, ಕಾಲಬದ್ಧವಾಗಿ ಮತ್ತು ಪಾರದರ್ಶಕವಾಗಿ ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ ವಿವರವಾಗಿ ಎಳೆಎಳೆಯಾಗಿ ತಿಳಿಸಿಕೊಡಲಾಯಿತು.

ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು–ಉಪಾಧ್ಯಕ್ಷರು ಸದಸ್ಯರುಗಳನ್ನು ಕಡ್ಡಾಯವಾಗಿ ಭಾಗವಹಿಸುವಂತೆ ಪ್ರೇರೇಪಣೆ ನೀಡಲಾಯಿತು. ಸಂವಾದ ಕಾರ್ಯಕ್ರಮದಲ್ಲಿ ಅನೇಕ ಸಮಸ್ಯೆಗಳು, ಭಿನ್ನಾಭಿಪ್ರಾಯಗಳು ಹಾಗೂ ಕುಂದುಕೊರತೆಗಳು, ವ್ಯಕ್ತವಾಗಿ ಜಿಲ್ಲಾಡಳಿತಕ್ಕೆ ವೇದ್ಯವಾದವು. ಉಪಕಾರ್ಯದರ್ಶಿ (ಅಭಿವೃದ್ಧಿ) ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳು ದೂರು ಮತ್ತು ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಶೀಲಿಸಿ ಸ್ಥಳದಲ್ಲಿಯೇ ಪರಿಶೀಲಿಸಿ ಸ್ಥಳದಲ್ಲಿಯೇ ಪರಿಹಾರೋಪಾಯವನ್ನು ನೀಡಿ ಯೋಜನೆ ಅನುಷ್ಠಾನವನ್ನು ಶ್ರದ್ಧೆ, ನಿಷ್ಠೆ ಮತ್ತು ಬಡವರ ಬಗೆಗಿನ ಪ್ರೀತಿ ಹಾಗೂ ಬದ್ಯಾತೆಗಳಿಂದ ಅನುಷ್ಠಾನಗೊಳಿಸಲು ಶ್ರಮ ಮತ್ತು ಕ್ರಮವಹಿಸಲು ತಿಳಿಸಲಾಯಿತು

ಪಕ್ಷ–ಜಾತಿ–ಭೇದ ಮರೆತು ಜನ ಪ್ರತಿನಿಧಿಗಳನ್ನು ಸಾರ್ವಜನಿಕರ ಸೇವೆ ಮಾಡಲು ಅರ್ಪಿಸಿಕೊಳ್ಳುವಂತೆ ಸರ್ವರಿಗೂ ಸಮಬಾಳು – ಸರ್ವರಿಗೂ ಸಮಪಾಲು ಎಂಬಂತೆ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಪರಿಶಿಷ್ಠ ಜಾತಿ ಪರಿಶಿಷ್ಠ ವರ್ಗ, ಮಹಿಳೆಯರು, ವಿಧವೆಯರು, ಸಣ್ಣ ಮತ್ತು ಅತಿಸಣ್ಣ ರೈತರು ಮುಂತಾದ ಎಲ್ಲ ಅರ್ಹ ಫಲಾನುಭವಿಗಳು ಸಮುದಾಯ ಕಾಮಗಾರಿಗಳಲ್ಲಿ ಪಾಲ್ಗೊಳ್ಳಲು ಹಾಗೂ ವೈಯುಕ್ತಿಕ ಕಾಮಗಾರಿಗಳನ್ನು ತೆಗೆದುಕೊಳ್ಳಲು ಮುಂದೆ ಬರುವಂತೆ ಪ್ರೇರಪಣೆ ನೀಡಲು ಪ್ರತಿಯೊಂದು ಜನವಸತಿ ಪ್ರದೇಶಗಳಲ್ಲಿ ಮನೆ–ಮನೆ ಭೇಟಿ ನೀಡಿ ಆಸಕ್ತ ಕುಟುಂಬಗಳಿಗೆ ಸ್ಥಳದಲ್ಲೇ ಕಾರ್ಯಾದೇಶ ನೀಡಲು ತಿಳಿಸಲಾಯಿತು.

ಪ್ರತಿಯೊಂದು ಸಂವಾದ ಕಾರ್ಯಕ್ರಮಗಳಿಗೂ ಸ್ಥಳೀಯ ಪತ್ರಕರ್ತರನ್ನು ಆಹ್ವಾನಿಸಿ ಸಂವಾದದಲ್ಲಿ ಸಾರಾಂಶವನ್ನು ದಿನ ಪತ್ರಿಗಳಲ್ಲಿ ಹಾಗೂ ಸ್ಥಳಿಯ ಕೇಬಲ್ ಚಾನೆಲ್‌ಗಳಲ್ಲಿ ಪ್ರಚಾರ ಪಡಿಸುವಂತೆ ನೋಡಿಕೊಳ್ಳಲಾಯಿತು.

ಜನಪ್ರತಿನಿಧಿಗಳ ಅಹವಾಲುಗಳು, ಕುಂದುಕೊರತೆಗಳು ಹಾಗೂ ಯೋಜನೆಯ ಬಗ್ಗೆ ಅವರಿಗೆ ಇದ್ದ ಇನ್ನಿತರ ತಪ್ಪು ಗ್ರಹಿಕೆಗಳನ್ನು ಹೋಗಲಾಡಿಸಲಾಯಿತು. ಅಲ್ಲದೆ ಯೋಜನೆಯ ಅನುಷ್ಠಾನದಲ್ಲಿ

ಜನಪ್ರತಿನಿಧಿಗಳು ಅಧಿಕಾರಿ/ನೌಕರರ ವರ್ಗಕ್ಕೆ ನೀಡಬೇಕಾದ ಸಹಕಾರ ಹಾಗೂ ಜನಪ್ರತಿನಿಧಿಗಳಾಗಿ ಅವರು ನಿರ್ವಹಿಸಬೇಕಾದ ಜವಾಬ್ಧಾರಿಗಳು ಮತ್ತು ಹೊಣೆಗಾರಿಕೆಗಳನ್ನು ತಿಳಿಸಿಕೊಡಲಾಯಿತು. ಅಷ್ಟೆ ಅಲ್ಲದೆ ಎಲ್ಲಾ ಮಾಧ್ಯಮ ಪ್ರತಿನಿಧಿಗಳನ್ನು ಸಭೆಗೆ ಆಹ್ವಾನಿಸಿ – ಮಾದ್ಯಮದವರು – ಅಧಿಕಾರಿಗಳು – ಜನಪ್ರತಿನಿಧಿಗಳ ಮುಖಾಮುಖಿ ಚರ್ಚೆಗೆ ಅವಕಾಶ ನೀಡಿ ಗ್ರಾಮೀಣ ಬಡಜನರ ಜೀವನವನ್ನು ಹಸನುಗೊಳಿಸುವಲ್ಲಿ ಎಲ್ಲರೂ ಸಕ್ರಿಯವಾಗಿ ತಮ್ಮ ತಮ್ಮ ಕೊಡುಗೆಯನ್ನು ನೀಡಬೇಕೆಂಬುದಾಗಿ ಅರಿವನ್ನು ಮೂಡಿಸಲಾಯಿತು.

ಮಹಾತ್ಮ ಗಾಂಧಿ ನರೇಗ ಯೋಜನೆಯಡಿಯಲ್ಲಿ ಗ್ರಾಮೀಣ ಜನರು ಪಡೆಯಬಹುದಾದ ಅನುಕೂಲ ಗಳನ್ನು ಅಂದರೆ ಉದ್ಯೋಗ ಅವಕಾಶ, ವೈಯಕ್ತಿಕ ಕಾಮಗಾರಿಗಳು ಹಾಗೂ ಸಾರ್ವಜನಿಕ ಉಪಯೋಗ ಕ್ಕಾಗಿ ಸಮುದಾಯ ಕಾಮಗಾರಿಗಳನ್ನು ಕ್ರಮ ಬದ್ಧವಾಗಿ ಅನುಷ್ಠಾನಗೊಳಿಸುವ ಮೂಲಕ ನಿರುದ್ಯೋಗಿ ಗ್ರಾಮೀಣ ಬಡಜನರಿಗೆ ಸಹಕಾರಿ ಯಾಗುವಂತೆ, ಸುಲಭವಾಗಿ ಓದಿ ತಿಳಿದು ಕೊಳ್ಳುವಂತೆ, ಸರಳವಾಗಿ ವಿವರಗಳನ್ನು ಕರಪತ್ರಗಳಲ್ಲಿ ಮುದ್ರಿಸಿ ಪ್ರತಿಯೊಂದು ಗ್ರಾಮ ಪಂಚಾಯತಿಗಳಿಗೂ ಕರಪತ್ರಗಳನ್ನು ಹಂಚಿಕೆ ಮಾಡಿ ಸಾರ್ವಜನಿಕರಿಗೂ ಮಾಹಿತಿ ದೊರಕುವಂತೆ ಮಾಡಲಾಯಿತು.

ಆಯಾ ತಾಲ್ಲೂಕುಗಳ ಎಲ್ಲಾ ಹೋಬಳಿ ಮಟ್ಟದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರುಗಳಿಗೆ ಒಂದು ದಿನದ ತರಬೇತಿ ಕಾರ್ಯಕ್ರಮ ಹಾಗೂ ಸಂವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕರಪತ್ರಗಳನ್ನು ಹಂಚಿ ಯೋಜನೆಯ ಬಗ್ಗೆ ಸಮಗ್ರ ಮಾಹಿತಿಯನ್ನು ನೀಡಲಾಯಿತು.

ಯೋಜನೆಗೆ ಕೇಂದ್ರ ಸರ್ಕಾರದಿಂದ ಹರಿದು ಬರುವ ಶೇ.90 ರಷ್ಟು ಅನುದಾನವನ್ನು ಸಕಾಲದಲ್ಲಿ ಸಮರ್ಥವಾಗಿ ಬಳಸಿಕೊಳ್ಳುವ ಉದ್ದೇಶದಿಂದ ಪ್ರತಿಯೊಂದು ಗ್ರಾಮ ಪಂಚಾಯಿತಿ ಅಧಿಕಾರಿ / ನೌಕರರು ಕಾಲಮಿತಿಯಲ್ಲಿ ಕೆಲಸ ಮಾಡಿ ನಿಗದಿತ ವೇಳಾ ಪಟ್ಟಿಯಂತೆ ಯೋಜನೆಯ ಪ್ರತಿಯೊಂದು ಕಾರ್ಯಕ್ರಮಗಳನ್ನು ಕೈಗೊಂಡು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಇನ್ನು ಉಳಿದಿರುವ ದಿನಗಳಲ್ಲಿ ಹೇಗೆ, ಎಲ್ಲಿ, ಯಾವಾಗ, ಏನೇನು ಕೆಲಸಗಳನ್ನು ಕೈಗೊಳ್ಳಬೇಕು ಎಂಬುದಾಗಿ ವೇಳಾಪಟ್ಟಿಯನ್ನು ಹಾಕಿ ಕೊಡಲಾಯಿತು ಮತ್ತು ಮುಂದಿನ ವರ್ಷದ ಕೂಲಿ ಆಯವ್ಯಯವನ್ನು ಕಾಲಮಿತಿಯಲ್ಲಿ ತಯಾರಿಸಿ. ಕಾಲಕ್ಕೆ ಸರಿಯಾಗಿ ಕಾಮಗಾರಿಗಳ ಕಾರ್ಯಾದೇಶ ಗಳನ್ನು ನೀಡಿ ಕಾಮಗಾರಿಗಳನ್ನು ನಿರ್ವಹಿಸಿ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿ, ಕೂಲಿಕಾರರಿಗೆ ನಿಗಧಿತ ಸಮಯದಲ್ಲಿ ಕೂಲಿ ಪಾವತಿಯಾಗುವಂತೆ ವೈಯಕ್ತಿಕ ಕಾಮಗಾರಿಗಳಿಗೆ ಸಕಾಲದಲ್ಲಿ ಹಣ ಬಿಡುಗಡೆಯಾಗುವಂತೆ, ಕ್ರಮಬದ್ಧವಾಗಿ ವಹಿಗಳನ್ನು ನಿರ್ವಹಿಸಿ, ಎಂಐಎಸ್ ನಲ್ಲಿ ಅಳವಡಿಸಿ ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಯುದ್ಧದೋಪಾದಿಯಲ್ಲಿ ಕಾರ್ಯನಿರ್ವಹಿಸಲು ಅಧಿಕಾರಿ / ನೌಕರರಿಗೆ ಕಟ್ಟುನಿಟ್ಟಾಗಿ ಸೂಚನೆ ನೀಡಲಾಯಿತು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಈ ಎಲ್ಲಾ ಕಾರ್ಯಕ್ರಮಗಳ ನೇತೃತ್ವವನ್ನು ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ (ಅಭಿವೃದ್ಧಿ) ರವರು ಹಾಗೂ ಜಿಲ್ಲಾ ಐಇಸಿ ಸಂಯೋಜಕರು ವಹಿಸಿಕೊಂಡು ತರಬೇತಿ ಹಾಗೂ ಸಂವಾದ ಕಾರ್ಯಕ್ರಮವನ್ನು ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಯಶಸ್ವಿಯಾಗಿ ನಿರ್ವಹಿಸಲಾಯಿತು.

ಜಿಲ್ಲಾಡಳಿತದ ಈ ಪ್ರಯತ್ನಕ್ಕೆ ಜನ–ಪ್ರತಿನಿಧಿಗಳು, ಪತ್ರಕರ್ತರು, ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಸಹಕಾರ ನೀಡಿ ತರಬೇತಿ ಹಾಗೂ ಸಂವಾದ ಕಾರ್ಯಕ್ರಮ ಗಳನ್ನು ಅರ್ಥಪೂರ್ಣವಾಗಿಸಿರುತ್ತಾರೆ. ಈ ಎಲ್ಲಾ ಪ್ರಯತ್ನಗಳ ಫಲವಾಗಿ ಈ ಬಾರಿಯು ಕೆಟ್ಟವರದ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಬಹುದು ಎಂಬ ನಂಬಿಕೆ ದೃಢವಾಗಿರುತ್ತದೆ.

ಲೇಖನ

# ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಮುಖ ಪ್ರಕರಣಗಳಿಗೆ ಸಂಕ್ಷಿಪ್ತ ವಿವರಣೆ

## ಭಾಗ–2 (ಅಂತಿಮ)

– ನಿಂಗೇಗೌಡ

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಮುಖ ಪ್ರಕರಣಗಳಿಗೆ ಸಂಬಂಧಿಸಿದ ಮಾಹಿತಿ.

1. ಯಾವುದೇ ಚಿಕ್ಕ ನಗರ ಪ್ರದೇಶ ಅಥವಾ ಪಟ್ಟಣ ಪಂಚಾಯತಿಗಳನ್ನು ಗ್ರಾಮ ಪಂಚಾಯತಿಯನ್ನಾಗಿ ಪರಿವರ್ತಿಸಬಹುದು. ಇಂಥಹ ಪಂಚಾಯತಿಗಳು ಮಧ್ಯಕಾಲೀನ ಗ್ರಾಮ ಪಂಚಾಯತಿಯೆಂದು ಪರಿಗಣಿಸಿ 5 ವರ್ಷದೊಳಗೆ ಒಂದು ಹೊಸ ಗ್ರಾಮ ಪಂಚಾಯತಿಯನ್ನು ರಚಿಸಬಹುದು. (ಪ್ರಕರಣ–115,116). ದೊಡ್ಡ ಗ್ರಾಮ ಪಂಚಾಯತಿಗಳನ್ನು ವಿಭಜಿಸಬಹುದು. ಈ ಎಲ್ಲಾ ಪ್ರಕರಣಗಳನ್ನು ಜಿಲ್ಲಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಸರ್ಕಾರ ಅಧಿಕೃತವಾಗಿ ಘೋಷಿಸಬಹುದು.

2. **ತಾಲ್ಲೂಕು ಪಂಚಾಯತಿಗಳು:–** ಪ್ರತಿಯೊಂದು ತಾಲ್ಲೂಕಿನ ಪಟ್ಟಣ ಪ್ರದೇಶ, ಕೈಗಾರಿಕಾ ಉಪನಗರದ ಭಾಗಗಳನ್ನು ಹೊರತುಪಡಿಸಿದ ಭಾಗಕ್ಕೆ ಅಧಿಕಾರದ ವ್ಯಾಪ್ತಿಯನ್ನು ಹೊಂದಿರುವ ಒಂದು ತಾಲ್ಲೂಕು ಪಂಚಾಯತಿಯನ್ನು ಸ್ಥಾಪಿಸಬೇಕು, ಈ ತಾಲ್ಲೂಕು ಪಂಚಾಯತಿಯು ಕೆಳಕಂಡ ಸದಸ್ಯರುಗಳನ್ನು ಹೊಂದಿರುತ್ತದೆ.

   1) ತಾಲ್ಲೂಕು ಪಂಚಾಯತಿ ಕ್ಷೇತ್ರಗಳಿಂದ ಚುನಾಯಿತರಾದ ಸದಸ್ಯರು
   2) ತಾಲ್ಲೂಕು ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿನ ಚುನಾಯಿತ ಲೋಕಸಭಾ ಹಾಗೂ ವಿಧಾನಸಭಾ ಸದಸ್ಯರು
   3) ತಾಲ್ಲೂಕು ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿ ಮತದಾರರಾಗಿ ನೋಂದಾಯಿತರಾಗಿರುವ ರಾಜ್ಯಸಭಾ ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು
   4) ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಚೀಟಿ ಎತ್ತುವ ಮೂಲಕ ಸರದಿಯ ಪ್ರಕಾರ ತಾಲ್ಲೂಕಿನ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳ ಸಂಖ್ಯೆಯ ಐದನೇಯ–ಒಂದರಷ್ಟು(ಈ ಪೈಕಿ ಒಬ್ಬರು ಮಹಿಳೆ ಇರತಕ್ಕದ್ದು ಮತ್ತು ಪರಿಸಿಷ್ಟ ಜಾತಿ ಮತ್ತು ಪಂಗಡಗಳಿಂದ ಒಬ್ಬೊಬ್ಬರಂತೆ ಅಧ್ಯಕ್ಷರುಗಳನ್ನು ಒಳಗೊಂಡಿರುವುದು. (ಪ್ರಕರಣ–120)

   - ತಾಲ್ಲೂಕು ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ಹಾಗೂ ಅವಿಶ್ವಾಸ ನಿರ್ಣಯದ ಮಂಡನೆಯ ಸಭೆಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಸಭೆಗಳಲ್ಲಿ ಲೋಕಸಭಾ, ವಿಧಾನಸಭಾ, ರಾಜ್ಯಸಭಾ ಮತ್ತು ವಿಧಾನ ಪರಿಷತ್ ಸದಸ್ಯರು ಹಾಗೂ ನಾಮ ನಿರ್ದೇಶಿತವಾಗಿರುವ ಗ್ರಾಮ

ನಿವೃತ್ತ ಪೀಠಾಧಿಕಾರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪಂಚಾಯತ್ ಅಧ್ಯಕ್ಷರುಗಳು ಭಾಗವಹಿಸಬಹುದು. (ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸಬಹುದು ಆದರೆ ಸ್ಪರ್ಧೆಗೆ ಬಾಗವಹಿಸುವಂತಿಲ್ಲ)

3. ರಾಜ್ಯ ಚುನಾವಣಾ ಆಯೋಗದಿಂದ ರಾಜ್ಯ ಚುನಾವಣಾ ಕ್ಷೇತ್ರಗಳನ್ನು ನಿರ್ಧರಿಸಲಾಗುವುದು. ಪ್ರತಿ ಹನ್ನೆರಡು ಸಾವಿರದ ಐದುನೂರು ಮತ್ತು ಹದಿನೈದು ಸಾವಿರ ಜನ ಸಂಖ್ಯೆಗೆ ಒಬ್ಬ ಸದಸ್ಯರನ್ನು ಚುನಾಯಿಸಬೇಕು. ಸದಸ್ಯರ ಸ್ಥಾನಗಳನ್ನು ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಠ ಜಾತಿ ಅಥವಾ ಪರಿಶಿಷ್ಠ ಪಂಗಡಗಳಿಗೆ, ಅವರುಗಳ ಜನಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಹಾಗೆ ಆ ವರ್ಗಗಳಿಗೆ ಸ್ಥಾನಗಳ ಸಂಖ್ಯೆಯನ್ನು ಮೀಸಲಿಡಲಾಗಿದೆ, ಪ್ರತಿ ತಾಲ್ಲೂಕು ಪಂಚಾಯತಿಯಲ್ಲಿ ಪರಿಶಿಷ್ಠ ಜಾತಿ ಮತ್ತು ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಕನಿಷ್ಠ ಒಂದೊಂದು ಸ್ಥಾನವನ್ನು ಮೀಸಲಿಡಲಾಗಿದೆ. ತಾಲ್ಲೂಕು ಪಂಚಾಯತಿಯ ಒಟ್ಟು ಸ್ಥಾನಗಳಲ್ಲಿ ಮೂರನೇ ಒಂದು ಭಾಗವನ್ನು ಹಿಂದುಳಿದ ವರ್ಗಗಳಿಗೆ ಮೀಸಲಿಡಬೇಕು. ಈ ಮೀಸಲಾತಿಯಲ್ಲಿ ಶೇಕಡ 80 ರಷ್ಟು ಸ್ಥಾನವನ್ನು ಹಿಂದುಳಿದ ವರ್ಗ–ಎ ಪ್ರವರ್ಗ ಹಾಗೂ ಇನ್ನುಳಿದ ಶೇಕಡಾ 20 ರಷ್ಟು ಸ್ಥಾನವನ್ನು ಹಿಂದುಳಿದ ವರ್ಗ– ಬಿ ಪ್ರವರ್ಗಕ್ಕೂ ಮೀಸಲಿಡಲಾಗಿದೆ. ತಾಲ್ಲೂಕು ಸದಸ್ಯರುಗಳ ಒಟ್ಟು ಸಂಖ್ಯೆಯ 50 ರಷ್ಟು ಸ್ಥಾನಗಳಿಗಿಂತ ಹೆಚ್ಚಿನ ಮೀಸಲಾತಿಗೆ ಅವಕಾಶವಿಲ್ಲ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಹಿಂದುಳಿದ ವರ್ಗ–ಅ, ಹಿಂದುಳಿದ ವರ್ಗ–ಬ, ಹಾಗೂ ಸಾಮಾನ್ಯ ವರ್ಗದ ಎಲ್ಲಾ ಸ್ಥಾನಗಳಲ್ಲಿ ಶೇಕಡಾ 50 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. (ಪ್ರಕರಣ–123, 124)

4. ಯಾವುದೇ ವ್ಯಕ್ತಿ ಕ್ರಿಮಿನಲ್ ಅಪರಾಧಗಳಿಗೆ ಶಿಕ್ಷೆಗೆ ಒಳಪಟ್ಟಿದ್ದರೆ, ಪಕ್ಷಾಂತರ ನಿಷೇಧ ಅಧಿನಿಯಮದಡಿಯಲ್ಲಿ ಅನರ್ಹನಾಗಿದ್ದರೆ, ಸ್ಥಳೀಯ ಪ್ರಾಧಿಕಾರದ ಸೇವೆಯಿಂದ ಅಥವಾ ಸದಸ್ಯತ್ವದಿಂದ ವಜಾಗೊಂಡಿದ್ದರೆ ಸದಸ್ಯನಾಗಲು ಅನರ್ಹತೆ ಹೊಂದಿರುತ್ತಾರೆ. (ಪ್ರಕರಣ–128)

5. ಚುನಾಯಿತ ಸದಸ್ಯರು, ಚುನಾಯಿತನಾಗುವ ಪೂರ್ವದಲ್ಲಿ ಯಾವುದಾದರೂ ಚುನಾಯಿತ ಸಂಸ್ಥೆಗಳಿಗೆ ಅಂದರೆ, ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್, ಮುನ್ಸಿಪಲ್ ಸಂಸ್ಥೆಗಳು ಅಥವಾ ಇತರೆ ಪಂಚಾಯತ್ ಸಂಸ್ಥೆಗಳಿಗೆ ಸದಸ್ಯನಾಗಿದ್ದರೆ, ಅವುಗಳಿಗೆ 15 ದಿನದೊಳಗಾಗಿ ರಾಜಿನಾಮೆಯನ್ನು ನೀಡದಿದ್ದರೆ, ಚುನಾಯಿತ ಸದಸ್ಯನು, ಅವನು ಚುನಾಯಿತನಾಗಿರುವ ಈಗಿನ ಸ್ಥಾನವನ್ನು ಕಳೆದುಕೊಳ್ಳುತ್ತಾನೆ. ಒಬ್ಬ ವ್ಯಕ್ತಿಯು ಏಕ ಕಾಲದಲ್ಲಿ 2 ಚುನಾವಣಾ ಕ್ಷೇತ್ರದಿಂದ ಸದಸ್ಯನಾಗಲು ಅವಕಾಶವಿರುವುದಿಲ್ಲ. ಒಂದು ಕ್ಷೇತ್ರಕ್ಕೆ ರಾಜಿನಾಮೆ ನೀಡಬೇಕು(ಪ್ರಕರಣ–131).

6. ಚುನಾವಣೆಯ ನಂತರ ಚುನಾಯಿತ ಅಭ್ಯರ್ಥಿಯು ಸಲ್ಲಿಸಿದ್ದ ದಾಖಲೆಗಳ ಬಗ್ಗೆ ಅಥವಾ ಚುನಾವಣೆಯ ವಿಧಾನಗಳ ಬಗ್ಗೆ ಯಾವುದೇ ವ್ಯಕ್ತಿ ತಕರಾರು ಅರ್ಜಿಯನ್ನು ಗೊತ್ತುಪಡಿಸಿದ ನ್ಯಾಯಾಲಯದಲ್ಲಿ ದಾಖಲಿಸಬೇಕು. ಈ ಬಗ್ಗೆ ಚುನಾವಣೆಯನ್ನು ಊರ್ಜಿತ ಅಥವಾ ಅನೂರ್ಜಿತ ಎಂದು ಘೋಷಿಸಲು ನ್ಯಾಯಾಲಯ ಸಕ್ಷಮ ಪ್ರಾಧಿಕಾರವಾಗಿರುತ್ತದೆ. ತಾಲ್ಲೂಕು ಪಂಚಾಯತಿ ಸದಸ್ಯರು ತನ್ನ ಸಹಿ ಸಹಿತ ಪತ್ರದ ಮೂಲಕ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡುವ ಮನವಿಯನ್ನು ತಾಲ್ಲೂಕು ಪಂಚಾಯತಿ ಅಧ್ಯಕ್ಷರಿಗೆ ಸಲ್ಲಿಸಬಹುದು. 15 ದಿನದೊಳಗೆ ರಾಜಿನಾಮೆಯನ್ನು ಹಿಂತೆಗೆದುಕೊಳ್ಳದಿದ್ದಲ್ಲಿ ತಾಲ್ಲೂಕು ಪಂಚಾಯತಿ ಅಧ್ಯಕ್ಷರು ರಾಜಿನಾಮೆ ಪತ್ರವನ್ನು ತಾಲ್ಲೂಕು ಪಂಚಾಯತಿ ಸಭೆಗೆ ಮಂಡಿಸಿ ಅಂಗೀಕರಿಸಬಹುದಾಗಿದೆ.

7. ತಾಲ್ಲೂಕು ಪಂಚಾಯತಿ ಸದಸ್ಯರನ್ನು ದುರ್ನಡತೆ, ತಲೆ ತಗ್ಗಿಸುವಂತ ನಡತೆ, ವೈದ್ಯಕೀಯವಾಗಿ ಅಸಮರ್ಥತೆ, ಕರ್ತವ್ಯ ನಿರ್ವಹಣೆಯ ಅಸಮರ್ಥತೆ, ಕಾರಣಕ್ಕಾಗಿ ಸದಸ್ಯತ್ವದಿಂದ ಸರ್ಕಾರ ತೆಗೆದು ಹಾಕಬಹುದು. ಈ ಬಗ್ಗೆ ಕ್ರಮ ವಹಿಸುವ ಮುನ್ನ ವಿಚಾರಣೆ ನಡೆಸಿ ಸದಸ್ಯತ್ವದಿಂದ ತೆಗೆದು ಹಾಕಬಹುದಾಗಿದೆ. (ಪ್ರಕರಣ 136). ತಾಲ್ಲೂಕು ಪಂಚಾಯತಿ ಸದಸ್ಯರಿಂದ ಆಸ್ತಿಗಳ ಮತ್ತು ಹೊಣೆಗಾರಿಕೆಗಳ ಘೋಷಣೆಯನ್ನು ಚುನಾಯಿತ ಸದಸ್ಯರು ರೂ. 2 ಲಕ್ಷಕ್ಕಿಂತ ಹೆಚ್ಚಿರುವ ತಮ್ಮ ಆಸ್ತಿ ಮತ್ತು

ಹೊಣೆಗಾರಿಕೆಗಳನ್ನು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿ ಮುಖಾಂತರ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ತಪ್ಪು ಮಾಹಿತಿ ನೀಡಿದ್ದರೆ ಅಥವಾ ಮಾಹಿತಿಯನ್ನು ನೀಡದಿದ್ದರೆ ಅಂಥಹ ಸದಸ್ಯನ ಸ್ಥಾನವನ್ನು ರಾಜ್ಯ ಚುನವಣಾ ಆಯೋಗ ನಿಯಮಾನುಸಾರ ಪರಿಶೀಲಿಸಿ ರದ್ದು ಮಾಡಬಹುದಾಗಿದೆ. (ಪ್ರಕರಣ 136-ಬಿ)

8. ತಾಲ್ಲೂಕು ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಸ್ಥಾನಗಳಿಗೆ ರಾಜ್ಯ ಸರ್ಕಾರವು ಮೀಸಲಾತಿಯನ್ನು ನಿಗಧಿಗೊಳಿಸುವ ಅಧಿಕಾರ ವನ್ನು ಹೊಂದಿದೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ರಾಜ್ಯದಲ್ಲಿರುವ ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಪಂಗಡಗಳ ಜನಸಂಖ್ಯೆಯ ಅನುಪಾತದಲ್ಲಿ ಒಟ್ಟು ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳು ಅನುಸೂಚಿತ ಜಾತಿ ಮತ್ತು ಪಂಗಡದವರಿಗೆ ಮೀಸಲಿರಿಸಬೇಕು. ತಾಲ್ಲೂಕು ಪಂಚಾಯತಿ ಅಧ್ಯಕ್ಷ/ಉಪಾಧ್ಯಕ್ಷ ಸ್ಥಾನಗಳ ಒಟ್ಟು ಸಂಖ್ಯೆಯಲ್ಲಿ 1/3 ಸ್ಥಾನಗಳನ್ನು ಹಿಂದುಳಿದ ವರ್ಗಗಳ ವ್ಯಕ್ತಿಗಳಿಗಾಗಿ ಮೀಸಲಿಡ ಬೇಕು. ಗ್ರಾಮ ಪಂಚಾಯತಿಗಳ ಒಟ್ಟು ಸ್ಥಾನಗಳಲ್ಲಿ ಶೇ.50 ರಷ್ಟಕ್ಕೆ ಕಡಿಮೆ ಇಲ್ಲದ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು. (ಪ್ರಕರಣ-138). ಒಂದು ವೇಳೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗಳು ಪ.ಜಾ. ಅಥವಾ ಪ.ವ.ಕ್ಕೆ ಮೀಸಲಾಗಿದ್ದು, ಆ ಅಭ್ಯರ್ಥಿಗಳು ಲಭ್ಯವಿಲ್ಲ ದಿದ್ದಲ್ಲಿ, ಪ.ಜಾ. ಸ್ಥಾನಕ್ಕೆ ಪ.ವರ್ಗದ ಅಭ್ಯರ್ಥಿಯನ್ನು, ಪ.ವರ್ಗದ ಸ್ಥಾನಕ್ಕೆ ಪ.ಜಾ. ಅಭ್ಯರ್ಥಿಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶವಿರುತ್ತದೆ.

9. ತಾಲ್ಲೂಕು ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಚುನಾವಣೆಯನ್ನು ನಿಗದಿ ಗೊಳಿಸಿರುವ ನಿಯಮಗಳನುಸಾರ ಮತ್ತು ಮೀಸಲಾತಿಗೆ ಅನುಸಾರ ನಡೆಸಬೇಕಾಗಿದೆ. ಈ ನಿಯಮಗಳ ಅನ್ವಯ ಈ ಹುದ್ದೆಗಳ ಚುನಾವಣೆಯ ಸಭೆಗೆ ಹಾಜರಿದ್ದ ಸದಸ್ಯರ ಬಹುಮತದಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗೆ ಆಯ್ಕೆ ಮಾಡತಕ್ಕದ್ದು (ಪ್ರಕರಣ-138). ತಾಲ್ಲೂಕು ಪಂಚಾಯತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿ 5 ವರ್ಷ. ಅಥವಾ ಅವರ ಸ್ಥಾನ ಖಾಲಿಯಾಗುವವರೆಗೆ. ತಾಲ್ಲೂಕು ಪಂಚಾಯತಿಯ ಅಧ್ಯಕ್ಷ ಹುದ್ದೆ ಖಾಲಿ ಇರುವ ಅವಧಿಯಲ್ಲಿ ಉಪಾಧ್ಯಕ್ಷನು ಅಧ್ಯಕ್ಷ ಹುದ್ದೆಯ ಅಧಿಕಾರಗಳನ್ನು ಚಲಾಯಿಸಬಹುದಾಗಿದೆ. ಅಧ್ಯಕ್ಷರು, ಉಪಾಧ್ಯಕ್ಷರು ಇಲ್ಲದಿದ್ದಾಗ ಸಂಬಂಧಿಸಿದ ತಾಲ್ಲೂಕು ಪಂಚಾಯತಿಯ ಸಾಮಾಜಿಕ ನ್ಯಾಯ ಸಮಿತಿಯ ಅಧ್ಯಕ್ಷನು ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸ ಬಹುದಾಗಿದೆ. (ಪ್ರಕರಣ-140(6)). ತಾಲ್ಲೂಕಿನಲ್ಲಿ ಉಂಟಾಗುವ ಪ್ರಕೃತಿ ವಿಕೋಪಗಳ ನಷ್ಟಕ್ಕೆ ರೂ. 1 ಲಕ್ಷ ಪರಿಹಾರ ಮೊತ್ತವನ್ನು ಮಂಜೂರು ಮಾಡಬಹುದು.

10. ಕರ್ತವ್ಯ ನಿರ್ವಹಣೆಯಲ್ಲಿ ನಿರಂತರ ಅಲಕ್ಷತೆ, ದುರ್ನಡತೆಗಾಗಿ ತಾಲ್ಲೂಕು ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರನ್ನು ಸರ್ಕಾರವು ಸೂಕ್ತ ವಿಚಾರಣೆ ನಡೆಸಿದ ನಂತರ ತೆಗೆದು ಹಾಕುವ ಅಧಿಕಾರ ಹೊಂದಿರುತ್ತದೆ.(ಪ್ರಕರಣ-140)

11. ತಾಲ್ಲೂಕು ಪಂಚಾಯತಿ ಅಧ್ಯಕ್ಷರು ತಮ್ಮ ಹುದ್ದೆಗೆ ರಾಜಿನಾಮೆ ನೀಡುವ ಪತ್ರವನ್ನು ಜಿಲ್ಲಾಧಿಕಾರಿಗೆ ಹಾಗೂ ಉಪಾಧ್ಯಕ್ಷನು ತನ್ನ ಹುದ್ದೆಗೆ ರಾಜಿನಾಮೆ ನೀಡುವ ಪತ್ರವನ್ನು ತಾಲ್ಲೂಕು ಪಂಚಾಯತಿ ಅಧ್ಯಕ್ಷರಿಗೆ, ಅವರು ಲಭ್ಯವಿಲ್ಲದಿದ್ದರೆ ಜಿಲ್ಲಾಧಿಕಾರಿಗೆ ಸಲ್ಲಿಸಬೇಕು. 15 ದಿನದೊಳಗೆ ಹಿಂತೆಗೆದುಕೊಳ್ಳದಿದ್ದರೆ ರಾಜಿನಾಮೆಯನ್ನು ಅಂಗೀಕಾರವಾಗಿದೆ ಎಂದು ಭಾವಿಸುವುದು. (ಪ್ರಕರಣ-140)

12. ತಾಲ್ಲೂಕು ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಮಂಡಿಸುವ ನಿರ್ಣಯದ ಸಭೆಗೆ ಚುನಾಯಿತ ಸದಸ್ಯರ ಪೈಕಿ ಅರ್ಧದಷ್ಟು ಮಂದಿ ಸಹಿ ಮಾಡಿರುವ ನೋಟೀಸನ್ನು ಸಲ್ಲಿಸಬೇಕು. ಅವಿಶ್ವಾಸ ನಿರ್ಣಯಕ್ಕೆ ಒಟ್ಟು ಚುನಾಯಿತ ಸದಸ್ಯರಲ್ಲಿ ಮೂರನೇ ಎರಡರಷ್ಟು ಸದಸ್ಯರು ಬಹುಮತ ದಿಂದ ಅಂಗೀಕರಿಸಿದರೆ ಆ ಹುದ್ದೆಗಳು ತೆರವಾಗುವುದು ಎಂದು ಭಾವಿಸತಕ್ಕದ್ದು. ಈ ನಿರ್ಣಯದ ದಿನಾಂಕದಿಂದ 30 ತಿಂಗಳೊಳಗೆ ಪುನಃ ಅವಿಶ್ವಾಸ ನಿರ್ಣಯವನ್ನು ಮಂಡಿಸು

ವಂತಿಲ್ಲ. (ಪ್ರಕರಣ–140)

13. ತಾಲ್ಲೂಕು ಪಂಚಾಯತಿಯ ಕಾರ್ಯಕಲಾಪಗಳ ನಿರ್ವಹಣೆಗೆ ಪ್ರತಿ ಎರಡು ತಿಂಗಳಲ್ಲಿ ಒಂದು ಸಾರಿ ಸಾಮಾನ್ಯ ಸಭೆಯನ್ನು ನಡೆಸಬೇಕು. ಸಭೆಯನ್ನು ನಡೆಸಲು 10 ಪೂರ್ಣ ದಿನಗಳ ನೋಟೀಸನ್ನು ನೀಡಬೇಕು. ಸಭೆಯನ್ನು ನಡೆಸಲು ಸದಸ್ಯರ ಒಟ್ಟು ಸಂಖ್ಯೆಯ ಅರ್ಧದಷ್ಟು ಮಂದಿಯ ಹಾಜರಾತಿ ಸಭೆಯ ಕೋರಂ ಆಗಿರತಕ್ಕದ್ದು. ಕೋರಂ ಇಲ್ಲದಿದ್ದರೆ 30 ನಿಮಿಷ ಮುಂದೂಡತಕ್ಕದ್ದು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರು ವಹಿಸತಕ್ಕದ್ದು. ಅವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಅಧ್ಯಕ್ಷತೆ ವಹಿಸುವುದು. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇಲ್ಲದಿದ್ದಾಗ ಹಾಜರಿರುವ ಸದಸ್ಯರು ತಮ್ಮಲ್ಲಿಯೇ ಒಬ್ಬನನ್ನು ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡುವುದು. ಒಟ್ಟು ಸದಸ್ಯರ ಮೂರನೇ ಒಂದು ಭಾಗಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರು ಸಹಿ ಮಾಡಿ ಲಿಖಿತ ಕೋರಿಕೆಯನ್ನು ಸಲ್ಲಿಸಿದರೆ 15 ದಿನದೊಳಗೆ ವಿಶೇಷ ಸಭೆಯನ್ನು ನಡೆಸಬೇಕು. ವಿಶೇಷ ಸಭೆಗಳಿಗೆ 7 ಪೂರ್ಣ ದಿನಗಳ ನೋಟೀಸನ್ನು ನೀಡಬೇಕು.(ಪ್ರಕರಣ–148). ಸಾಮಾನ್ಯ ಸಭೆಗಳಿಗೆ ತಾಲ್ಲೂಕು ಪಂಚಾಯತಿ ವ್ಯಾಪ್ತಿಯ ಸರ್ಕಾರದ ಯಾವುದೇ ಇಲಾಖೆಯ ಅಧಿಕಾರಿಗಳನ್ನು ಸಭೆಗೆ ಕರೆಸಬಹುದು.

14. ತಾಲ್ಲೂಕು ಪಂಚಾಯತಿಯ ಪ್ರಮುಖ ಕರ್ತವ್ಯಗಳೆಂದರೆ, (ಪ್ರಕರಣ–145,146),

1) ಪ್ರತೀ ವ್ಯಕ್ತಿಗೆ 40 ಲೀಟರ್ ಕಡಿಮೆ ಇಲ್ಲದಂತೆ ನೀರು ಪೂರೈಸುವುದು ಹಾಗೂ ನೀರು ಪೂರೈಕೆ ಕಾಮಗಾರಿಗಳನ್ನು ನಿರ್ಮಿಸುವುದು

2) ಗ್ರಾಮ ಸಭೆ ವಾರ್ಡ್ ಸಭೆ ಹಾಗೂ ಜನವಸತಿ ಸಭೆಗಳು ನಡೆಯುತ್ತಿರುವ ಬಗ್ಗೆ ಉಸ್ತುವಾರಿ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸುವುದು.

3) ವೈಯಕ್ತಿಕ ಮತ್ತು ಸಮುದಾಯ ಶೌಚಗೃಹವನ್ನು ನಿರ್ಮಿಸುವುದು.

4) ಗ್ರಾಮ ಪಂಚಾಯತಿಗಳು ತೆರಿಗೆ ವಸೂಲು ಮಾಡುತ್ತಿರುವ ಬಗ್ಗೆ ಹಾಗೂ ವಿದ್ಯುತ್ ಶುಲ್ಕಗಳನ್ನು ಸಂದಾಯ ಮಾಡುವುದನ್ನು ಖಾತರಿ ಮಾಡಿಕೊಳ್ಳುವುದು.

5) ಪ್ರಾಥಮಿಕ ಶಾಲಾ ಕಟ್ಟಡ ನಿರ್ವಹಣೆ, ಮಕ್ಕಳನ್ನು ಶಿಕ್ಷಣಕ್ಕೆ ಒಳಪಡಿಸುವ ಜವಾಬ್ದಾರಿಯನ್ನು ನಿರ್ವಹಿಸುವುದು. ಶಾಲಾ ಕಟ್ಟಡಗಳಿಗೆ ನೀರು ಪೂರೈಕೆ ಹಾಗೂ ನೈರ್ಮಲ್ಯ ವ್ಯವಸ್ಥೆ ನಿರ್ವಹಿಸುವುದು.

6) ಗ್ರಾಮದಲ್ಲಿ ವಾಸದ ಮನೆಗಳಿಂದ ದೂರಕ್ಕೆ ಗೊಬ್ಬರದ ಗುಂಡಿಗಳನ್ನು ಸ್ಥಳಾಂತರ ಮಾಡಬೇಕು ಹಾಗೂ ಈ ಬಗ್ಗೆ ಜನಜಾಗೃತಿ ಮೂಡಿಸುವುದು.

7) ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಯೋಜನೆಗಳ ಕ್ರೋಢೀಕರಣ, ಸಾಮಾಜಿಕ ಅರಣ್ಯ ಮತ್ತು ಜೀವ ವೈವಿಧ್ಯತೆ ಯೋಜನೆಗಳನ್ನು ರೂಪಿಸುವುದು ಹಾಗೂ ಅಪಾಯಕಾರಿ ಕಲ್ಲು ಗಣಿಗಾರಿಕೆ, ತೆರೆದ ಬಾವಿಗಳು ಮತ್ತು ನಿರುಪಯುಕ್ತ ಕೊಳವೆ ಬಾವಿಗಳನ್ನು ಮುಚ್ಚಿಸುವುದು. ಮುಂತಾದ ವಿವಿಧ ಪ್ರಕಾರ್ಯಗಳನ್ನು ನಿರ್ವಹಿಸಬೇಕಾಗಿದೆ.

15. ತಾಲ್ಲೂಕು ಪಂಚಾಯತಿ ಸ್ಥಾಯಿ ಸಮಿತಿಗಳು: ತಾಲ್ಲೂಕು ಪಂಚಾಯತಿಯಲ್ಲಿ ಮೂರು ಸ್ಥಾಯಿ ಸಮಿತಿಗಳಿರುತ್ತವೆ,

1) ಸಾಮಾನ್ಯ ಸ್ಥಾಯಿ ಸಮಿತಿ 2) ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿ ಹಾಗೂ 3) ಸಾಮಾಜಿಕ ನ್ಯಾಯ ಸಮಿತಿ (ಪ್ರಕರಣ–149)

ಪ್ರತಿಯೊಂದು ಸ್ಥಾಯಿ ಸಮಿತಿಗೆ ತಾಲ್ಲೂಕು ಪಂಚಾಯತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿ ಚುನಾಯಿತ ಅಧ್ಯಕ್ಷರನ್ನು ಸೇರಿದಂತೆ ಆರು ಸದಸ್ಯರನ್ನು ಒಳಗೊಂಡಿರುತ್ತದೆ. ಪ್ರತಿಯೊಬ್ಬ ಸ್ಥಾಯಿ ಸಮಿತಿಯ ಸದಸ್ಯರ ಅವಧಿಯು ಆತನನ್ನು ಚುನಾಯಿಸಿದ ದಿನಾಂಕದಿಂದ 20 ತಿಂಗಳು ಅಥವಾ ಅವನು ಸದಸ್ಯನಾಗಿ ನಿಂತು ಹೋಗುವವರೆಗೆ. ಯಾವುದೇ ಚುನಾಯಿತ ಸದಸ್ಯನು ಒಂದಕ್ಕಿಂತ ಹೆಚ್ಚು ಸ್ಥಾಯಿ ಸಮಿತಿಯಲ್ಲಿ ಸೇರಿರಬಾರದು.

ಸಾಮಾಜಿಕ ನ್ಯಾಯ ಸಮಿತಿಯು ಕನಿಷ್ಠ ಒಬ್ಬ ಮಹಿಳಾ ಸದಸ್ಯಳನ್ನು ಮತ್ತು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳಲ್ಲಿ ಯಾವುದು ಹೆಚ್ಚಿನ ಸಂಖ್ಯೆಯ ಚುನಾಯಿತ ಸದಸ್ಯರನ್ನು ಹೊಂದಿರುವುದೋ ಅದರ ಒಬ್ಬ ಸದಸ್ಯರನ್ನು ಒಳಗೊಂಡಿರತಕ್ಕದ್ದು.

ತಾಲ್ಲೂಕು ಪಂಚಾಯತಿ ಅಧ್ಯಕ್ಷರು ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷರಾಗಿರುತ್ತಾರೆ. ತಾಲ್ಲೂಕು ಪಂಚಾಯತಿ ಉಪಾಧ್ಯಕ್ಷರು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷರಾಗಿರುತ್ತಾರೆ. ಇತರೆ ಸ್ಥಾಯಿ ಸಮಿತಿಗೆ ಸದಸ್ಯರುಗಳ ಪೈಕಿ ಒಬ್ಬನನ್ನು ಅಧ್ಯಕ್ಷನಾಗಿ ಚುನಾಯಿಸಿಕೊಳ್ಳುವುದು.

ಸಾಮಾನ್ಯ ಸ್ಥಾಯಿ ಸಮಿತಿಯು ಸಿಬ್ಬಂದಿಗಳ ವಿಷಯ, ಗ್ರಾಮೀಣ ಗೃಹ ನಿರ್ಮಾಣ, ನೀರು ಸರಬರಾಜು ಹಾಗೂ ನೈಸರ್ಗಿಕ ವಿಪತ್ತುಗಳಿಗೆ ಪರಿಹಾರ ನೀಡುವ ವಿಷಯುಗಳನ್ನು ನಿರ್ವಹಿಸುತ್ತದೆ.

ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿಯು ತಾಲ್ಲೂಕು ಪಂಚಾಯತಿಯ ಅದಾಯ ಮತ್ತು ವೆಚ್ಚದ ಸಾಮಾನ್ಯ ಮೇಲ್ವಿಚಾರಣೆ, ಆದಾಯ ವೃದ್ಧಿಪಡಿಸಲು ವಿವಿಧ ಯೋಜನೆಗಳನ್ನು ರೂಪಿಸುವುದು ಮತ್ತು ತಾಲ್ಲೂಕು ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ವಿಷಯಗಳ ಪರಿಶೀಲನೆ ಮತ್ತು ನಿರ್ವಹಣೆ.

ಸಾಮಾಜಿಕ ನ್ಯಾಯ ಸಮಿತಿಯು ಅನುಸೂಚಿತ ಜಾತಿ, ಪಂಗಡ, ಮಹಿಳೆಯರು ಮತ್ತು ಇತರ ದುರ್ಬಲ ವರ್ಗದವರ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು ಮತ್ತು ಸಾಮಜಿಕ ನ್ಯಾಯವನ್ನು ದೊರಕಿಸುವ ವಿಷಯಗಳ ಬಗ್ಗೆ ಪರಿಶೀಲನೆ.

16. ತಾಲ್ಲೂಕು ಪಂಚಾಯತಿ ಅಧ್ಯಕ್ಷರು ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಮುಖ್ಯಸ್ಥರಾಗಿರುತ್ತಾರೆ. ತಾಲ್ಲೂಕು ಪಂಚಾಯತಿಯ ಆಡಳಿತ, ಹಣಕಾಸಿನ ನಿಯಂತ್ರಣ ಹಾಗೂ ಸಮಗ್ರ ಮೇಲ್ವಿಚಾರಣೆ ನಡೆಸುವ ಅಧಿಕಾರ ಹೊಂದಿರುತ್ತಾರೆ. ಪ್ರಕೃತಿ ವಿಕೋಪಗಳಲ್ಲಿ ತೊಂದರೆಗೊಳಗಾದವರಿಗೆ ಒಂದು ಲಕ್ಷ ರೂಪಾಯಿ ಪರಿಹಾರ ಮಂಜೂರು ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ಉಪಾಧ್ಯಕ್ಷರು, ಅಧ್ಯಕ್ಷರು ಗೈರು ಹಾಜರಾದಾಗ ಅಥವಾ ರಜೆಯ ಮೇಲಿದ್ದಾಗ ಅಥವಾ ಕಾರ್ಯನಿರ್ವಹಿಸಲು ಅಸಮರ್ಥರಾದಾಗ ಅಧ್ಯಕ್ಷರ ಕರ್ತವ್ಯಗಳನ್ನು ನಿರ್ವಹಿಸಲು ಅಧಿಕಾರವನ್ನು ಹೊಂದಿರುತ್ತಾರೆ.

17. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಆಡಳತಾತ್ಮಕ ಮುಖ್ಯಸ್ಥರಾಗಿರುತ್ತಾರೆ. ತಾಲ್ಲೂಕು ಪಂಚಾಯತಿ ಅಧ್ಯಕ್ಷನ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕೆ ಒಳಪಟ್ಟು ಹಾಗೂ ಇತರೆ ನಿಯಮಗಳ ಅಧೀನದಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿ ಮತ್ತು ನೌಕರರನ್ನು ನಿಯಂತ್ರಿಸುವುದು ಇವರ ಜವಾಬ್ದಾರಿ. ಸರ್ಕಾರವು ಕಾಲಕಾಲಕ್ಕೆ ವಹಿಸುವ ಇತರೆ ಎಲ್ಲಾ ಪ್ರಕಾರ್ಯಗಳನ್ನು ನಿರ್ವಹಿಸುವುದು. ತಾಲ್ಲೂಕು ಪಂಚಾಯತಿಯ ಎಲ್ಲಾ ಕಾಮಗಾರಿಗಳ ಮತ್ತು ಅಭಿವೃದ್ಧಿ ಯೋಜನೆಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆ ಮಾಡತಕ್ಕದ್ದು. ತಾಲ್ಲೂಕು ಪಂಚಾಯತಿಯ ನಿಧಿಯಿಂದ ಹಣವನ್ನು ತೆಗೆಯುವ ಮತ್ತು ಬಟವಾಡೆ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ. ತಾಲ್ಲೂಕು ಪಂಚಾಯತಿಯ ಪ್ರತಿಯೊಂದು ಸಭೆಗೆ ಹಾಜರಿರುವುದು. ಸಭೆಯಲ್ಲಿ ನಡೆಯುವ ಚರ್ಚೆಗಳ ಬಗ್ಗೆ ಮತ್ತು ಅಧ್ಯಕ್ಷರ ಪ್ರಕಾರ್ಯಗಳ ಬಗ್ಗೆ ಸೂಕ್ತ ಸಲಹೆಗಳನ್ನು ನೀಡುವುದು. ಸಭೆಯ ಯಾವುದೇ ತೀರ್ಮಾನ ಅಥವಾ ನಿರ್ಣಯಗಳು ಸಕಾರದ ನೀತಿ ಮತ್ತು ನಿಯಮಗಳಿಗೆ ವಿರುದ್ಧವಾಗಿದ್ದರೆ ಅದರ ಬಗ್ಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಮತ್ತು ಸಲಹೆ ನೀಡುವುದು. ಒಂದು ವೇಳೆ ಯಾವುದೆ ನಿರ್ಣಯ ನಿಯಮಗಳಿಗೆ ವಿರುದ್ಧವಾಗಿದ್ದರೆ ಅದರ ಪ್ರತಿಯನ್ನು ತನ್ನ ಅಭಿಪ್ರಾಯದ ಟಿಪ್ಪಣಿ ಯೊಂದಿಗೆ ಅಧ್ಯಕ್ಷರಿಗೆ ತಿಳಿಸುವುದು ಹಾಗೂ ಅದರ ಪ್ರತಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಕಳುಹಿಸಬೇಕು. ತಾಲ್ಲೂಕು ಪಂಚಾಯತಿಯು ವ್ಯಾಪ್ತಿಯ ಗ್ರಾಮ ಪಂಚಾಯತಿಗಳಿಂದ ಯಾವುದೇ ದಾಖಲೆಗಳನ್ನು

ಪರಿಶೀಲನೆಗೆ ಒಳಪಡಿಸಬಹುದು. ತಾಲ್ಲೂಕು ಪಂಚಾಯತಿ ವ್ಯಾಪ್ತಿಯ ಯಾವುದೇ ಬಾಕಿ ಹಣವನ್ನು ವಸೂಲಿ ಮಾಡುವುದಕ್ಕೆ ಭೂ ಕಂದಾಯ ಅಧಿನಿಯಮ 1994ರ ಉಪಬಂಧ ಗಳನುಸಾರ ಅಧಿಕಾರವನ್ನು ಹೊಂದಿರುತ್ತಾರೆ. (ಪ್ರಕರಣ–155,156). ಕಾರ್ಯನಿರ್ವಾಹಕ ಅಧಿಕಾರಿಯು, ಗ್ರಾಮ ಪಂಚಾಯತಿಗಳ ಮತ್ತು ತಾಲ್ಲೂಕು ಪಂಚಾಯತಿಗಳ ಲೆಕ್ಕ ಪರಿಶೋಧನಾ ವರದಿಯಲ್ಲಿ ಚರ್ಚಿಸದ ವಿಷಯಗಳಲ್ಲಿ ವಿಚಾರಣೆಯನ್ನು ನಡೆಸಿದ ತರುವಾಯ ಆಕ್ಷೇಪಿಸಿರುವ ವೆಚ್ಚದ ಬಗ್ಗೆ ಅನುಮತಿ ನೀಡಬಹುದು ಅಥವಾ ಕಾನೂನಿಗೆ ವಿರುದ್ಧ ವಾಗಿದ್ದರೆ ಅನುಮತಿ ನೀಡದಿರಬಹುದು ಹಾಗೂ ಸಂಬಂಧಪಟ್ಟ ವ್ಯಕ್ತಿಯಿಂದ ಆಕ್ಷೇಪಿತ ಮೊಬಲಗನ್ನು ಶೇ. 15ರಷ್ಟು ಬಡ್ಡಿಯ ಸಹಿತ ವಸೂಲಿ ಮಾಡಲು ಆದೇಶಿಸಬಹುದು. (ಪ್ರಕರಣ–146)

18. ತಾಲ್ಲೂಕು ಪಂಚಾಯತಿಗಳು ಸಾಲಗಳನ್ನು ಎತ್ತಬಹುದು ಮತ್ತು ಋಣ ಪರಿಹಾರ ನಿಧಿಯನ್ನು ಸ್ಥಾಪಿಸಬೇಕು. ಇದಕ್ಕಾಗಿ ಸರ್ಕಾರದ ಅನುಮತಿ ಪಡೆಯಬೇಕು. ತಾಲ್ಲೂಕು ಪಂಚಾಯತಿಗಳು ಚರ ಮತ್ತು ಸ್ಥಿರ ಆಸ್ತಿಗಳನ್ನು ಅರ್ಜಿಸಬಹುದು, ಧಾರಣ ಮಾಡಬಹುದು ಮತ್ತು ವಿಲೇವಾರಿ ಮಾಡಬಹುದು. ಇದಕ್ಕಾಗಿ ಸರ್ಕಾರ ನಿರ್ಧರಿಸಿರುವ ನಿಯಮಗಳನ್ನು ಪಾಲಿಸಬೇಕು. ತಾಲ್ಲೂಕು ಪಂಚಾಯತಿಯ ಆಡಳಿತ ವ್ಯಾಪ್ತಿಗೆ ಯಾವುದೇ ಸ್ವತ್ತನ್ನು ಸರ್ಕಾರ ಮತ್ತು ಜಿಲ್ಲಾ ಪಂಚಾಯತಿಯು ಷರತ್ತಿನ ಮೇರೆಗೆ ವರ್ಗಾಯಿಸಬಹುದು. ಇಂಥಹಾ ಸ್ವತ್ತನ್ನು ಸರ್ಕಾರ ಅಥವಾ ಜಿಲ್ಲಾ ಪಂಚಾಯತಿಯ ಅನುಮೋದನೆ ಇಲ್ಲದೆ ವಿಲೇ ಅಥವಾ ಇನ್ಯಾವುದೇ ಕ್ರಮವನ್ನು ಮಾಡುವಂತಿಲ್ಲ. (ಪ್ರಕರಣ–214, 215, 216, 224).

19. ತಾಲ್ಲೂಕು ಪಂಚಾಯತಿ ನಿಧಿ ಪ್ರತಿಯೊಂದು ತಾಲ್ಲೂಕು ಪಂಚಾಯುತಿಯು ತನಗೆ ಸರ್ಕಾರದಿಂದ ಬರುವ ಅನುದಾನ, ಯಾವುದೇ ತೆರಿಗೆ, ದರ ಮತ್ತು ಫೀಜುಗಳಿಂದ ಬಂದ ಆದಾಯ, ತನ್ನ ಮಾಲಿಕತ್ವದ ಸ್ಥರ ಮತ್ತು ಚರ ಸ್ವತ್ತಿನ ಬಾಡಿಗೆಗಳಿಂದ ಆದಾಯ ಮುಂತಾದ ಕೊಡುಗೆ, ಇನ್ನಿತರೆ ಆದಾಯಗಳನ್ನು ತಾಲ್ಲೂಕು ಪಂಚಾಯತಿ ನಿಧಿಯಲ್ಲಿ ಜಮೆ ಮಾಡಬೇಕು. ಮತ್ತು ಈ ಮೊತ್ತವನ್ನು ತಾಲ್ಲೂಕು ಪಂಚಾಯತಿಗೆ ವಹಿಸಲಾಗಿರುವ ಕರ್ತವ್ಯಗಳನ್ನು ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಲು ಬಳಸಬಹುದಾಗಿದೆ. ಶೇ.20 ಕ್ಕಿಂತ ಕಡಿಮೆ ಇಲ್ಲದಷ್ಟು ಮೊತ್ತವನ್ನು ಅನುಸೂಚಿತ ಜಾತಿಗಳ ಮತ್ತು ಪಂಗಡಗಳ ಕಲ್ಯಾಣಕ್ಕಾಗಿ ಉಪಯೋಗಿಸ ಬಹುದಾಗಿದೆ. ಈ ನಿಧಿಯಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವೇತನ ಭತ್ಯೆ ಇನ್ನಿತರೆ ಶುಲ್ಕ ಗಳನ್ನು ಪಾವತಿಸಲು ಬಳಸಿಕೊಳ್ಳಬಹುದಾಗಿದೆ. (ಪ್ರಕರಣ–220).

20. ತಾಲ್ಲೂಕು ಪಂಚಾಯತಿಯ ಹಣಕಾಸು, ಲೆಕ್ಕಪರಿಶೋಧನೆ ಮತ್ತು ಯೋಜನಾ ಸಮಿತಿಯು ಮುಂದಿನ ಆರ್ಥಿಕ ವರ್ಷದ ವಾಸ್ತವಿಕ ಮತ್ತು ನಿರೀಕ್ಷಿತ ಜಮೆ ಮತ್ತು ವೆಚ್ಚಗಳನ್ನು ಸಿದ್ದಪಡಿಸಬೇಕು. ಅದನ್ನು ಫೆಬ್ರವರಿ 1 ರಿಂದ ಮಾರ್ಚ್ 10 ರೊಳಗೆ ನಡೆಯುವ ತಾಲ್ಲೂಕು ಪಂಚಾಯತಿ ಸಭೆಯ ಮುಂದೆ ಮಂಡಿಸುವುದು. ತಾಲ್ಲೂಕು ಪಂಚಾಯತಿಯು ಏಪ್ರಿಲ್ ಒಂದನೇ ದಿನಾಂಕದಿಂದ ಪ್ರಾರಂಭ ವಾಗುವ ಆರ್ಥಿಕ ವರ್ಷದ ಆದಾಯ ಮತ್ತು ವೆಚ್ಚಗಳ ಅಂದಾಜನ್ನು ನಿರ್ಧರಿಸುವುದು ಹಾಗೂ ಇದನ್ನು ಸರ್ಕಾರ ನಿಗಧಿಗೊಳಿಸುವ ಮೊದಲು ಜಿಲ್ಲಾ ಪಂಚಾಯತಿಗೆ ಕಳುಹಿಸಬೇಕು. ತಾಲ್ಲೂಕು ಪಂಚಾಯತಿಯು ಒಂದು ವೇಳೆ ನಿಗದಿತ ದಿನಾಂಕದಂದು ಬಜೆಟ್ ಅಂದಾಜನ್ನು ಅಂಗೀಕರಿಸಲು ತಪ್ಪದ್ದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಯು ಬಜೆಟ್ ಅಂದಾಜನ್ನು ಜಿಲ್ಲಾ ಪಂಚಾಯತಿಗೆ ಕಳುಹಿಸಿಕೊಡಬೇಕು. ಜಿಲ್ಲಾ ಪಂಚಾಯತಿಯು ಅದನ್ನು ಬದಲಾವಣೆ ಅಥವಾ ಬದಲಾವಣೆ ಇಲ್ಲದೆ ಅನುಮೋದಿಸಬಹುದು. ಈ ರೀತಿ ಅನುಮೋದಿಸಿದ ಬಜೆಟ್ ಅಂದಾಜನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಪ್ರಮಾಣೀಕರಿಸಬೇಕು. ತದ ನಂತರ ಅದನ್ನು ತಾಲ್ಲೂಕು ಪಂಚಾಯತಿಯು ಅನುಮೋದಿಸಿದೆ ಎಂಬಂತೆ ಭಾವಿಸತಕ್ಕದ್ದು. (ಪ್ರಕರಣ–247)

21. ಸರ್ಕಾರವು ವರ್ಗಾವಣೆ ಮಾಡಿದ ಯಾವುದೇ

ಅನುದಾನಗಳನ್ನು ಸಂಬಂಧಿಸಿದ ಉದ್ದೇಶಗಳು ಹಾಗು ಕಾರ್ಯಕ್ರಮಗಳಿಗೆ ಮಾತ್ರ ಬಳಸಬೇಕು. ಇತರೇ ಉದ್ದೇಶಗಳಿಗೆ ಬಳಸುವಂತಿಲ್ಲ. ಯಾವುದೇ ಅಭಿವೃದ್ಧಿ ಕಾರ್ಯಗಳಿಗೆ ಅನುಮೋದಿಸಿದ ಮೊತ್ತದಲ್ಲಿ ಶೇ. 10ಕ್ಕಿಂತ ಹೆಚ್ಚಿಗೆ ಕಡಿತಗೊಳಿಸಬಾರದು. ತಾಲ್ಲೂಕು ಪಂಚಾಯತಿಗಳು ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳ ದಾಖಲೆಗಳನ್ನು ನಿಯಮಾನುಸಾರ ನಿರ್ವಹಿಸಬೇಕು ಮತ್ತು ಸಂರಕ್ಷಿಸಬೇಕು. ಆರ್ಥಿಕ ವರ್ಷದ ಮುಕ್ತಾಯದ ತರುವಾಯ ನಡೆಸುವ ಮೊದಲನೆಯ ಸಾಮನ್ಯ ಸಭೆಯಲ್ಲಿ ಆ ವರ್ಷದ ಲೆಕ್ಕ ಪತ್ರಗಳ ಬಗ್ಗೆ ಚರ್ಚಿಸಿ ಅಂಗೀಕರಿಸಬಹುದಾಗಿದೆ. ಅಂಗೀಕರಿಸಿದ ತರುವಾಯ ನಿಗದಿತ ನಮೂನೆಗಳಲ್ಲಿ ಎಲ್ಲಾ ಲೆಕ್ಕ ಪತ್ರಗಳ ವಿವರಗಳೂ ಮತ್ತು ವೋಚರ್‌ಗಳನ್ನು ಜಿಲ್ಲಾ ಪಂಚಾಯತಿಗರ ಸಲ್ಲಿಸಬೇಕು. ತಾಲ್ಲೂಕು ಪಂಚಾಯತಿಯ ಅಭಿಪ್ರಾಯದಲ್ಲಿ ಸಂದಾಯವಾಗಬೇಕಾಗಿದ್ದ ಯಾವುದೇ ಮೊತ್ತ ಅಥವಾ ಬಾಕಿ ವಸೂಲಾಗುವುದಿಲ್ಲವೆಂದೆ ಅಭಿಪ್ರಾಯಪಟ್ಟರೆ ಹಾಗೂ ಆ ಮೊತ್ತ ಒಂದುಸಾವಿರ ರೂಪಾಯೊಳಗಿದ್ದರೆ ಅದನ್ನು ವಜಾ ಮಾಡಬಹುದಾಗಿದೆ. ಆದರೆ ಒಂದು ಸಾವಿರ ರೂಪಾಯಿಗಳಿಗೆ ಮೀರಿದ ಮೊತ್ತವನ್ನು ಜಿಲ್ಲಾ ಪಂಚಾಯತಿಯ ಅನುಮೋದನೆ ಪಡದ ನಂತರ ವಜಾ ಮಾಡಬಹುದಾಗಿದೆ. (ಪ್ರಕರಣ–248, 249, 250, 251, 252)

22. ಪ್ರತಿ ವರ್ಷ ಭಾರತ ಸಕಾರದ ಲೆಕ್ಕ ಪರಿಶೋಧಕರು ಮತ್ತು ನಿಯಂತ್ರಕರು ಪ್ರತಿಯೊಂದು ತಾಲ್ಲೂಕು ಪಂಚಾಯತಿಯ ನಿಧಿಯ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧನೆ ಮಾಡಬೇಕು. ಲೆಕ್ಕ ಪರಿಶೋಧಕರು ಉಲ್ಲೇಖಿಸಿರುವ ಅಕ್ರಮ ವೆಚ್ಚದ ಬಗ್ಗೆ ಹೊಣೆಗಾರನಾಗಿರುವ ವ್ಯಕ್ತಿಯ ಮೇಲೆ ಋಣಭಾರ ಹೊರಿಸಬೇಕು ಮತ್ತು ಆ ವ್ಯಕ್ತಿಯಿಂದ ಬಾಕಿ ಮೊಬಲಗೆಂದು ಪ್ರಮಾಣೀಕರಿಸಿ ಶೇ. 15 ರಷ್ಟರ ಬಡ್ಡಿಯೊಂದಿಗೆ ವಸೂಲಿ ಮಾಡಿ ತಾಲ್ಲೂಕು ಪಂಚಾಯತಿ ನಿಧಿಗೆ ಜಮೆ ಮಾಡಬೇಕು. (ಪ್ರಕರಣ–254, 255)

23. **ಜಿಲ್ಲಾ ಪಂಚಾಯತಿಗಳು:–** ಪ್ರತಿಯೊಂದು ಜಿಲ್ಲೆಯ, ಮುನ್ಸಿಪಲ್, ಕಾರ್ಪೋರೇಷನ್, ಪಟ್ಟಣ ಪ್ರದೇಶ, ಕೈಗಾರಿಕಾ ಉಪನಗರದ ಭಾಗಗಳನ್ನು ಹೊರತುಪಡಿಸಿದ ಭಾಗಕ್ಕೆ ಅಧಿಕಾರದ ವ್ಯಾಪ್ತಿಯನ್ನು ಹೊಂದಿರುವ ಒಂದು ಜಿಲ್ಲಾ ಪಂಚಾಯತಿಯನ್ನು ಸ್ಥಾಪಿಸಬೇಕು, ಈ ಜಿಲ್ಲಾ ಪಂಚಾಯತಿಯು ಕೆಳಕಂಡ ಸದಸ್ಯರುಗಳನ್ನು ಹೊಂದಿರುತ್ತದೆ.

1) ಜಿಲ್ಲಾ ಪಂಚಾಯತಿ ಕ್ಷೇತ್ರಗಳಿಂದ ಚುನಾಯಿತರಾದ ಸದಸ್ಯರು

2) ಜಿಲ್ಲಾ ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿನ ಚುನಾಯಿತ ಲೋಕಸಭಾ ಹಾಗೂ ವಿಧಾನಸಭಾ ಸದಸ್ಯರು

3) ಜಿಲ್ಲಾ ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿ ಮತದಾರರಾಗಿ ನೋಂದಾಯಿತರಾಗಿರುವ ರಾಜ್ಯಸಭಾ ಮತ್ತು ರಾಜ್ಯ ವಿಧಾನ ಪರಿಷತ್ತಿನ ಸದಸ್ಯರು

- ಜಿಲ್ಲೆಯ ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷರುಗಳು ಜಿಲ್ಲಾ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ಹಾಗೂ ಅವಿಶ್ವಾಸ ನಿರ್ಣಯದ ಮಂಡನೆಯ ಸಭೆಗಳನ್ನು ಹೊರತುಪಡಿಸಿ ಇನ್ನುಳಿದ ಎಲ್ಲಾ ಸಭೆಗಳಲ್ಲಿ ಲೋಕಸಭಾ, ವಿಧಾನಸಭಾ, ರಾಜ್ಯಸಭಾ ಮತ್ತು ವಿಧಾನ ಪರಿಷತ್ ಸದಸ್ಯರು ಹಾಗೂ ತಾಲ್ಲೂಕು ಪಂಚಾಯತ್ ಅಧ್ಯಕ್ಷರುಗಳು ಭಾಗವಹಿಸಬಹುದು. (ಸ್ಥಾಯಿ ಸಮಿತಿ ಅಧ್ಯಕ್ಷರ ಚುನಾವಣೆಯಲ್ಲಿ ಭಾಗವಹಿಸಬಹುದು ಆದರೆ ಸ್ಪರ್ಧೆಗೆ ಭಾಗವಹಿಸುವಂತಿಲ್ಲ). (ಪ್ರಕರಣ–159)

24. ಪ್ರತಿಯೊಂದು ಜಿಲ್ಲಾ ಪಂಚಾಯತಿಯಲ್ಲಿ ಕನಿಷ್ಠ 20 ಚುನಾಯಿತ ಸದಸ್ಯರುಗಳು ಇರತಕ್ಕದ್ದು. ಪ್ರತಿಯೊಂದು ತಾಲ್ಲೂಕಿನಿಂದ ಚುನಾಯಿತವಾಗತಕ್ಕ ಸದಸ್ಯರ ಸಂಖ್ಯೆ 35,000 ದ ಮತ್ತು 40,000 ನಡುವಿನ ಜನಸಂಖ್ಯೆಗೆ ಒಬ್ಬ ಸದಸ್ಯನನ್ನು ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯನನ್ನು ನಿಗದಿಗೊಳಿಸಲಾಗಿದೆ. ಉತ್ತರಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳ ಸಂದರ್ಭದಲ್ಲಿ ಪ್ರತಿ 30,000 ಜನಸಂಖ್ಯೆಗೆ ಅಥವಾ ಅದರ

ಭಾಗಕ್ಕೆ ಒಬ್ಬ ಸದಸ್ಯರನ್ನು, ಬೆಂಗಳೂರು ನಗರ ಜಿಲ್ಲೆಯ ಸಂದರ್ಭದಲ್ಲಿ ಜನಸಂಖ್ಯೆಯ ಪ್ರತಿ 20,000 ಕ್ಕೆ ಅಥವಾ ಅದರ ಭಾಗಕ್ಕೆ ಒಬ್ಬ ಸದಸ್ಯರನ್ನು ಹಾಗೂ ಕೊಡಗು ಜಿಲ್ಲೆಯ ಸಂದರ್ಭದಲ್ಲಿ ಪ್ರತಿ 18,000 ಜನಸಂಖ್ಯೆಗೆ ಅಥವಾ ಅದರ ಒಂದು ಭಾಗಕ್ಕೆ ಒಬ್ಬ ಸದಸ್ಯರನ್ನು ಆಯ್ಕೆ ಮಾಡಬಹುದು. (ಪ್ರಕರಣ–160)

25. ರಾಜ್ಯ ಚುನಾವಣಾ ಆಯೋಗದಿಂದ, ಜನಸಂಖ್ಯೆಯ ಆಧಾರದ ಮೇಲೆ ಜಿಲ್ಲಾ ಪಂಚಾಯತಿ ಚುನಾವಣಾ ಕ್ಷೇತ್ರಗಳನ್ನು ನಿರ್ಧರಿಸಲಾಗುವುದು. ಸದಸ್ಯರ ಸ್ಥಾನಗಳನ್ನು ಒಟ್ಟು ಜನಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡಗಳಿಗೆ, ಅವರುಗಳ ಜನ ಸಂಖ್ಯೆಯು ಯಾವ ಅನುಪಾತದಲ್ಲಿದೆಯೋ ಹಾಗೆ ಆ ವರ್ಗಗಳಿಗೆ ಸ್ಥಾನಗಳ ಸಂಖ್ಯೆಯನ್ನು ಮೀಸಲಿಡಲಾಗಿದೆ, ಪ್ರತಿ ಜಿಲ್ಲಾ ಪಂಚಾಯತಿ ಯಲ್ಲಿ ಪರಿಶಿಷ್ಠ ಜಾತಿ ಮತ್ತು ಪಂಗಡಗಳಿಗೆ ಸೇರಿದ ವ್ಯಕ್ತಿಗಳಿಗೆ ಕನಿಷ್ಠ ಒಂದೊಂದು ಸ್ಥಾನವನ್ನು ಮೀಸಲಿಡಲಾಗಿದೆ ಜಿಲ್ಲಾ ಪಂಚಾಯತಿಯ ಒಟ್ಟು ಸ್ಥಾನಗಳಲ್ಲಿ ಮೂರನೇ ಒಂದು ಭಾಗವನ್ನು ಹಿಂದುಳಿದ ವರ್ಗಗಳಿಗೆ ಮೀಸಲಿಡಬೇಕು. ಈ ಮೀಸಲಾತಿಯಲ್ಲಿ ಶೇಕಡ 80 ರಷ್ಟು ಸ್ಥಾನವನ್ನು ಹಿಂದುಳಿದ ವರ್ಗ–ಎ ಪ್ರವರ್ಗ ಹಾಗೂ ಇನ್ನುಳಿದ ಶೇಕಡಾ 20 ರಷ್ಟು ಸ್ಥಾನವನ್ನು ಹಿಂದುಳಿದ ವರ್ಗ– ಬಿ ಪ್ರವರ್ಗಕ್ಕೂ ಮೀಸಲಿಡಲಾಗಿದೆ. ಜಿಲ್ಲಾ ಪಂಚಾಯತಿಯ ಸದಸ್ಯರುಗಳ ಒಟ್ಟು ಸಂಖ್ಯೆಯ 50ರಷ್ಟು ಸ್ಥಾನಗಳಿಗಿಂತ ಹೆಚ್ಚಿನ ಮೀಸಲಾತಿಗೆ ಅವಕಾಶವಿಲ್ಲ. ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ, ಹಿಂದುಳಿದ ವರ್ಗ–ಅ, ಹಿಂದುಳಿದ ವರ್ಗ–ಬ, ಹಾಗೂ ಸಾಮಾನ್ಯ ವರ್ಗದ ಎಲ್ಲಾ ಸ್ಥಾನಗಳಲ್ಲಿ ಶೇಕಡಾ 50 ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. (ಪ್ರಕರಣ–161, 162)

26. ಸದಸ್ಯರಾಗಲು ಜಿಲ್ಲಾ ಪಂಚಾಯತಿಯ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿ ರಬೇಕು, ಯಾವುದೇ ವ್ಯಕ್ತಿ ಕ್ರಿಮಿನಲ್ ಅಪರಾಧಗಳಿಗೆ ಶಿಕ್ಷೆಗೆ ಒಳಪಟ್ಟಿದ್ದರೆ, ಪಕ್ಷಾಂತರ ನಿಷೇಧ ಅಧಿನಿಯಮದಡಿಯಲ್ಲಿ ಅನರ್ಹ ನಾಗಿದ್ದರೆ, ಸ್ಥಳೀಯ ಪ್ರಾಧಿಕಾರದ ಸೇವೆಯಿಂದ ಅಥವಾ ಸದಸ್ಯತ್ವದಿಂದ ವಜಾಗೊಂಡಿದ್ದರೆ ಸದಸ್ಯನಾಗಲು ಅನರ್ಹತೆ ಹೊಂದಿರುತ್ತಾರೆ. (ಪ್ರಕರಣ–166, 167).

27. ಚುನಾಯಿತ ಸದಸ್ಯರು, ಚುನಾಯಿತನಾಗುವ ಪೂರ್ವದಲ್ಲಿ ಯಾವುದಾದರೂ ಚುನಾಯಿತ ಸಂಸ್ಥೆಗಳಿಗೆ ಅಂದರೆ, ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನ ಪರಿಷತ್, ಮುನ್ಸಿಪಲ್ ಸಂಸ್ಥೆಗಳು ಅಥವಾ ಇತರೆ ಪಂಚಾಯತ್ ಸಂಸ್ಥೆಗಳಿಗೆ ಸದಸ್ಯನಾಗಿದ್ದರೆ, ಅವುಗಳಿಗೆ 15 ದಿನದೊಳಗಾಗಿ ರಾಜಿನಾಮೆಯನ್ನು ನೀಡದಿದ್ದರೆ, ಚುನಾಯಿತ ಸದಸ್ಯನು, ಅವನು ಚುನಾಯಿತ ನಾಗಿರುವ ಈಗಿನ ಸ್ಥಾನವನ್ನು ಕಳೆದು ಕೊಳ್ಳುತ್ತಾನೆ. ಒಬ್ಬ ವ್ಯಕ್ತಿಯು ಏಕ ಕಾಲದಲ್ಲಿ ಎರಡು ಚುನಾವಣಾ ಕ್ಷೇತ್ರದಿಂದ ಸದಸ್ಯನಾಗಲು ಅವಕಾಶವಿರುವುದಿಲ್ಲ. ಒಂದು ಕ್ಷೇತ್ರಕ್ಕೆ ರಾಜಿನಾಮೆ ನೀಡಬೇಕು (ಪ್ರಕರಣ–168, 170).

28. ಚುನಾಯಿತ ಸದಸ್ಯರ ಅವಧಿ 5 ವರ್ಷಗಳು. ಚುನಾವಣೆಯು ನಂತರ ಚುನಾಯಿತ ಅಭ್ಯರ್ಥಿಯು ಸಲ್ಲಿಸಿದ್ದ ದಾಖಲೆಗಳ ಬಗ್ಗೆ ಅಥವಾ ಚುನಾವಣೆಯ ವಿಧಾನಗಳ ಬಗ್ಗೆ ಯಾವುದೇ ವ್ಯಕ್ತಿ ತಕರಾರು ಅರ್ಜಿಯನ್ನು ಗೊತ್ತುಪಡಿಸಿದ ನ್ಯಾಯಾಲಯದಲ್ಲಿ ದಾಖಲಿಸ ಬೇಕು. ಈ ಬಗ್ಗೆ ಚುನಾವಣೆಯನ್ನು ಊರ್ಜಿತ ಅಥವಾ ಅನೂರ್ಜಿತ ಎಂದು ಘೋಷಿಸಲು ನ್ಯಾಯಾಲಯ ಸಕ್ಷಮ ಪ್ರಾಧಿಕಾರವಾಗಿರುತ್ತದೆ. ಜಿಲ್ಲಾ ಪಂಚಾಯತಿ ಸದಸ್ಯರು ತನ್ನ ಸಹಿ ಸಹಿತ ಪತ್ರದ ಮೂಲಕ ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡುವ ಮನವಿಯನ್ನು ಜಿಲ್ಲಾ ಪಂಚಾಯತಿ ಅಧ್ಯಕ್ಷರಿಗೆ ಸಲ್ಲಿಸಬಹುದು. 15 ದಿನದೊಳಗೆ ರಾಜಿನಾಮೆಯನ್ನು ಹಿಂತೆಗೆದುಕೊಳ್ಳದಿದ್ದಲ್ಲಿ ಜಿಲ್ಲಾ ಪಂಚಾಯತಿ ಅಧ್ಯಕ್ಷರು ರಾಜಿನಾಮೆ ಪತ್ರವನ್ನು ಜಿಲ್ಲಾ ಪಂಚಾಯತಿ ಸಭೆಗೆ ಮಂಡಿಸಿ ಅಂಗೀಕರಿಸಬಹುದಾಗಿದೆ. (ಪ್ರಕರಣ–173,174)

29. ಜಿಲ್ಲಾ ಪಂಚಾಯತಿ ಸದಸ್ಯರನ್ನು ದುರ್ನಡತೆ, ತಲೆ ತಗ್ಗಿಸುವಂತ ನಡತೆ, ವೈದ್ಯಕೀಯವಾಗಿ ಅಸಮರ್ಥತೆ, ಕರ್ತವ್ಯ ನಿರ್ವಹಣೆಯ ಅಸಮರ್ಥತೆ, ಕಾರಣಕ್ಕಾಗಿ ಸದಸ್ಯತ್ವದಿಂದ ಸರ್ಕಾರ ತೆಗೆದು ಹಾಕಬಹುದು. ಈ ಬಗ್ಗೆ ಕ್ರಮ

ವಹಿಸುವ ಮುನ್ನ ವಿಚಾರಣೆ ನಡೆಸಿ ಸದಸ್ಯತ್ವದಿಂದ ತೆಗೆದು ಹಾಕಬಹುದಾಗಿದೆ. (ಪ್ರಕರಣ–175). ಸದಸ್ಯನು ಅನುಕ್ರಮವಾಗಿ 4 ಸಭೆಗಳಿಗೆ ಗೈರು ಹಾಜರಾಗಿದ್ದರೆ ಸದಸ್ಯತ್ವದಿಂದ ತೆಗೆದುಹಾಕಬಹುದು. ಚುನಾಯಿತ ಸದಸ್ಯರು ರೂ. 2 ಲಕ್ಷಕ್ಕಿಂತ ಹೆಚ್ಚಿರುವ ತಮ್ಮ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕಾಧಿಕಾರಿ ಮುಖಾಂತರ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸಬೇಕು. ತಪ್ಪು ಮಾಹಿತಿ ನೀಡಿದ್ದರೆ ಅಥವಾ ಮಾಹಿತಿಯನ್ನು ನೀಡದಿದ್ದರೆ ಅಂಥಹಾ ಸದಸ್ಯನ ಸ್ಥಾನವನ್ನು ರಾಜ್ಯ ಚುನವಣಾ ಆಯೋಗ ನಿಯಮಾನುಸಾರ ಪರಿಶೀಲಿಸಿ ರದ್ದು ಮಾಡಬಹುದಾಗಿದೆ. (ಪ್ರಕರಣ–175,ಎ–ಬಿ)

30. ಜಿಲ್ಲಾ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಚುನಾವಣೆಯನ್ನು ನಿಗದಿಗೊಳಿಸಿರುವ ನಿಯಮಗಳನುಸಾರ ಮತ್ತು ಮೀಸಲಾತಿಗೆ ಅನುಸಾರ ನಡೆಸಬೇಕಾಗಿದೆ. ಈ ನಿಯಮಗಳ ಅನ್ವಯ ಈ ಹುದ್ದೆಗಳ ಚುನಾವಣೆಯ ಸಭೆಗೆ ಹಾಜರಿದ್ದ ಸದಸ್ಯರ ಬಹುಮತದಿಂದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಹುದ್ದೆಗೆ ಆಯ್ಕೆ ಮಾಡತಕ್ಕದ್ದು (ಪ್ರಕರಣ–177). ಜಿಲ್ಲಾ ಪಂಚಾಯತಿ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಅವಧಿ 5 ವರ್ಷ. ಅಥವಾ ಅವರ ಸ್ಥಾನ ಖಾಲಿಯಾಗುವವರೆಗೆ.

31. ಕರ್ತವ್ಯ ನಿರ್ವಹಣೆಯಲ್ಲಿ ನಿರಂತರ ಅಲಕ್ಷತೆ, ದುರ್ನಡತೆಗಾಗಿ ಜಿಲ್ಲಾ ಪಂಚಾಯತಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರನ್ನು ಸರ್ಕಾರವು ಸೂಕ್ತ ವಿಚಾರಣೆ ನಡೆಸಿದ ನಂತರ ತೆಗೆದು ಹಾಕುವ ಅಧಿಕಾರ ಹೊಂದಿರುತ್ತದೆ. ಅಧ್ಯಕ್ಷರು ಅಥವಾ ಉಪಾಧ್ಯಕ್ಷರು ಸಭೆಯನ್ನು ಕರೆಯಬೇಕಾಗಿದ್ದಾಗ ಅಥವಾ ಅಗತ್ಯವಿದ್ದಾಗ ಅನುಕ್ರಮವಾಗಿ ಎರಡು ಸಭೆಯನ್ನು ಕರೆಯಲು ತಪ್ಪಿದರೆ ಅವರನ್ನು ಸದಸ್ಯತ್ವದಿಂದ ತೆಗೆದುಹಾಕಬಹುದು (ಪ್ರಕರಣ–175). ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಹುದ್ದೆ ಖಾಲಿ ಇರುವ ಅವಧಿಯಲ್ಲಿ ಉಪಾಧ್ಯಕ್ಷನು ಅಧ್ಯಕ್ಷ ಹುದ್ದೆಯ ಅಧಿಕಾರಗಳನ್ನು ಚಲಾಯಿಸ ಬಹುದಾಗಿದೆ. ಅಧ್ಯಕ್ಷರು, ಉಪಾಧ್ಯಕ್ಷರು ಇಲ್ಲದಿದ್ದಾಗ ಸಂಬಂಧಿಸಿದ ಜಿಲ್ಲಾ ಪಂಚಾಯತಿಯ ಸಾಮಾಜಿಕ ನ್ಯಾಯ ಸಮಿತಿಯ ಅಧ್ಯಕ್ಷನು ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸಬಹುದಾಗಿದೆ. (ಪ್ರಕರಣ–179)

32. ಜಿಲ್ಲಾ ಪಂಚಾಯತಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಮಂಡಿಸುವ ನಿರ್ಣಯದ ಸಭೆಗೆ ಚುನಾಯಿತ ಸದಸ್ಯರ ಪೈಕಿ ಅರ್ಧದಷ್ಟು ಮಂದಿ ಸಹಿ ಮಾಡಿರುವ ನೋಟೀಸನ್ನು ಸಲ್ಲಿಸಬೇಕು. ಅವಿಶ್ವಾಸ ನಿರ್ಣಯಕ್ಕೆ ಒಟ್ಟು ಚುನಾಯಿತ ಸದಸ್ಯರಲ್ಲಿ ಮೂರನೇ ಎರಡರಷ್ಟು ಸದಸ್ಯರು ಬಹುಮತದಿಂದ ಅಂಗೀಕರಿಸಿದರೆ ಆ ಹುದ್ದೆಗಳು ತೆರವಾಗುವುದು ಎಂದು ಭಾವಿಸತಕ್ಕದ್ದು. ಈ ನಿರ್ಣಯದ ದಿನಾಂಕದಿಂದ 30 ತಿಂಗಳೊಳಗೆ ಪುನಃ ಅವಿಶ್ವಾಸ ನಿರ್ಣಯವನ್ನು ಮಂಡಿಸುವಂತಿಲ್ಲ. (ಪ್ರಕರಣ–179)

33. ಜಿಲ್ಲಾ ಪಂಚಾಯತಿಯ ಕಾರ್ಯಕಲಾಪಗಳ ನಿರ್ವಹಣೆಗೆ ಪ್ರತಿ ಎರಡು ತಿಂಗಳಲ್ಲಿ ಒಂದು ಸಾರಿ ಸಾಮಾನ್ಯ ಸಭೆಯನ್ನು ನಡೆಸಬೇಕು. ಸಭೆಯನ್ನು ನಡೆಸಲು 10 ಪೂರ್ಣ ದಿನಗಳ ನೋಟೀಸನ್ನು ನೀಡಬೇಕು. ಸಭೆಯನ್ನು ನಡೆಸಲು ಸದಸ್ಯರ ಒಟ್ಟು ಸಂಖ್ಯೆಯ ಅರ್ಧದಷ್ಟು ಮಂದಿಯ ಹಾಜರಾತಿ ಸಭೆಯ ಕೋರಂ ಆಗಿರತಕ್ಕದ್ದು. ಕೋರಂ ಇಲ್ಲದಿದ್ದರೆ 30 ನಿಮಿಷ ಮುಂದೂಡತಕ್ಕದ್ದು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರು ವಹಿಸತಕ್ಕದ್ದು. ಅವರ ಗೈರು ಹಾಜರಿಯಲ್ಲಿ ಉಪಾಧ್ಯಕ್ಷರು ಅಧ್ಯಕ್ಷತೆ ವಹಿಸುವುದು. ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇಲ್ಲದಿದ್ದಾಗ ಹಾಜರಿರುವ ಸದಸ್ಯರು ತಮ್ಮಲ್ಲಿಯೇ ಒಬ್ಬನನ್ನು ಅಧ್ಯಕ್ಷತೆ ವಹಿಸಲು ಆಯ್ಕೆ ಮಾಡುವುದು. ಒಟ್ಟು ಸದಸ್ಯರ ಮೂರನೇ ಒಂದು ಭಾಗಕ್ಕಿಂತ ಕಡಿಮೆ ಇಲ್ಲದಷ್ಟು ಸದಸ್ಯರು ಸಹಿ ಮಾಡಿ ಲಿಖಿತ ಕೋರಿಕೆಯನ್ನು ಸಲ್ಲಿಸಿದರೆ 15 ದಿನದೊಳಗೆ ವಿಸೇಷ ಸಭೆಯನ್ನು ನಡೆಸಬೇಕು. ವಿಶೇಷ ಸಭೆಗಳಿಗೆ 7 ಪೂರ್ಣ ದಿನಗಳ ನೋಟೀಸನ್ನು ನೀಡಬೇಕು. (ಪ್ರಕರಣ–148). ಸಾಮಾನ್ಯ ಸಭೆಗಳಿಗೆ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಒಂದು ವಿಭಾಗದ ಅಥವಾ ವೃತ್ತದ ಅಥವಾ ವೃತ್ತದ ಕಡಿಮೆ ಇರುವ ಪ್ರದೇಶದಲ್ಲಿ

ವ್ಯಾಪ್ತಿಯನ್ನು ಹೊಂದಿರುವ ಸರ್ಕಾರದ ಯಾವುದೇ ಇಲಾಖೆಯ ಅಧಿಕಾರಿಗಳನ್ನು ಸಭೆಗೆ ಕರೆಸಬಹುದು. ಈ ಸಂಬಂಧ 15 ದಿನಗಳಿಗೆ ಕಡಿಮೆ ಇಲ್ಲದಂತೆ ಅವರುಗಳಿಗೆ ಮುಂಚಿತವಾಗಿ ಪತ್ರದ ಮೂಲಕ ತಿಳಿಸಬೇಕು. ಒಂದು ವೇಳೆ ಅನಾರೋಗ್ಯದ ಕಾರಣ ಅಥವಾ ಯುಕ್ತ ಕಾರಣಗಳಿಂದ ಬರಲಾಗದಿದ್ದರೆ ಅವರ ಪರವಾಗಿ ಪ್ರತಿನಿಧಿಸುವ ಅಧಿಕಾರಿಯನ್ನು ನಿಯೋಜಿಸಬೇಕು.

34. ಜಿಲ್ಲಾ ಪಂಚಾಯತಿಯ ಪ್ರಮುಖ ಕರ್ತವ್ಯಗಳೆಂದರೆ, (ಪ್ರಕರಣ–184,185),

I. ಸರ್ಕಾರದ ನೀತಿಗೆ ಅನುಗುನವಾಗಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಆರೋಗ್ಯ ಕೇಂದ್ರಗಳನ್ನು ಮತ್ತು ಪ್ರಸೂತಿ ಕೇಂದ್ರಗಳನ್ನು ಸ್ಥಾಪಿಸುವುದು.

II. ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಅಂತರ್ಜಲ ಮರುಪೂರಣೆ ಮಾಡುವ ಕ್ರಮಗಳನ್ನು ವಹಿಸುವುದು ಹಾಗೂ ಕುಡಿಯುವ ನೀರಿನ ಕೊಳವೆ ಬಾವಿಗಳ ಪಕ್ಕ ಖಾಸಗಿ ಕೊಳವೆ ಬಾವಿಗಳನ್ನು ಕೊರೆಯುವುದನ್ನು ತಡೆಗಟ್ಟುವುದು.

III. ಪ್ರತಿಯೊಂದು ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯದ ಅಭಿವೃದ್ಧಿಗಾಗಿ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದು. ಪ್ರವಾಸಿ ತಾಣಗಳನ್ನು ಅಭಿವೃದ್ಧಿ ಪಡಿಸುವುದು.

IV. ಅಧಿಕಾರ ವಿಕೇಂದ್ರೀಕರಣ ನೀತಿಯಂತೆ ಸರ್ಕಾರವು ಜಿಲ್ಲಾ ಪಂಚಾಯತಿಗೆ ವಹಿಸಲಾಗಿರುವ ವಿವಿಧ ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಉಸ್ತುವಾರಿ ಮತ್ತು ಮೇಲ್ವಿಚಾರಣೆ ಮಾಡುವುದು. ಹಾಗೂ ಸರ್ಕಾರ ವಹಿಸಬಹುದಾದ ಇನಿತರೆ ಜವಾಬ್ದಾರಿಗಳನ್ನು ನಿರ್ವಹಿಸುವುದು.

V. ಜಿಲ್ಲಾ ಪಂಚಾಯತಿಗೆ ನಿಯಂತ್ರಣಕ್ಕೆ ಒಳಪಡುವ ರಸ್ತೆಗಳನ್ನು ನಿರ್ವಹಿಸುವುದು, ಅವಶ್ಯವಿದ್ದರೆ ಮಾರ್ಗಪಲ್ಲಟ ಮಾಡುವುದು ಅಥವಾ ಖಾಯಂ ಆಗಿ ಮುಚ್ಚಬಹುದು.

VI. ಜಿಲ್ಲಾ ಪಂಚಾಯತಿ ಎಲ್ಲಾ ನಿವಾಸಿಗಳ ಆರೋಗ್ಯ, ಸುರಕ್ಷತೆ, ಶಿಕ್ಷಣ ಮೂಲ ಸೌಲಭ್ಯ, ಸಾಮಾಜಿಕ ಹಾಗೂ ಆರ್ಥಿಕ ಮತ್ತು ಸಾಂಸ್ಕೃತಿಕ ಉನ್ನತಿಯನ್ನು ಸಂರಕ್ಷಿಸುವ ವ್ಯವಸ್ಥೆ ಮಾಡುವುದು ಸಮುದಾಯ ಆರೋಗ್ಯ ಕೇಂದ್ರಗಳ ಸ್ಥಾಪನೆ, ದುರ್ಬಲ ವರ್ಗ ಮತ್ತು ಅಂಗವಿಕಲರ ಕಲ್ಯಾಣ ಕಾರ್ಯಕ್ರಮಗಳನ್ನು ರೂಪಿಸುವುದು.

VII. ಸರ್ಕಾರ ವಹಿಸುವ ಇನ್ನಿತರೆ ಜವಾಬ್ದಾರಿಗಳು

- ಜಿಲ್ಲಾ ಪಂಚಾಯತಿಯು ಈ ಅಧಿನಿಯಮದ ಮೂಲಕ ಅಥವಾ ಅದರಡಿಯಲ್ಲಿ ವಹಿಸಿರುವ ಯಾವುದೇ ಅಧಿಕಾರಗಳನ್ನು ಅಧಿಸೂಚನೆಯ ಮೂಲಕ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಥವಾ ಇತರೆ ಅಧಿಕಾರಿಗೆ ವಹಿಸಿಕೊಡಬಹುದು (ಪ್ರಕರಣ–189). ಅಧಿನಿಯಮದ ಅನುಸೂಚಿ–3 ರಲ್ಲಿ ಹಾಗೂ ಕಾರ್ಯಚಟುವಟಿಕೆ ನಕಾಶೆಯಲ್ಲಿ (ಜವಾಬ್ದಾರಿ ನಕ್ಷೆ) ನಮೂದಿಸಿರುವ ಎಲ್ಲಾ ವಿಷಯಗಳ, ಯೋಜನೆಗಳ ಅನುಷ್ಠಾನದ ಜವಾಬ್ದಾರಿ ಮತ್ತು ಉಸ್ತುವಾರಿಯನ್ನು ಜಿಲ್ಲಾ ಪಂಚಾಯತಿಯು ವಹಿಸಿಕೊಳ್ಳಬೇಕು ಹಾಗೂ ಸಂಬಂಧಪಟ್ಟ ಇಲಾಖೆಗಳ ಮುಖಾಂತರ ಅನುಷ್ಠಾನಗೊಳಿಸಬೇಕು.

**35. ಜಿಲ್ಲಾ ಪಂಚಾಯತಿ ಸ್ಥಾಯಿ ಸಮಿತಿಗಳು:** ಜಿಲ್ಲಾ ಪಂಚಾಯತಿಯಲ್ಲಿ ಐದು ಸ್ಥಾಯಿ ಸಮಿತಿಗಳಿರುತ್ತವೆ, (ಪ್ರಕರಣ–197,188))

1) ಸಾಮಾನ್ಯ ಸ್ಥಾಯಿ ಸಮಿತಿ 2) ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿ, 3) ಸಾಮಾಜಿಕ ನ್ಯಾಯ ಸಮಿತಿ 4) ಶಿಕ್ಷಣ ಮತ್ತು ಆರೋಗ್ಯ ಸಮಿತಿ 5) ಕೃಷಿ ಮತ್ತು ಕೈಗಾರಿಕಾ ಸಮಿತಿ.

ಪ್ರತಿಯೊಂದು ಸ್ಥಾಯಿ ಸಮಿತಿಗೆ ಜಿಲ್ಲಾ ಪಂಚಾಯತಿಯ ಸದಸ್ಯರುಗಳು ಚುನಾಯಿತ ಸದಸ್ಯರುಗಳ ಪೈಕಿ ಚುನಾಯಿತ ಅಧ್ಯಕ್ಷರನ್ನು

ಸೇರಿದಂತೆ ಏಳು ಸದಸ್ಯರನ್ನು ಒಳಗೊಂಡಿರುತ್ತದೆ. ಪ್ರತಿಯೊಬ್ಬ ಸ್ಥಾಯಿ ಸಮಿತಿಯ ಸದಸ್ಯರ ಅವಧಿಯು ಆತನ್ನು ಚುನಾಯಿಸಿದ ದಿನಾಂಕದಿಂದ 20 ತಿಂಗಳು ಅಥವಾ ಅವನು ಸದಸ್ಯನಾಗಿ ನಿಂತು ಹೋಗುವವರೆಗೆ ಇರುವುದು.

ಸಾಮಾಜಿಕ ನ್ಯಾಯ ಸಮಿತಿಯು ಕನಿಷ್ಠ ಒಬ್ಬ ಮಹಿಳಾ ಸದಸ್ಯಳನ್ನು ಮತ್ತು ಅನುಸೂಚಿತ ಜಾತಿ ಅಥವಾ ಅನುಸೂಚಿತ ಪಂಗಡಗಳಲ್ಲಿ ಯಾವುದು ಹೆಚ್ಚಿನ ಸಂಖ್ಯೆಯ ಚುನಾಯಿತ ಸದಸ್ಯರನ್ನು ಹೊಂದಿರುವುದೋ ಅದರ ಒಬ್ಬ ಸದಸ್ಯರನ್ನು ಒಳಗೊಂಡಿರತಕ್ಕದ್ದು.

ಜಿಲ್ಲಾ ಪಂಚಾಯತಿ ಅಧ್ಯಕ್ಷರು ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಪಂಚಾಯತಿ ಉಪಾಧ್ಯಕ್ಷರು ಸಾಮಾನ್ಯ ಸ್ಥಾಯಿ ಸಮಿತಿಯ ಪದನಿಮಿತ್ತ ಸದಸ್ಯ ಹಾಗೂ ಅಧ್ಯಕ್ಷರಾಗಿರುತ್ತಾರೆ. ಇತರೆ ಸ್ಥಾಯಿ ಸಮಿತಿಗೆ ಸದಸ್ಯರುಗಳ ಪೈಕಿ ಒಬ್ಬನನ್ನು ಅಧ್ಯಕ್ಷನಾಗಿ ಚುನಾಯಿಸಿಕೊಳ್ಳುವುದು. ಯಾವ ಸದಸ್ಯನು ಎರಡಕ್ಕಿಂತ ಹೆಚ್ಚು ಸ್ಥಾಯಿ ಸಮಿತಿಗಳಲ್ಲಿ ಸೇವೆ ಸಲ್ಲಿಸಲು ಅರ್ಹನಾಗಿರುದಿಲ್ಲ.

**ಸಾಮಾನ್ಯ ಸ್ಥಾಯಿ ಸಮಿತಿಯು** ಸಿಬ್ಬಂದಿಗಳ ವಿಷಯ, ಗ್ರಾಮೀಣ ಗೃಹ ನಿರ್ಮಾಣ, ಗ್ರಾಮ ವಿಸ್ತರಣೆ, ನೀರು ಸರಬರಾಜು ಹಾಗೂ ನೈಸರ್ಗಿಕ ವಿಪತ್ತುಗಳಿಗೆ ಪರಿಹಾರ ನೀಡುವ ವಿಷಯಗಳನ್ನು ನಿರ್ವಹಿಸುತ್ತದೆ.

**ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸಮಿತಿಯು** ಜಿಲ್ಲಾ ಪಂಚಾಯತಿಯ ಅದಾಯ ಮತ್ತು ವೆಚ್ಚದ ಸಾಮಾನ್ಯ ಮೇಲ್ವಿಚಾರಣೆ, ಆದಾಯ ವೃದ್ಧಿಪಡಿಸಲು ವಿವಿಧ ಯೋಜನೆಗಳನ್ನು ರೂಪಿಸುವುದು ಮತ್ತು ಜಿಲ್ಲಾ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ವಿಷಯಗಳ ಪರಿಶೀಲನೆ ಮತ್ತು ನಿರ್ವಹಣೆ.

**ಸಾಮಾಜಿಕ ನ್ಯಾಯ ಸಮಿತಿಯು** ಅನುಸೂಚಿತ ಜಾತಿ, ಪಂಗಡ, ಮಹಿಳೆಯರು ಮತ್ತು ಇತರ ದುರ್ಬಲ ವರ್ಗದವರ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು ಮತ್ತು ಸಾಮಜಿಕ ನ್ಯಾಯವನ್ನು ದೊರಕಿಸುವ ವಿಷಯಗಳ ಬಗ್ಗೆ ಪರಿಶೀಲನೆ.

**ಶಿಕ್ಷಣ ಮತ್ತು ಆರೋಗ್ಯ ಸಮಿತಿಯು** ಜಿಲ್ಲಾ ಪಂಚಾಯತಿ ವ್ಯಾಪ್ತಿಯಲ್ಲಿ ಶೈಕ್ಷಣಿಕ ಚಟುವಟಿಕೆಯ ಹೊಣೆಗಾರಿಕೆ, ಮೌಲ್ಯನಿರ್ಣಯ, ರಾಷ್ಟ್ರೀಯ ಶಿಕ್ಷಣ ನೀತಿ ಚೌಕಟ್ಟಿನ ಒಳಗೆ ಜಿಲ್ಲಾ ಶಿಕ್ಷಣ ನೀತಿ ರೂಪಿಸುವುದು, ಆರೋಗ್ಯ ಸೇವೆಗಳು ಆಸ್ಪತ್ರೆಗಳ ಕಾರ್ಯ ಚಟುವಟಿಕೆಯ ಉಸ್ತುವಾರಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳ ವಿಷಯಗಳಿಗೆ ಸಂಬಂಧಿಸಿದಂತೆ ಜವಾಬ್ದಾರಿ ನಿರ್ವಹಣೆ.

**ಕೃಷಿ ಮತ್ತು ಕೈಗಾರಿಕಾ ಸಮಿತಿಯು** ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಕೃಷಿ ಉತ್ಪಾದನೆ, ಪಶು ಸಂಗೋಪನೆ, ಕೃಷಿಭೂಮಿ ಅಭಿವೃದ್ಧಿಗೊಳಿಸುವುದು, ಗುಡಿಕೈಗಾರಿಕೆಗಳ ಉತ್ತೇಜನ ಹಾಗೂ ಜಿಲ್ಲೆಯಲ್ಲಿ ಕೈಗಾರಿಕೆ ಅಭಿವೃದ್ಧಿಯನ್ನು ಉತ್ತೇಜಿಸುವ ವಿಷಯಗಳನ್ನು ನಿರ್ಮಿಸುವುದು.

ಜಿಲ್ಲಾ ಪಂಚಾಯತಿಗಳು ಈ ಸಮಿತಿಗಳ ಸದಸ್ಯರ ಚುನಾವಣೆ, ಕಾರ್ಯವಿಧಾನ ಮತ್ತು ಅವುಗಳಿಗೆ ವಹಿಸುವ ವಿಷಯಗಳಿಗೆ ಸಂಬಂಧಪಟ್ಟಂತೆ ವಿ-ನಿಯಮಗಳನ್ನು ರಚಿಸಬಹುದು. ಪ್ರತಿಯೊಂದು ಸಮಿತಿಯ ಅಧ್ಯಕ್ಷನು ಸಮಿತಿಯು ನಿರ್ವಹಿಸುವ ವಿಷಯಗಳಿಗೆ ಸಂಬಂಧಪಟ್ಟ ಮಾಹಿತಿ, ವಿವರಣಾ ಪಟ್ಟಿಯನ್ನು ಜಿಲ್ಲಾ ಪಂಚಾಯತಿಯಿಂದ ಪಡೆಯಲು ಮತ್ತು ಪರಿಪಶೀಲಿಸಲು ಅಧಿಕಾರವಿರುತ್ತದೆ. ಅಗತ್ಯವಿದ್ದಲ್ಲಿ ಕಾಮಗಾರಿಯನ್ನು ಪರಿಶೀಲಿಸಲು ಮತ್ತು ಸಂಬಂಧಪಟ್ಟ ಯಾವುದೇ ಅಧಿಕಾರಿಯನ್ನು ಹಾಜರಾಗುವಂತೆ ತಿಳಿಸಬಹುದಾಗಿದೆ.

**36. ಜಿಲ್ಲಾ ಪಂಚಾಯತಿ ಅಧ್ಯಕ್ಷರ ಅಧಿಕಾರಗಳು ಮತ್ತು ಕರ್ತವ್ಯಗಳು:**

ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ ರಾಜ್ಯ ಸಚಿವರ ಸ್ಥಾನಮಾನವನ್ನು ನೀಡಲಾಗಿದೆ. ಅವರುಗಳಿಗೆ ಸರ್ಕಾರವು ಸಂಬಳ ಮತ್ತು ಇನ್ನಿತರ ಭತ್ಯೆಗಳನ್ನು ಕಾಲಕಾಲಕ್ಕೆ ನಿಗದಿಗೊಳಿಸುವುದು. ಅಧ್ಯಕ್ಷರು ಜಿಲ್ಲಾ ಪಂಚಾಯತಿ ಸಭೆಗಳನ್ನು ಕರೆಯುತಕ್ಕದ್ದು ಮತ್ತು ಅಧ್ಯಕ್ಷತೆಯನ್ನು ವಹಿಸತಕ್ಕದ್ದು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್

ಅಧಿನಿಯಮ 1993 ರಡಿಯಲ್ಲಿ ಹೊರಡಿಸಿದ ಸಾಮಾನ್ಯ ಅಥವಾ ನಿರ್ದಿಷ್ಟ ನಿರ್ದೇಶನಗಳ ಉಪಬಂಧಗಳಿಗೆ ಅಸಂಗತವಲ್ಲದ ಜಿಲ್ಲಾ ಪಂಚಾಯತಿಯ ಅಥವಾ ಸ್ಥಾಯಿ ಸಮಿತಿಗಳ ನಿರ್ಣಯಗಳು ಅಥವಾ ತೀರ್ಮಾನಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಮೇಲೆ ಆಡಳಿತಾತ್ಮಕ ಮೇಲ್ವಿಚಾರಣೆ ಮತ್ತು ನಿಯಂತ್ರನವನ್ನು ಮಾಡಬಹುದು. ಈಲ್ಲಾ ಪಂಚಾಯತಿಯ ಹಣಕಾಸಿನ ವಿಷಯಗಳ ಹಾಗೂ ಕಾರ್ಯನಿರ್ವಹಣಾ ಆಡಳಿತದ ಸಮರ್ಗ ಮೇಲ್ವಿಚಾರಣೆ ಮಾಡಬಹುದು. ಮತ್ತು ಜಿಲ್ಲಾ ಪಂಚಾಯತಿಯ ಆದೇಶ ಅಗತ್ಯವಿದೆ ಎಂದು ಕಂಡುಬಂದ ವಿಷಯುಗಳಿಗೆ ಸಂಬಂಧಿಸಿದ ಎಲ್ಲಾ ವಿವರಗಳನ್ನು ಮತ್ತು ದಾಖಲೆಗಳನ್ನು ಪಡದು ಜಿಲ್ಲಾ ಪಂಚಾಯತಿಯ ಮುಂದೆ ತರತಕ್ಕದ್ದು. ಜಿಲ್ಲೆಯಲ್ಲಿ ಉಂಟಾಗುವ ಪ್ರಕೃತಿ ವಿಕೋಪಗಳಿಗೆ ತುರ್ತು ಪರಿಹಾರ ನೀಡುವ ಉದ್ದೇಶಕ್ಕೆ ಒಂದು ವರ್ಷದಲ್ಲಿ ಒಟ್ಟು 5 ಲಕ್ಷ ರೂ. ಗಳವರೆಗೆ ಮಂಜೂರಾತಿ ನೀಡಬಹುದಾಗಿದೆ. ಇಂಥಹ ಮಂಜೂರಾತಿಯ ವಿವರಗಳನ್ನು ಮುಂದಿನ ಜಿಲ್ಲಾ ಪಂಚಾಯತಿ ಸಭೆಯಲ್ಲಿ ಮಂಡಿಸಿ ಸ್ಥಿರೀಕರಿಸಬೇಕು. (ಪ್ರಕರಣ–193)

ಅಧ್ಯಕ್ಷರ ಗೈರುಹಾಜರಿಯಲ್ಲಿ ಅಥವಾ ರಜೆಯ ಮೇಲಿದ್ದಾಗ ಅಥವಾ ಹುದ್ದೆ ಖಾಲಿ ಇದ್ದಾಗ ಉಪಾಧ್ಯಕ್ಷರು ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ಕಾರ್ಯಗಳನ್ನು ನಿರ್ವಹಿಸಬಹುದು ಹಾಗೂ ಜಿಲ್ಲಾ ಪಂಚಾಯತಿಯ ಸಭೆಗಳ ಅಧ್ಯಕ್ಷತಯನ್ನು ವಹಿಸಬಹುದು. (ಪ್ರಕರಣ–194)

**37. ಮುಖ್ಯಕಾರ್ಯನಿರ್ವಾಹಕಾಧಿಕಾರಿ – ಅಧಿಕಾರ ಮತ್ತು ಕರ್ತವ್ಯಗಳು:**

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯುಮ 1993ರಡಿಯುಲ್ಲಿ ಉಪಬಂಧಿಸಿರುವ ಎಲ್ಲಾ ಅಧಿಕಾರ ಮತ್ತು ಜವಾಬ್ದಾರಿಗಳನ್ನು ನಿರ್ವಹಿಸಬೇಕು. ಇದರ ಜೊತೆಗೆ ಸಕಾರವು ಆಗಿಂದಾಗೆಯೆ ವಹಿಸಬಹುದಾದ ಪ್ರಕಾರ್ಯಗಳನ್ನು ನಿರ್ವಹಿಸಬೇಕು. ಅಧ್ಯಕ್ಷರುಗಳ ಸಾಮಾನ್ಯ ಮೇಲ್ವಿಚಾರಣೆ ಹಾಗೂ ನಿಯಂತ್ರಣಕ್ಕೆ ಮತ್ತು ನಿಯಮಿಸಬಹುದಾದ ನಿಯಮಗಳಿಗೆ ಒಳಪಟ್ಟು ಜಿಲ್ಲಾ ಪಂಚಾಯತಿಯ ಮತ್ತು ಅದರ ಅಧೀನದಲ್ಲಿ ಕಾರ್ಯನಿರ್ವಹಿಸುವ ಎಲ್ಲಾ ಅಧಿಕಾರಿಗಳು ಮತ್ತು ನೌಕರರನ್ನು ನಿರ್ವಹಿಸುವ ಜವಾಬ್ದಾರಿ ಇರುತ್ತದೆ. ಜಿಲ್ಲಾ ಪಂಚಾಯುತಿಯು ಕಾಮಗಾರಿಗಳ ಮತ್ತು ಅಭಿವೃದ್ಧಿ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವುದು, ಯೋಜನೆಗಳನ್ನು ತುರ್ತಾಗಿ ಅನುಷ್ಠಾನಗೊಳಿಸಲು ಅಗತ್ಯವಿರುವ ಎಲ್ಲಾ ಕ್ರಮಗಳನ್ನು ವಹಿಸುವ ಹಾಗೂ ಜಿಲ್ಲಾ ಪಂಚಾಯತಿಯ ನಿಧಿಯಿಂದ ಹಣವನ್ನು ತೆಗೆಯುವ ಮತ್ತು ಬಟಾವಾಡೆ ಮಾಡುವ ಅಧಿಕಾರವಿರುತ್ತದೆ.

ಜಿಲ್ಲಾ ಪಂಚಾಯತಿಯ ಪ್ರತಿಯೊಂದು ಸಭೆಗೂ ಹಾಜರಾಗಬೇಕು ಮತ್ತು ಅದರ ಯಾವುದೇ ಸಮಿತಿಯ ಸಭೆಗೆ ಹಾಜರಾಗಲು ಮತ್ತು ಚರ್ಚೆಯಲ್ಲಿ ಭಾಗವಹಿಸಲು ಅಧಿಕಾರ ಹೊಂದಿರುತ್ತಾರೆ. ಆದರೆ ಯಾವುದೇ ನಿರ್ಣಯವನ್ನು ಮಂಡಿಸಲು ಮತ್ತು ಮತ ಚಲಾಯಿಸಲು ಅಧಿಕಾರ ಇರುವುದಿಲ್ಲ. ಅಧ್ಯಕ್ಷರ ಆದೇಶ, ಜಿಲ್ಲಾ ಪಂಚಾಯತಿಯ ನಿರ್ಣಯ ಅಥವಾ ಸಮಿತಿಗಳ ನಿರ್ಣಯ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಮಾಡಿರುವ ಯಾವುದೇ ನಿಯಮ ಅಥವಾ ಆದೇಶ ಅಥವಾ ಆರ್ಥಿಕ ನಿಯುಮಗಳು ಮತ್ತು ಆಯುವ್ಯಯಗಳ ಏರ್ಪಾಟುಗಳನ್ನು ಉಲ್ಲಂಘಿಸುವಂತಾಗಿದ್ದರೆ ಅಥವಾ ಅಸಂಗತವಾಗಿದೆ ಎಂದು ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಅಭಿಪ್ರಾಯ ಪಟ್ಟರೆ, ಅಂತಹ ನಿಯಮಗಳನ್ನು ಉಲ್ಲೇಖಿಸಿ ಅಧ್ಯಕ್ಷರಿಗೆ ಅಥವಾ ಸಮಿತಿಗೆ ಅಥವಾ ಜಿಲ್ಲಾ ಪಂಚಾಯತಿಗ ಟಿಪ್ಪಣಿಯೊಡನೆ ಸಲಹೆ ನೀಡಬೇಕು. ಒಂದು ವೇಳೆ ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳ ಸಲಹೆಗಳನ್ನು ಜಿಲ್ಲಾ ಪಂಚಾಯತಿ, ಅವುಗಳ ಸಮಿತಿ ಅಥವಾ ಅಧ್ಯಕ್ಷರು ಮಾನ್ಯ ಮಾಡದಿದ್ದರೆ ಸದರಿ ನಿರ್ಣಯ ಅಥವಾ ಆದೇಶದ ಪ್ರತಿಯನ್ನು ಟಿಪ್ಪಣಿಯೊಂದಿಗೆ ಸರ್ಕಾರಕ್ಕೆ ಕಳುಹಿಸುವುದು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಯು ಜವಾಬ್ದಾರಿಯಾಗಿರುತ್ತದೆ. ಈ ಬಗ್ಗೆ ಸರ್ಕಾರದ

ತೀರ್ಮಾನದ ನಂತರ ನಿರ್ಣಯದ ಬಗ್ಗೆ ನಿರ್ಧಾರ ಕೈಗೊಳ್ಳಬಹುದು. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ, ಜಿಲ್ಲಾ ಪಂಚಾಯತಿಯಿಂದ ಆಡಳಿತ, ಹಣಕಾಸು ವ್ಯವಹಾರ ಹಾಗೂ ಯೋಜನೆಗಳ ಅನುಷ್ಠಾನದ ವಿವರಗಳನ್ನು ದಾಖಲೆಗಳು ಪಡೆದು ಪರಿಶೀಲಿಸಲು ಅಧಿಕಾರ ಹೊಂದಿರುತ್ತಾರೆ. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಯಾವುದೇ ವ್ಯಕ್ತಿಯಿಂದ ಬಾಕಿಯಿರುವ ಹಣವನ್ನು ಸುಸ್ತಿದಾರರಿಂದ ಪಡೆಯಲು ಭೂಕಂದಾಯ ಬಾಕಿಗಳ ವಸೂಲಿಗೆ ನಿರ್ಧಿಷ್ಟಪಡಿಸಿರುವ ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಅನ್ವಯ ಅಧಿಕಾರ ಹೊಂದಿರುತ್ತಾರೆ. ಜಿಲ್ಲಾ ಪಂಚಾಯತಿಯ ಪರವಾಗಿ ಕರಾರನ್ನು ಅಥವಾ ಒಪ್ಪಂದವನ್ನು ಮಾಡಲು ಅಧಿಕಾರ ಹೊಂದಿರುತ್ತಾರೆ.

ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗೆ ಹಣಕಾಸಿನ ಕಾರ್ಯನೀತಿಯಲ್ಲಿ ಸಲಹೆ ನೀಡಲು, ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ದಪಡಿಸಲು ಮತ್ತು ಲೆಕ್ಕ ಪತ್ರಕ್ಕೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳಲ್ಲಿ ನೆರವಾಗಲು ಮುಖ್ಯ ಲೆಕ್ಕಾಧಿಕಾರಿಯನ್ನು ನೇಮಿಸಲಾಗಿರುತ್ತದೆ. ಉಪಕಾರ್ಯದರ್ಶಿಯೂ ಸೇರಿದಂತೆ ಇತರೆ ಅಧಿಕಾರಿಗಳು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗೆ ಕಾರ್ಯ ನಿರ್ವಹಣೆಯಲ್ಲಿ ನೆರವಾಗಬೇಕು. (ಪ್ರಕರಣ–195,197,198).

38. ಜಿಲ್ಲಾ ಪಂಚಾಯತಿಗಳು ಸ್ವತ್ತನ್ನು ಅರ್ಜಿಸ ಬಹುದು, ಧಾರಣ ಮಾಡಬಹುದು ಮತ್ತು ವಿಲೇ ಮಾಡಬಹುದು. ತನ್ನ ಅಧೀನದಲ್ಲಿರುವ, ಸ್ವಾಮ್ಯತೆ ಯಲ್ಲಿರುವ ಯಾವುದೇ ಚರ ಅಥವಾ ಸ್ಥಿರ ಸ್ವತ್ತನ್ನು ವಿಲೇ ಅಥವಾ ವರ್ಗಾವಣೆ ಮಾಡು ವುದಕ್ಕೆ ಸರ್ಕಾರ ರಚಿಸಿರುವ ನಿಯಮಗಳಿಗೆ ಒಳಪಡತಕ್ಕದ್ದು. ಸರ್ಕಾರವು ಸಹಾ ತನ್ನ ಯಾವುದೇ ಸ್ವತ್ತನ್ನು ಜಿಲ್ಲಾ ಪಂಚಾಯತಿಗೆ ವಹಿಸಬಹುದು / ನಿಹಿತಗೊಳಿಸಬಹುದು. ಇಂತಹ ಸ್ವತ್ತುಗಳನ್ನು ಗುತ್ತಿಗೆ ಅಥವಾ ಮಾರಾಟ ಮಾಡಲು ಸರ್ಕಾರದ ಪೂರ್ವಾನುಮೋದನೆ ಅಗತ್ಯವಿರುತ್ತದೆ. (ಪ್ರಕರಣ–222, 223). ಜಿಲ್ಲಾ ಪಂಚಾಯತಿಗಳು ಯಾವುದೇ ಕಾಮಗಾರಿಯ ನಿರ್ವಹಣೆಗೆ ಅಥವಾ ಈ ಅಧಿನಿಯಮದ ಯಾವುದೇ ಉದ್ದೇಶಕ್ಕಾಗಿ ಸರ್ಕಾರದ ಪೂರ್ವಾನುಮೋದನೆ ಪಡೆದು ಸಾಲಗಳನ್ನು ಎತ್ತಬಹುದು ಮತ್ತು ಅಂತಹ ಸಾಲಗಳ ಮರುಪಾವತಿಗೆ ನಿಧಿಯನ್ನು ರಚಿಸಿಕೊಳ್ಳಬೇಕು. (ಪ್ರಕರಣ–229)

39. ಜಿಲ್ಲಾ ಪಂಚಾಯತಿಗಳು, ಜಿಲ್ಲಾ ಪಂಚಾಯತಿ ನಿಧಿಯನ್ನು ಸ್ಥಾಪಿಸಿಕೊಳ್ಳಬೇಕು. ಈ ನಿಧಿಗೆ ಸರ್ಕಾರದ ಸಂಚಿತ ನಿಧಿಯಿಂದ, ಅನುದಾನ ಗಳಿಂದ, ಸಾಲಗಳಿಂದ, ವಂತಿಕೆಗಳಿಂದ, ಜಿಲ್ಲಾ ಪಂಚಾಯತಿಯ ಸ್ವತ್ತು, ಕಟ್ಟಡಗಳಿಂದ ಬರುವ ಬಾಡಿಗೆಗಳು, ಮಾರಾಟದಿಂದ ಬರುವ ಸ್ವೀಕೃತಿ ಮುಂತಾದ ಎಲ್ಲಾ ಸ್ವೀಕೃತಿಗಳನ್ನು ಈ ನಿಧಿಯಲ್ಲಿ ಜಮೆ ಮಾಡಬೇಕು. ಈ ನಿಧಿಯನ್ನು ಸರ್ಕಾರದ ಉಳಿತಾಯ ಬ್ಯಾಂಕು ಅಥವಾ ಸರ್ಕಾರದ ಮಂಜೂರಾತಿಯೊಂದಿಗೆ ಯಾವುದೇ ಅನು ಸೂಚಿತ ಬ್ಯಾಂಕುಗಳು ಮತ್ತು ಸಹಕಾರಿ ಬ್ಯಾಂಕುಗಳಲ್ಲಿ ತೆರೆಯಬಹುದು. ಈ ನಿಧಿಯನ್ನು ಸರ್ಕಾರದ ಆದೇಶಗಳಿಗೊಳಪಟ್ಟು ಹಾಗೂ ಜಾರಿಯಲ್ಲಿರುವ ಯಾವುದೇ ಕಾನೂನು ಮೇರೆಗೆ ಜಿಲ್ಲಾ ಪಂಚಾಯತಿಯ ಪ್ರಕಾರ್ಯಗಳು (ಪ್ರಕರಣ–184) ಹಾಗೂ ವಹಿಸಿರುವ ಇತರೆ ಜವಾಬ್ದಾರಿಗಳ (ಪ್ರಕರಣ–185) ನ್ನು ನಿರ್ವಹಿಸಲು ಬಳಸಿಕೊಳ್ಳ ಬಹುದಾಗಿದೆ. ಇದರಲ್ಲಿ ಶೇ. 20% ಕ್ಕಿಂತ ಕಡಿಮೆ ಇರದ ಮೊತ್ತವನ್ನು ಅನುಸೂಚಿತ ಜಾತಿ ಮತ್ತು ಪಂಗಡಗಳ ಕಲ್ಯಾಣಕ್ಕಾಗಿ ಉಪಯೋಗಿಸಿ ಕೊಳ್ಳಬಹುದು. ಈ ನಿಧಿಯಿಂದ ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳನ್ನು ಪಾವತಿಸಬಹುದು.

40. ಜಿಲ್ಲಾ ಪಂಚಾಯತಿಗಳು ಪ್ರತಿ ಮಾರ್ಚ್ 31ನೇ ದಿನದಂದು ಕೊನೆಗೊಳ್ಳುವ ಆರ್ಥಿಕ ವರ್ಷದ ವಾಸ್ತವಿಕ ಹಾಗೂ ನಿರೀಕ್ಷಿತ ಜಮೆ ಮತ್ತು ವೆಚ್ಚಗಳ ಸಂಪೂರ್ಣ ಪಟ್ಟಿಯನ್ನು ಸಿದ್ಧ ಪಡಿಸಬೇಕು. ಈ ಪಟ್ಟಿಯನ್ನು ಫೆಬ್ರವರಿ ತಿಂಗಳ ಮೊದಲನೇ ದಿನ ಮತ್ತು ಮಾರ್ಚ್ 10 ರಲ್ಲಿ ನಡೆಯುವ ಜಿಲ್ಲಾ ಪಂಚಾಯತಿಯ ಸಭೆಯ ಮುಂದೆ ಮಂಡಿಸಬೇಕು. ಮುಂಬರುವ ಏಪ್ರಿಲ್

ಮೊದಲನೇಯ ದಿನದಿಂದ ಪ್ರಾರಂಭವಾಗುವ ಆರ್ಥಿಕ ವರ್ಷದ ಆದಾಯ ಮತ್ತು ವೆಚ್ಚಗಳ ಅಂದಾಜು ಪಟ್ಟಿಯನ್ನು ಸಹ ಸಭೆಯಲ್ಲಿ ಮಂಡಿಸಬೇಕು. ಜಿಲ್ಲಾ ಪಂಚಾಯತಿಯು ಅಂಗೀಕರಿಸಿದಂತ ಬಜೆಟ್‌ನ್ನು ಸರ್ಕಾರಕ್ಕೆ ಕಳುಹಿಸಬೇಕು. (ಪ್ರಕರಣ–256)

41. ಜಿಲ್ಲಾ ಪಂಚಾಯತಿಯ ಅದಾಯ ಮತ್ತು ಲೆಕ್ಕ ಪತ್ರಗಳ ದಾಖಲೆಗಳನ್ನು ನಿಯಮಾನುಸಾರ ನಿರ್ವಹಿಸಬೇಕು. ವಾರ್ಷಿಕ ಲೆಕ್ಕಪತ್ರಗಳನ್ನು ಜಿಲ್ಲಾ ಪಂಚಾಯತಿಯು ಅನುಮೋದಿಸಿದ ನಂತರ ಸರ್ಕಾರಕ್ಕೆ ಸಲ್ಲಿಸಬೇಕು. ವಸೂಲಾಗದ ಯಾವುದೇ ಮೊತ್ತವು ಒಂದು ಸಾವಿರ ರೂ. ಗಳಿಗಿಂತ ಹೆಚ್ಚಾಗಿದ್ದಲ್ಲಿ ಸರ್ಕಾರದ ಪೂರ್ವಾನುಮತಿಯಿಲ್ಲದೆ ವಜಾ ಮಾಡಬಾರದು. ಭಾರತ ಕಂಪ್ಟ್ರೋಲರ್ ಮತ್ತು ಆಡಿಟ್ ಜನರಲ್ ರವರು ಜಿಲ್ಲಾ ಪಂಚಾಯತಿಯ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧನೆ ಮಾಡಲು ಅಧಿಕಾರವುಳ್ಳವ ರಾಗಿರುತ್ತಾರೆ. ಜಿಲ್ಲಾ ಪಂಚಾಯತಿಯ ಲೆಕ್ಕಪರಿಶೋಧನಾ ವರದಿಗಳು ಬಂದ ನಂತರ ಸರ್ಕಾರವು ವರದಿಗಳನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸಬೇಕು. ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳ ಬಾಕಿ ವಸೂಲಿಗಾಗಿ ತಗಾದೆ ನೋಟೀಸನ್ನು ನೀಡುವ ಹಾಗೂ ಬಾಕಿ ಮೊತ್ತ ಪಾವತಿಯಾಗದಿದ್ದರೆ ಬಾಕಿದಾರರಿಗೆ ಸೇರಿದ ಚರಾ ಮತ್ತು ಸ್ಥಿರ ವಸ್ತುಗಳನ್ನು ಜಪ್ತಿಮಾಡುವ ಅಧಿಕಾರವನ್ನು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಹಾಗೂ ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ಹೊಂದಿರುತ್ತಾರೆ. (ಪ್ರಕರಣ – 262, 263, 265, 266)

42. ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್‌ಗಳ ಹಣಕಾಸು ಪರಿಸ್ಥಿತಿಗಳನ್ನು ಪರಾಮರ್ಶಿಸಲು ಹಾಗೂ ಅನುದಾನ ಒದಗಿಸುವ ಬಗ್ಗೆ ಶಿಫಾರಸ್ಸು ವರದಿಯನ್ನು ಸಿದ್ದಪಡಿಸಲು ರಾಜ್ಯ ಸರ್ಕಾರ ಹಣಕಾಸು ಆಯೋಗವನ್ನು ರಚಿಸಿರುತ್ತದೆ. ಈಗ 4ನೇ ಹಣಕಾಸು ಆಯೋಗವು ರಚನೆಯಾಗಿದ್ದು, ಈ ಕಾರ್ಯವನ್ನು ನಿರ್ವಹಿಸುತ್ತಿದೆ, ಇದರ ಶಿಫಾರಸ್ಸಿನ ಆಧಾರದ ಮೇಲೆ ಗ್ರಾಮ, ತಾಲ್ಲೂಕು, ಜಿಲ್ಲಾ ಪಂಚಾಯತಿಗಳಿಗೆ ಅನುದಾನ ಬಿಡುಗಡೆ ಮಾಡುತ್ತದೆ. (ಪ್ರಕರಣ–267). ಇದೇ ರೀತಿ ಕೇಂದ್ರ ಸರ್ಕಾರವು ಸಹಾ ಹಣಕಾಸು ಆಯೋಗವನ್ನು ರಚಿಸಿದ್ದು, ಈಗ 14ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಕೇಂದ್ರ ಸರ್ಕಾರವು 14ನೇ ಹಣಕಾಸು ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುತ್ತಿದೆ.

43. ಗ್ರಾಮ ಪಂಚಾಯತಿಗಳನ್ನು ತಾಲ್ಲೂಕು ಪಂಚಾಯತಿ ಕಾರ್ಯ ನಿರ್ವಾಹಕಾಧಿಕಾರಿ ಹಾಗೂ ತಾಲ್ಲೂಕು ಪಂಚಾಯತಿಗಳನ್ನು ಮುಖ್ಯ ಕಾರ್ಯನಿರ್ವಾಹಕಾಧಿಕಾರಿಯು ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿ ಪರಿವೀಕ್ಷಣೆ ಮಾಡಬಹುದು. ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿ ಹಂತದಲ್ಲಿ ಕಾರ್ಯಗತವಾಗುತ್ತಿರುವ ಯೋಜನೆಗಳ ತಾಂತ್ರಿಕ ಮೇಲ್ವಿಚಾರಣೆಯನ್ನು ಸಂಬಂಧಪಟ್ಟ ಇಲಾಖಾಧಿಕಾರಿಗಳು ಮಾಡಬಹುದಾಗಿದೆ. (ಪ್ರಕರಣ–232, 233)

44. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಯ ವ್ಯವಹಾರಗಳ ಬಗ್ಗೆ ಸರ್ಕಾರವು ವಿಚಾರಣೆ ಮಾಡಬಹುದಾಗಿದೆ ಹಾಗೂ ನಿಯಮಾವಳಿಗಳ ಪ್ರಕಾರ ಮಾಡ ಬೇಕಾದ ಕೆಲಸವನ್ನು ನಿರ್ಧಿಷ್ಟ ಅವಧಿಯೊಳಗೆ ಮಾಡುವಂತೆ ಆದೇಶಿಸಲು ಅಧಿಕಾರ ಹೊಂದಿದೆ. ಗ್ರಾಮ ಪಂಚಾಯತಿಯ ಕಾನೂನು ಬಾಹಿರ ಆದೇಶಗಳು ಅಥವಾ ನಿರ್ಣಯಗಳನ್ನು ಅಥವಾ ಶಾಂತಿ ಬಂಗಕ್ಕೆ ಕಾರಣವಾಗುವ ಆದೇಶಗಳನ್ನು ಅಮಾನತುಗೊಳಿಸುವ ಅಧಿಕಾರ ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಹಾಗೂ ತಾಲ್ಲೂಕು ಪಂಚಾಯತಿಯ ಯಾವುದೇ ಇಂತಹ ಆದೇಶ ಅಥವಾ ನಿರ್ಣಯ ಕಾನೂನು ಬಾಹಿರವಾಗಿದ್ದರೆ ಅಮಾನತುಗೊಳಿಸುವ ಅಧಿಕಾರ ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಇರತ್ತದೆ. (ಪ್ರಕರಣ–234,235,236,237)

45. ಗ್ರಾಮ ಪಂಚಾಯತಿಯು ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದರೆ, ಅದಕ್ಕೆ

ವಹಿಸಿದ ಕರ್ತವ್ಯಗಳನ್ನು ನೆರವೇರಿಸಲು ವಿಫಲವಾಗಿದ್ದರೆ, ತಾಲ್ಲೂಕು ಪಂಚಾಯತಿಯ ಶಿಫಾರಸ್ಸಿನ ಮೇರೆಗೆ ಅಥವಾ ಅನ್ಯತಾ ಜಿಲ್ಲಾ ಪಂಚಾಯತಿಯ ಅಭಿಪ್ರಾಯದಲ್ಲಿ ಗ್ರಾಮ ಪಂಚಾಯತಿಯು ವಿಫಲವಾಗಿದ್ದರೆ ಅಂತಹ ಗ್ರಾಮ ಪಂಚಾಯತಿಯನ್ನು ಜಿಲ್ಲಾ ಪಂಚಾಯತಿಯು ವಿಸರ್ಜಿಸಬಹುದು. ಇದೇ ಕಾರಣಕ್ಕಾಗಿ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿಗಳನ್ನು ಸರ್ಕಾರ ವಿಸರ್ಜಿಸ ಬಹುದು. (ಪ್ರಕರಣ–268)

46. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಯ ಚುನಾವಣೆ ಗಳನ್ನು ರಾಜ್ಯ ಚುನಾವಣಾ ಆಯೋಗ ಜಿಲ್ಲಾಧಿಕಾರಿಗಳ ಮುಖಾಂತರ ನಡೆಸುತ್ತದೆ. ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿಗಳಗೆ ಸಾರ್ವತ್ರಿಕ ಚುನಾವಣೆಯನ್ನು ನಡೆಸಲು ಸಾಧ್ಯವಾಗದಿದ್ದಾಗ ಸರ್ಕಾರ ಆಡಳಿತಾಧಿ ಕಾರಿಗಳನ್ನು ನೇಮಿಸುತ್ತದೆ. (ಪ್ರಕರಣ–239).

47. ಪಂಚಾಯತ್ ರಾಜ್ ಸಂಸ್ಥೆಗಳಾದ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳ ಸುಗಮ ಆಡಳಿತ ನಿರ್ವಹಣೆಗಾಗಿ ಪ್ರತ್ಯೇಕ ಪಂಚಾಯತ್ ರಾಜ್ ಆಯುಕ್ತಾಲಯ ಮತ್ತು ಪಂಚಾಯತ್ ರಾಜ್ ಆಡಳಿತಾತ್ಮಕ ಸೇವೆಯನ್ನು ಪ್ರಾರಂಭಿಸಲಾಗಿದೆ.

48. ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಯ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಪ್ರತಿದಿನ ಹಾರಿಸಬೇಕು. (ಪ್ರಕರಣ–307)

49. ಪಂಚಾಯತ್ ರಾಜ್ ಸಂಸ್ಥೆಗಳನ್ನು ಆಡಳಿತಾ ತ್ಮಕವಾಗಿ ಸದೃಡಗೊಳಿಸಲಾಗಿದೆ ಪ್ರತಿಯೊಂದು ಗ್ರಾಮ ಪಂಚಾಯತಿಯು ಜನವಸತಿ ಸಭಾ, ವಾರ್ಡ್ ಸಭಾ ಹಾಗೂ ಗ್ರಾಮ ಸಭೆಗಳ ವ್ಯಾಪ್ತಿಯ ಜನಸಂಖ್ಯೆ ಹಾಗೂ ಅಗತ್ಯತೆಗಳನ್ನು ಆಧಾರವಾಗಿರಿಸಿಕೊಂಡು ಮುಂದಿನ 5 ವರ್ಷಗಳಿಗಾಗಿ ಪ್ರತಿ ವರ್ಷದ ಅಗತ್ಯ–ಆಧಾರಿತ ವಾರ್ಷಿಕ ಯೋಜನೆಗಳನ್ನು ಆದ್ಯತೆಯ ಮೇಲೆ ಸಿದ್ದಪಡಿಸಿಕೊಳ್ಳಬೇಕು. ಇಂತಹ ದೂರದೃಷ್ಠಿ ಯೋಜನೆಯನ್ನು ಜನತೆಯನ್ನು ಪಾಲ್ಗೊಳ್ಳು ವಿಕೆಯ ಮುಖಾಂತರ ಸಿದ್ದಪಡಿಸಬೇಕು. ಗ್ರಾಮ ಪಂಚಾಯತಿಗಳ ಸಿದ್ದಪಡಿಸುವ ಯೋಜನೆ ಗಳನ್ನು ತಾಲ್ಲೂಕು ಪಂಚಾಯತಿಗೆ, ತಾಲ್ಲೂಕು ಪಂಚಾಯತಿಯು ಪರಿಶೀಲಿಸಿದ ನಂತರ ಜಿಲ್ಲಾ ಪಂಚಾಯತಿಗೆ, ಜಿಲ್ಲಾ ಪಂಚಾಯತಿಯು ಎಲ್ಲಾ ತಾಲ್ಲೂಕು ಪಂಚಾಯತಿಗಳಿಂದ ಸ್ವೀಕರಿಸಿದ ನಂತರ ಜಿಲ್ಲಾ ಅಭಿವದ್ಧಿ ಯೋಜನೆಯನ್ನು ಸಿದ್ದಪಡಿಸಬೇಕು, ತದನಂತರ ಜಿಲ್ಲಾ ಅಭಿವೃದ್ಧಿ ಯೋಜನೆಗೆ ಸಲ್ಲಿಸಬೇಕು. (ಪ್ರಕರಣ–309– ಬಿ, ಸಿ, ಡಿ,.....)

50. ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ತಾಲ್ಲೂಕು ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಯೋಜನೆ ಅಭಿವೃದ್ಧಿ ಸಮಿತಿ ಹಾಗೂ ರಾಜ್ಯ ಮಟ್ಟದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯ ವಿಕೇಂದ್ರಿಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಇರುತ್ತವೆ. ಈ ಸಮಿತಿಗಳು ಸ್ಥಳೀಯ ಅಭಿವೃದ್ಧಿ ಮತ್ತು ಪ್ರಾದೇಶಿಕ ಅಭಿವೃದ್ದಿಗೆ ಸಂಬಂಧಿಸಿದಂತೆ ಕಾರ್ಯ ಸೂತ್ರವನ್ನು ರಚಿಸಲು ಕ್ರಮ ಕೈಗೊಳ್ಳುವುದು. (ಪ್ರಕರಣ–309–ಡಿ, ಇ, ಎಫ್, 310–ಬಿ)

51. ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು, ಗ್ರಾಮ ಪಂಚಾಯತಿಗಳು ಹಾಗೂ ಜಿಲ್ಲೆಯಲ್ಲಿರುವ ಪುರಸಭೆಗಳಿಗೆ ಸಂಬಂಧಪಟ್ಟ ಯೋಜನೆಗಳನ್ನು ಕ್ರೋಢೀ ಕರಿಸಲು ಮತ್ತು ಜಿಲ್ಲೆಗಾಗಿ ಒಂದು ಅಭಿವೃದ್ಧಿ ಯೋಜನೆಯ ಕರಡನ್ನು ಸಿದ್ದಪಡಿಸಲು ಸಂಬಂಧಪಟ್ಟ ಜಿಲ್ಲಾ ಉಸ್ತವಾರಿ ಸಚಿವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಯೋಜನಾ ಸಮಿತಿಯನ್ನು ರಚಿಸಲಾಗಿದೆ. (ಪ್ರಕರಣ–310)

52. ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸುಧಾರಿಸುವುದಕ್ಕಾಗಿ ಹಾಗೂ ಜನತೆಯ ಅವಶ್ಯಕತೆಯ ಸಲುವಾಗಿ ನಿಯಮಗಳಲ್ಲಿ ಬದಲಾವಣೆ ತರಲು ಸರ್ಕಾರಕ್ಕೆ ಸಲಹೆಗಳನ್ನು ನೀಡುವ ಸಲುವಾಗಿ ಚುನಾಯಿತ ಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ರಾಜ್ಯ ಮಟ್ಟದಲ್ಲಿ ಒಂದು ವೇದಿಕೆಯಾಗಿ ಕಾರ್ಯ

ನಿರ್ವಹಿಸಲು ರಾಜ್ಯ ಪಂಚಾಯತ್ ಪರಿಷತ್ತನ್ನು ಸ್ಥಾಪಿಸಲಾಗಿದೆ. ಇದಕ್ಕೆ ರಾಜ್ಯದ ಮುಖ್ಯಮಂತ್ರಿಗಳು ಅಧ್ಯಕ್ಷರಾಗಿರುತ್ತಾರೆ. (ಪ್ರಕರಣ–310–ಎ)

53. ಈ ಅಧಿನಿಯಮಕ್ಕೆ ಕಾನೂನುಗಳನ್ನು ಅಳವಡಿಸುವ ಅಧಿಕಾರ ಸರ್ಕಾರಕ್ಕೆ ಇರುತ್ತವೆ. ಈ ಅಧಿನಿಯಮದ ನಿಯಮಗಳಗೆ ಒಳಪಟ್ಟು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿಗಳು ಉಪವಿಧಿಗಳನ್ನು ರಚಿಸಿಕೊಳ್ಳಬಹುದು. (ಪ್ರಕರಣ–316,317).

54. ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂಧಿಸಿದಂತೆ ಮಾಡಲಾದ ನಿಯಮಗಳು ಮತ್ತು ಆದೇಶ ಗಳನ್ನು ವಿಧಾನಮಂಡಲದ ಸದನಗಳ ಮುಂದೆ ಮಂಡಿಸಬೇಕು. (ಪ್ರಕರಣ–298)

55. ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಸಂಬಂಧಿಸಿ ದಂತೆ 29 ಪ್ರಮುಖ ವಿಷಯಗಳನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವಹಿಸ ಲಾಗಿರುತ್ತದೆ. (ಪ್ರಕರಣ–312)

56. ಪ್ರತಿ ವರ್ಷದ ಏಪ್ರಿಲ್ ಮೊದಲನೇ ದಿನದ ತರುವಾಯ ಆದಷ್ಟು ಬೇಗನೆ ಗ್ರಾಮ ಪಂಚಾಯತಿಯ ಹಿಂದಿನ ಆರ್ಥಿಕ ವರ್ಷದ ಆಡಳಿತ ವರದಿಯನ್ನು ಗ್ರಾಮ ಪಂಚಾಯತಿಯ ಮುಂದೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಮಂಡಿಸಬೇಕು. ಈ ವಿಷಯದ ಬಗ್ಗೆ ಗ್ರಾಮ ಪಂಚಾಯತಿಯು ನಿರ್ಣಹಿಸಿದ ನಿರ್ಣಯ ದೊಂದಿಗೆ ವರದಿಯನ್ನು ಜಿಲ್ಲಾ ಪಂಚಾಯತಿಗೆ ಕಳುಹಿಸಬೇಕು. ತಾಲ್ಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಯು ಸಹ ತಾಲ್ಲೂಕು ಪಂಚಾಯತಿಯ ಹಿಂದಿನ ಆರ್ಥಿಕ ವರ್ಷದ ಆಡಳಿತ ವರದಿಯನ್ನು ತಾಲ್ಲೂಕು ಪಂಚಾಯತಿ ಸಭೆಯಲ್ಲಿ ಮಂಡಿಸಿದ ನಂತರ ತಾಲ್ಲೂಕು ಪಂಚಾಯತಿಯ ನಿರ್ಣಯದೊಂದಿಗೆ ವರದಿಯನ್ನು ಜಿಲ್ಲಾ ಪಂಚಾಯತಿಗೆ ಸಲ್ಲಿಸಬೇಕು. ಈ ವರದಿಗಳನ್ನು ಜಿಲ್ಲಾ ಪಂಚಾಯತಿಯು ಪರಿಶೀಲಿಸಿದ ನಂತರ ಕ್ರೋಢೀಕೃತವಾದ ವರದಿಯನ್ನು ಜಿಲ್ಲಾ ಪಂಚಾಯತಿಯು ಸರ್ಕಾರಕ್ಕೆ ಸಲ್ಲಿಸಬೇಕು.

57. ಪ್ರತಿ ವರ್ಷದ ಏಪ್ರಿಲ್ ಮೊದಲನೇ ದಿನದ ತರುವಾಯ ಆದಷ್ಟು ಬೇಗನೆ ಜಿಲ್ಲಾ ಪಂಚಾಯತಿಯ ಹಿಂದಿನ ಆರ್ಥಿಕ ವರ್ಷದ ಆಡಳಿತ ವರದಿಯನ್ನು ಜಿಲ್ಲಾ ಪಂಚಾಯತಿಯ ಸಭೆಯ ಮುಂದೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು ಮಂಡಿಸಬೇಕು. ಜಿಲ್ಲಾ ಪಂಚಾಯತಿಯು ಚರ್ಚಿಸಿ ನಿರ್ಣಯಿಸಿದ ನಂತರ ನಿರ್ಣಯದ ಪ್ರತಿಯೊಂದಿಗೆ ನಿರ್ಣಯದ ಪ್ರತಿಯೊಂದಿಗೆ ಆಡಳಿತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕು.

- ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಅನುಮತಿ ಇಲ್ಲದೆ ಕಟ್ಟಡಗಳನ್ನು ನಿರ್ಮಾಣ ಮಾಡಿದರೆ ಅಥವಾ ನಿಯಮ ಗಳನ್ನು ಉಲ್ಲಂಘಿಸಿದರೆ ಅಂತಹ ಮಾಲೀಕರಿಗೆ ಐದುನೂರು ರೂಪಾಯಿಗಳ ದಂಡ ವಿಧಿಸಬಹುದು.
- ಕಟ್ಟಡಗಳ, ಅಂಗಡಿಗಳ ಹಾಗೂ ಕೈಗಾರಿಕೆ ಗಳ ಮತ್ತು ಇತರೆ ವ್ಯಾಪಾರೋದ್ಯಮಗಳ ಲೈಸೆನ್ಸ್‌ಗಾಗಿ ಸಲ್ಲಿಸಿದ ಅರ್ಜಿಯನ್ನು 60 ದಿನದೊಳಗಾಗಿ ಗ್ರಾಮ ಪಂಚಾಯತಿಯು ಇತ್ಯರ್ಥಪಡಿಸಬೇಕು. ಚುನಾವಣೆಯ ಸಮಯದಲ್ಲಿ 90 ದಿನದೊಳಗೆ ಇತ್ಯರ್ಥ ಪಡಿಸಬೇಕು. ಇಲ್ಲವಾದರೆ ಸಾಮಾನ್ಯವಾಗಿ ಮಂಜೂರು ಮಾಡುವ ಅವಧಿಗಾಗಿ ಮತ್ತು ವಿಧಿಸುವ ಷರತ್ತಿಗೆ ಒಳಪಟ್ಟು ಅರ್ಜಿಯನ್ನು ಮಂಜೂರು ಮಾಡಲಾಗಿದೆಯೆಂದು ಭಾವಿಸಬಹುದು. ಇಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟ ಅಧಿಕಾರಿ ಮತ್ತು ಅಧ್ಯಕ್ಷನ ಮೇಲೆ ದುರ್ನಡತೆ ಎಂದು ಪರಿಗಣಿಸಿ ಕ್ರಮ ಕೈಗೊಳ್ಳಬಹುದು.
- ಗ್ರಾಮ ಪಂಚಾಯತಿಗಳ ಸಾರ್ವಜನಿಕ ಬೀದಿಗಳು, ಖಾಲಿ ನಿವೇಶಗಳ ಮೇಲಿನ ಅಡೆ–ತಡೆ ಮತ್ತು ಒತ್ತುವರಿಗಳನ್ನು ತೆರವುಗೊಳಿಸಲು ಅಗತ್ಯ ಕ್ರಮ ಕೈಗೊಳ್ಳ ಬಹುದು. ಅಂತಹ ಮಾಲೀಕರು ತೆರವುಗೊಳಿಸದಿದ್ದರೆ ಅವರ ಮೇಲೆ ಒಂದು ನೂರು ರೂಪಾಯಿಗೆ ವಿಸ್ತರಿಸ ಬಹುದಾದ ದಂಡವನ್ನು ವಿಧಿಸಬಹುದು ಹಾಗೂ ಮತ್ತೆ ತೆರವುಗೊಳಿಸದಿದ್ದರೆ ಪ್ರತಿ

ದಿನಕ್ಕೆ ಐದು ರೂಪಾಯಿ ದಂಡ ವಿಧಿಸಿ ಅಡೆತಡೆಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಬಹುದು.

- ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಗ್ರಾಮ ಪಂಚಾಯತಿಯ ಹಾಗೂ ಸರ್ಕಾರದ ಜಮೀನುಗಳಲ್ಲಿ ಸ್ವಂತ ಗೃಹ ಬಳಕೆಗೆ ಉಪಯೋಗಿಸುವ ಮರಳನ್ನು ಮತ್ತು ಮಣ್ಣನ್ನು ಹೊರತುಪಡಿಸಿ ಇನ್ನುಳಿದ ಉದ್ದೇಶಗಳಿಗಾಗಿ ಮಣ್ಣನ್ನು ತೆಗೆದರೆ ಎರಡುನೂರು ರೂಪಾಯಿಗಳ ದಂಡ ವಿಧಿಸಬಹುದು. ಹಾಗೂ ಮಣ್ಣು ಮರಳು ಮತ್ತು ಇತರೆ ವಸ್ತು ಬೆಲೆಯ ಎರಡರಷ್ಟನ್ನು ಜುಲ್ಮಾನೆಯಂತೆ ವಸೂಲೂ ಮಾಡ ಬಹುದು. (ಪ್ರಕರಣ-72)
- ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಉತ್ಸವಗಳು ಮತ್ತು ಸಮಾರಂಭಗಳ ಸಂದರ್ಭದಲ್ಲಿ ನಾಲ್ಕು ದಿನಗಳಿಗೆ ಮೀರದಂತೆ ಯಾವುದೇ ಸಾರ್ವಜನಿಕ ಬೀದಿಯ ಬಳಕೆ ಅಥವಾ ಅದರಲ್ಲಿ ತಾತ್ಕಾಲಿಕವಾಗಿ ರಚನೆಗಳನ್ನು ಮಾಡು ವಂತಿಲ್ಲ.
- ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಯಾವುದೇ ಪಾಳುಬಿದ್ದ ಕಟ್ಟಡ ಅಥವಾ ಖಾಸಗಿ ಸ್ವತ್ತಿನಲ್ಲಿ ಬೆಳೆದಿರುವ ಮರಗಳು ಬೀಳುವಂತಿದ್ದರೆ ಇದರಿಂದ ಸಾರ್ವಜನಿಕ ರಿಗೆ ತೊಂದರೆಯಾಗುವುದು ಎಂದು ಕಂಡುಬಂದರೆ ಅಂತಹ ಕಟ್ಟಡದ ಭಾಗ, ಮರದ ಅಥವಾ ಮರದ ಕೊಂಬೆಯನ್ನು ಕೆಡವಿ ಹಾಕಲು ಹಾಗೂ ಕತ್ತರಿಸಿ ಹಾಕಲು ಮಾಲೀಕನಿಗೆ ಅಗತ್ಯಪಡಿಸಬಹುದು. ಸದರಿ ಕಟ್ಟಡ ಅಥವಾ ಮರವನ್ನು ಕೆಡವಲು / ಕತ್ತರಿಸಲು ಗ್ರಾಮ ಪಂಚಾಯತಿಯು ಕ್ರಮ ಕೈಗೊಳ್ಳಬಹುದು. ಇದಕ್ಕಾಗಿ ತಗಲುವ ವೆಚ್ಚವನ್ನು ಮಾಲೀಕನಿಂದ ತೆರಿಗೆಯನ್ನು ವಸೂಲು ಮಾಡುವ ರೀತಿಯಲ್ಲಿ ವಸೂಲು ಮಾಡಬಹುದು.
- ಯಾವುದೇ ಕಟ್ಟಡ ಅಥವಾ ಗುಡಿಸಲಿನ ಮಾಲೀಕನು ತನ್ನ ಪರಿಸರದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಕಾಪಾಡಿಕೊಳ್ಳಬೇಕು. ಆರೋಗ್ಯಕ್ಕೆ ಹಾನಿಕರವಾದ ಯಾವುದೇ ಚರಂಡಿ ನೀರು ಸಂಗ್ರಹಣೆ ಯಾಗಲು ಅವಕಾಶ ಮಾಡಿಕೊಡ ಬಾರದು. ಒಂದು ವೇಳೆ ಅದನ್ನು ನಿರ್ವಹಿಸಲು ತಪ್ಪಿದ್ದರೆ ಗ್ರಾಮ ಪಂಚಾಯತಿಗೆ ಅಂತಹ ಕೊಳಚೆಯನ್ನು ನಿವಾರಿಸಲು ಕ್ರಮ ಕೈಗೊಂಡು ಅದರ ವೆಚ್ಚವನ್ನು ಮಾಲೀಕನಿಂದ ಭರಿಸಿಕೊಳ್ಳಲು ಕ್ರಮವಹಿಸಬಹುದು.
- ಗ್ರಾಮ ಪಂಚಾಯತಿ ಪ್ರದೇಶದಲ್ಲಿ ಲೈಸೆನ್ಸ್ ಇಲ್ಲದೆ ಅಪಾಯಕಾರಿಯ ವ್ಯಾಪಾರಗಳು, ಹೋಟೇಲ್‌ಗಳು, ಬೇಕರಿಗಳು, ವಸತಿ ಗೃಹಗಳನ್ನು ನಿರ್ಮಿಸಿದರೆ ಹಾಗೂ ಲೈಸೆನ್ಸ್‌ಗಳನ್ನು ನವೀಕರಿಸದಿದ್ದರೆ ಅಂತಹ ವ್ಯಕ್ತಿಯ ಮೇಲೆ ಕ್ರಮ ಜರುಗಿಸಬಹುದು ಮತ್ತು ಆ ಸ್ಥಳದಲ್ಲಿ ನಿರ್ಮಿತವಾದ ಯಾವುದೇ ಕಟ್ಟಡದ ಭಾಗವನ್ನು ಬದಲಾಯಿಸುವಂತೆ, ತೆಗೆದುಹಾಕುವಂತೆ ಹಾಗೂ ಮೂಲ ಸ್ವರೂಪಕ್ಕೆ ತರುವಂತೆ ಅಂತಹ ಮಾಲೀಕನಿಗೆ ನೋಟೀಸನ್ನು ನೀಡಬಹುದು.

58. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಯಾವುದೇ ಪ್ರಕರಣ, ನಿಯಮ, ಉಪ-ನಿಯಮ ಅಥವಾ ಉಪವಿಧಿ ಗಳನ್ನು ಉಲ್ಲಂಘಿಸಿದರೆ ಯಾವುದೇ ಪೊಲೀಸ್ ಅಧಿಕಾರಿಯು ಅಂತಹ ವ್ಯಕ್ತಿಯನ್ನು ಅಪರಾಧದ ಕಾರಣಕ್ಕಾಗಿ ಬಂಧಿಸಬಹುದು ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಈ ಬಗ್ಗೆ ಸಂಬಂಧಪಟ್ಟ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಗೆ ಮಾಹಿತಿ ನೀಡಬೇಕು. ಹಾಗೂ ಕಾನೂನು ಬದ್ಧ ಅಧಿಕಾರಗಳನ್ನು ಚಲಾಯಿಸಲು ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಅಧಿಕಾರಿಗಳಿಗೆ ನೆರವು ನೀಡಬೇಕು.(ಪ್ರಕರಣ-299)
59. ಗ್ರಾಮ ಪಂಚಾಯತಿಗಳಿಗೆ ದಂಡ ವಿಧಿಸುವ ಮತ್ತು ಜಪ್ತಿ ಮಾಡುವ ಅಧಿಕಾರಿಗಳ ಬಗ್ಗೆ (ಪ್ರಕರಣ- 70, 72, 74, 75,)

60. ಜಿಲ್ಲಾ ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳಿಗೆ ನೀಡಿರುವ ಸೌಲಭ್ಯಗಳು (ಲಭ್ಯ ಮಾಹಿತಿಗಳನ್ನು ಆಧರಿಸಿದೆ.)

| ಕ್ರ.ಸಂ | ವಿವರಗಳು | ಅಧ್ಯಕ್ಷರು | ಉಪಾಧ್ಯಕ್ಷರು |
|---|---|---|---|
| 1 | ಪ್ರತಿ ಮಾಹೆ ಗೌರವ ಧನ | 35,000/– | 15,000 |
| 2 | ಮನೆ ಬಾಡಿಗೆ ಭತ್ಯೆ | ಬೆಂಗಳೂರಿನಲ್ಲಿ ರೂ. 20,000 – 40,000<br>ಇತರೆ ನಗರಗಳಲ್ಲಿ ರೂ. 20,000 | 15,000<br>10,000 |
| 3 | ವಾಹನ ಮತ್ತು ಇಂಧನ | ರೂ. 16 ಲಕ್ಷಕ್ಕೆ ಮಿ ೀರದಂತೆ ಚಾಲಕನ ಸಹಿತ ಸರ್ಕಾರಿ ಕಾರು – ಇಂಧನ ಪ್ರತಿ ಮಾಹೆ ರೂ. 550 ಲೀಟರ್ | 400 ಲೀಟರ್ |
| 4 | ಆತಿಥ್ಯ ಭತ್ಯ | 2 ಲಕ್ಷ | 950 |
| 5 | ಆಪ್ತ ಸಿಬ್ಬಂಧಿ | ಆಪ್ತ ಕಾರ್ಯದರ್ಶಿ – 1, ಸಿ –ವೃಂದದ ಹುದ್ದೆಗಳು – 2, ಡಿ –ವೃಂದದ ಹುದ್ದೆಗಳು – 2, ವಾಹನ ಚಾಲಕ – 1 | –––– |
| 4 | ದೂರವಾಣಿ ವೆಚ್ಚ | ರಾಜ್ಯ ಸಚಿವರ ಸಮನಾದ ವೆಚ್ಚ | ರೂ. 5,000 |
| 5 | ನಿವಾಸದ ದೂರವಾಣಿ | ರೂ. 3,000 | ರೂ. 1500 |
| 6 | ದಿನಪತ್ರಿಕೆಗಳು ಮತ್ತು ನಿಯತ ಕಾಲಿಕೆಗಳು | ರಾಜ್ಯ ಸಚಿವರ ಸಮನಾದ ವೆಚ್ಚ | ರೂ. 500 |

125. ತಾಲ್ಲೂಕು ಪಂಚಾಯತಿಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರುಗಳಿಗೆ ನೀಡಿರುವ ಸೌಲಭ್ಯಗಳು (ಲಭ್ಯ ಮಾಹಿತಿಗಳನ್ನು ಆಧರಿಸಿದೆ.)

| ಕ್ರ.ಸಂ | ವಿವರಗಳು | ಅಧ್ಯಕ್ಷರು | ಉಪಾಧ್ಯಕ್ಷರು |
|---|---|---|---|
| 1 | ಪ್ರತಿ ಮಾಹೆ ಗೌರವ ಧನ | 2,000 | 1300 |
| 2 | ಇಂಧನ | ಪ್ರತಿ ಮಾಹೆ 100 ಲೀಟರ್ | 50 ಲೀಟರ್ |
| 3 | ಆತಿಥ್ಯ ಭತ್ಯ | ಪ್ರತಿ ಮಾಹೆ ರೂ. 300 | ರೂ. 200 |
| 4 | ದೂರವಾಣಿ ವೆಚ್ಚ | ಪ್ರತಿ ಮಾಹೆ ರೂ. 1000 | ರೂ. 500 |
| 5 | ನಿವಾಸದ ದೂರವಾಣಿ | ರೂ. 500 | ರೂ. 300 |
| 6 | ದಿನಪತ್ರಿಕೆಗಳು ಮತ್ತು ನಿಯತ ಕಾಲಿಕೆಗಳು | ಪ್ರತಿ ಮಾಹೆ ರೂ. 100 | ರೂ. 75 |

126. ರಾಜ್ಯ ಚುನಾವಣಾ ಆಯೋಗದ ಅಧ್ಯಕ್ಷರು – ಶ್ರೀ ಪಿ.ಎನ್. ಶ್ರೀನಿವಾಸಚಾರಿ.

127. ರಾಜ್ಯ 4ನೇ ಹಣಕಾಸು ಆಯೋಗದ ಅಧ್ಯಕ್ಷರು – ಸಿ.ಜಿ. ಚಿನ್ನಸ್ವಾಮಿ.

128. ರಾಜ್ಯ 4ನೇ ಹಣಕಾಸು ಆಯೋಗದ ಸದಸ್ಯರುಗಳು – ಹೆಚ್.ಡಿ. ಅಮರ್‌ನಾಥ್ ಮತ್ತು ಡಾ॥ ಹೆಚ್. ಶಶಿಧರ್ (ನಿವೃತ್ತ ಐ.ಎ.ಎಸ್.)

129. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ತಿದ್ದುಪಡಿ ಮಾಡಿದ ಉನ್ನತ ಮಟ್ಟದ ತಜ್ಞರ ಸಮಿತಿ ಅಧ್ಯಕ್ಷರು–ಕೆ.ಆರ್. ರಮೇಶ್ ಕುಮಾರ್, ಸನ್ಮಾನ್ಯ ಸಚಿವರು ಹಾಗೂ ಮಾಜಿ ವಿಧಾನಸಭಾ ಅಧ್ಯಕ್ಷರು.

130. ಗ್ರಾಮ ಪಂಚಾಯತಿಗಳನ್ನು ಪುನರ್ ವಿಂಗಡಿಸುವ ಮತ್ತು ಹೊಸದಾಗಿ ರಚಿಸುವ ಸಮಿತಿಯ ಅಧ್ಯಕ್ಷರು – ಶ್ರೀ ನಂಜಯ್ಯನ ಮಠ್, ಮಾಜಿ ಶಾಸಕರು.

# ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.
ದೂ. 080-22372738 e-mail: nregs-ka@nic.in

ಗ್ರಾಅಪ 858 ಉಖಾಯೋ 2016

ಗೆ
ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಬೆಂಗಳೂರು (ನಗರ), ಬೀದರ್, ದಕ್ಷಿಣ-ಕನ್ನಡ, ಉಡುಪಿ ಮತ್ತು ಗುಲ್ಬರ್ಗಾ ಜಿಲ್ಲೆಗಳು ಹೊರತು ಪಡಿಸಿ)

ಮಾನ್ಯರೇ,

**ವಿಷಯ** : 2016-17ನೇ ಸಾಲಿಗೆ ರಾಜ್ಯದ 25 ಜಿಲ್ಲೆಗಳ 110 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಿರುವ ಕುರಿತು.

**ಉಲ್ಲೇಖ** : 1. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 259 ಟಿ.ಎನ್.ಆರ್ 2016 ಬೆಂಗಳೂರು ದಿನಾಂಕ: 06-10-2016 (68 ತಾಲ್ಲೂಕುಗಳು)

2. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 259 ಟಿ.ಎನ್.ಆರ್ 2016 (ಭಾಗ-1) ಬೆಂಗಳೂರು ದಿನಾಂಕ: 06-10-2016 (42 ತಾಲ್ಲೂಕುಗಳು)

**********

2016-17ನೇ ಸಾಲಿನಲ್ಲಿ ಮುಂಗಾರು ಮಳೆಯ ವೈಫಲ್ಯಯತೆಯಿಂದ ರಾಜ್ಯ ಸರ್ಕಾರವು ರಾಜ್ಯದ 25 ಜಿಲ್ಲೆಗಳ 110 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಉಲ್ಲೇಖ(1) ಮತ್ತು ಉಲ್ಲೇಖ(2)ರಲ್ಲಿ ಘೋಷಿಸಲಾಗಿದೆ (ಪ್ರತಿ ಲಗತ್ತಿಸಿದೆ). ಬರಪೀಡಿತ ಪ್ರದೇಶಗಳಲ್ಲಿ ಮಳೆ ಅಭಾವದಿಂದ ಜನಗಳಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿಲ್ಲದೇ ಉದ್ಯೋಗಕ್ಕಾಗಿ ಜನರು ವಲಸೆ ಹೋಗುವ ಸಂಭವಗಳಿವೆ. ಇಂತಹ ಸ್ಥಿತಿಯಲ್ಲಿ ಉದ್ಯೋಗಕ್ಕಾಗಿ ಹೆಚ್ಚಿನ ಬೇಡಿಕೆ ಇರುತ್ತದೆ. ಇದನ್ನು ಸಮರ್ಥವಾಗಿ ನಿಭಾಯಿಸಲು ಬೇಡಿಕೆಗೆ ಅನುಸಾರವಾಗಿ ಕಾಮಗಾರಿಗಳ ಗುಚ್ಛವನ್ನು ದ್ವಿಗುಣಗೊಳಿಸಬೇಕಾಗುತ್ತದೆ.

ನರೇಗಾ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾಡಳಿತ ಯಂತ್ರವನ್ನು ಚುರುಕುಗೊಳಿಸಿ ಹೆಚ್ಚು ಕೂಲಿ ಆಧಾರಿತ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ, ಮಾನವ ದಿನಗಳನ್ನು ಹೆಚ್ಚಾಗಿ ಉತ್ಪಾದನೆ ಮಾಡಿ ಗ್ರಾಮೀಣ ಜನರು ವಲಸೆ ಹೋಗದಂತೆ ಸ್ಥಳೀಯವಾಗಿ ಉದ್ಯೋಗವನ್ನು ಒದಗಿಸಲು ಸೂಕ್ತವಾದ ವ್ಯವಸ್ಥೆ ಮಾಡುವುದು. ಜನರಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರನ್ನು ಒದಗಿಸುವುದು ಅತಿ ಅವಶ್ಯಕವಾಗಿದೆ. ಪ್ರಯುಕ್ತ, ಅಂತರ್‌ಜಲದ ಮಟ್ಟವನ್ನು ಹೆಚ್ಚಿಸಲು ನೀರಿನ ಕೊಯ್ಲಿನ ವಿನ್ಯಾಸದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಸೂಚಿಸಿದೆ. 2016-17ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಕೆಲವು ಕಾಮಗಾರಿಗಳಾದ, ಅಂಗನವಾಡಿ ಕೇಂದ್ರಗಳ ನಿರ್ಮಾಣ, ಕೃಷಿ ಹೊಂಡಗಳ ನಿರ್ಮಾಣ, ಎರೆಹುಳ ಗೊಬ್ಬರ ತೊಟ್ಟಿಗಳ ನಿರ್ಮಾಣ ಮತ್ತು ರಸ್ತೆ ಬದಿಗಳಲ್ಲಿ ಗಿಡಗಳನ್ನು ನೆಡುವ ಕಾಮಗಾರಿಗಳನ್ನು ಅದ್ಯತಾ ವಲಯಗಳನ್ನಾಗಿ ಪರಿಗಣಿಸಿದ್ದು, ಅವುಗಳಿಗೆ ಹೆಚ್ಚು ಒತ್ತನ್ನು ಕೊಟ್ಟು ಅನುಷ್ಠಾನಕ್ಕೆ ಕ್ರಮಕೈಗೊಳ್ಳುವುದು ಜೊತೆಗೆ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯ ಕಾಮಗಾರಿಗಳನ್ನು ಸಹ ಆದ್ಯತೆಯ ಮೇರೆಗೆ ಬರಪೀಡಿತ ತಾಲ್ಲೂಕುಗಳ ಪ್ರದೇಶಗಳಲ್ಲಿ ಅನುಷ್ಠಾನಕ್ಕೆ ಕ್ರಮವಹಿಸುವುದು.

ಈ ನಿಟ್ಟಿನಲ್ಲಿ ತಾವು ಮುಂದಾಳತ್ವ ವಹಿಸಿ, ಜನರ ಸಂಕಷ್ಟಗಳನ್ನು ದೂರ ಮಾಡುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಕ್ರಮವಹಿಸಲು ಕೋರಿದೆ.

❖ ಗ್ರಾಮ ಪಂಚಾಯತಿ ಮಟ್ಟದಲ್ಲಿ ನೊಂದಾಯಿಸಿರುವ ಎಲ್ಲಾ ಉದ್ಯೋಗ ಚೀಟಿ ಹೊಂದಿರುವ ಕೂಲಿ ಕಾರ್ಮಿಕರನ್ನು ಸಂಘಟಿಸಿ ವಿಶೇಷ ರೋಜ್‌ಗಾರ್ ದಿವಸವನ್ನು ಆಯೋಜಿಸಿ ಆ ಮೂಲಕ ಕೂಲಿ ಬೇಡಿಕೆಗೆ ಅಭಿಯಾನ ಹಮ್ಮಿಕೊಂಡು ಉದ್ಯೋಗ ಅರಸಿಕೊಂಡು ಬರುವರಿಗೆ ಉದ್ಯೋಗವನ್ನು ಒದಗಿಸುವುದು.

❖ ಬರಗಾಲದ ಸಮಯದಲ್ಲಿ ಉದ್ಯೋಗ ಅವಕಾಶಗಳನ್ನು ಪ್ರತಿ ಒಬ್ಬರಿಗೆ ಒದಗಿಸಲು ಪ್ರತಿ ಗ್ರಾಮದಲ್ಲಿ ಸಮುದಾಯದ ಕಾಮಗಾರಿಗಳನ್ನು ತೆಗೆದುಕೊಂಡು ಅನುಷ್ಠಾನಗೊಳಿಸುವುದು.

❖ ಮಾದರಿ ಅಂದಾಜು ಪತ್ರಿಕೆಯಂತೆ, ಅನುಸೂಚಿ–Iರ ಕಂಡಿಕೆ 5ರಲ್ಲಿರುವ ಅರ್ಹರೈತರ ಜಮೀನಿನಲ್ಲಿ ಬದು ನಿರ್ಮಾಣ ಕೃಷಿ ಹೊಂಡ, ಗಿಡ ನೆಡುವಿಕೆ, ತೋಟಗಾರಿಕೆ/ರೇಷ್ಮೆ ಅಭಿವೃದ್ಧಿ ಹಾಗೂ ಕುರಿ/ದನದ ಕೊಟ್ಟಿಗೆ ಕಾಮಗಾರಿಗಳಿಗೆ ಕೂಡಲೇ ಚಾಲನೆ ನೀಡುವುದು.

❖ ಸರ್ಕಾರದ ಆದೇಶದ ಸಂಖ್ಯೆ: ಗ್ರಾಅಪ 418 ಉಖಾಯೋ 2012, ಬೆಂಗಳೂರು, ದಿನಾಂಕ: 29–09–2015ರ ಪ್ರಕಾರ ಬರಗಾಲದ ಸಮಯದಲ್ಲಿ ಅಧಿನಿಯಮದ ಪರಿಷ್ಕೃತ ಅನುಸೂಚಿ–IIರ ಕಂಡಿಕೆ–5ರಲ್ಲಿ ನಿರೂಪಿಸಿದ ಎಲ್ಲಾ ಅರ್ಹ ಫಲಾನುಭವಿಗಳಿಗೆ ಪ್ಯಾಕೇಜ್‌ಗಳ ಮೂಲಕ ವೈಯಕ್ತಿಕ ಕಾಮಗಾರಿಗಳ ಸೌಲಭ್ಯಗಳನ್ನು ತಲುಪಿಸಲು ಕ್ರಮವಹಿಸುವುದು.

❖ ಅನುಷ್ಠಾನ ಇಲಾಖೆಗಳೊಂದಿಗೆ ಒಗ್ಗೂಡಿಸುವಿಕೆಗಾಗಿ ಸಮನ್ವಯ ಸಾಧಿಸುವುದು.

❖ ತಮ್ಮ ಅಧೀನ ಕ್ಷೇತ್ರ ಮಟ್ಟದ ಅಧಿಕಾರಿಗಳಿಗೆ ಸಾಮರ್ಥ್ಯಾಭಿವೃದ್ಧಿ.

❖ ಮಾಹಿತಿ ಶಿಕ್ಷಣ ಸಂವಹನ ಚಟುವಟಿಕೆಗಳನ್ನು ಕಾರ್ಯಗತಗೊಳಿಸಿ, ಇದರ ಮೂಲಕ ಪ್ರಚಾರ ನೀಡುವುದು.

ಮುಂದುವರೆದು, ಬರಪೀಡಿತ ಜಿಲ್ಲೆಗಳ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ, ಗ್ರಾಮೀಣ ಜನರಿಗೆ ಹೆಚ್ಚುವರಿಯಾಗಿ 50 ಉದ್ಯೋಗ ದಿನಗಳನ್ನು ಒದಗಿಸಲು 100 ರಿಂದ 150 ದಿನಗಳಿಗೆ ಹೆಚ್ಚಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲು ಕ್ರಮವಹಿಸಲಾಗಿದೆ. ಇದಲ್ಲದೇ ಬರಪೀಡಿತ ಜಿಲ್ಲೆಗಳ ತಾಲ್ಲೂಕುಗಳಲ್ಲಿ ನರೇಗಾ ಯೋಜನೆಯನ್ನು ಅನುಷ್ಠಾನಗೊಳಿಸಿದ ಬಗ್ಗೆ ಬರಪರಿಸ್ಥಿತಿಯ ಪ್ರಗತಿಯನ್ನು ಪ್ರತಿದಿನ ಪರಶೀಲನೆ ಮಾಡಿ ವರದಿಯನ್ನು ಆಯುಕ್ತಾಲಯಕ್ಕೆ ಕಳುಹಿಸಿಕೊಡಲು ನಮೂನೆಗಳನ್ನು ಸಹ ಈಗಾಗಲೇ ಹಿಂದಿನ ಪತ್ರಗಳಲ್ಲಿ ತಿಳಿಸಿದ್ದು, ಅದರಂತೆಯೇ ನಮೂನೆಗಳಲ್ಲಿ ಪ್ರತಿದಿನ ವರದಿಯನ್ನು ತಪ್ಪದೇ ಸಲ್ಲಿಸಲು ಈ ಮೂಲಕ ಸೂಚಿಸಿದೆ.

ಸಮರೋಪ ಹಾದಿಯಲ್ಲಿ ಉದ್ಯೋಗ ಖಾತರಿ ಯೋಜನೆಯನ್ನು ಅನುಷ್ಠಾನಗೊಳಿಸಲು ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.

ತಮ್ಮ ವಿಶ್ವಾಸಿ

ಆಯುಕ್ತರು, ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-01.
ದೂರವಾಣಿ ಸಂಖ್ಯೆ : 080-22372738
E-mail: karnregs@gmail.com

ಗ್ರಾಅಪ 858 ಉಖಾಯೋ 2016

ಗೆ,

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
(ಬೀದರ್, ಕಲಬುರಗಿ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಹೊರತುಪಡಿಸಿ)

ಮಾನ್ಯರೇ,

**ವಿಷಯ** : 2016-17ನೇ ಸಾಲಿಗೆ ರಾಜ್ಯದ ಕೆಲವು ಜಿಲ್ಲೆಗಳ ತಾಲ್ಲೂಕುಗಳನ್ನು ಹೆಚ್ಚುವರಿಯಾಗಿ ಬರಪೀಡಿತ ಪ್ರದೇಶಗಳೆಂದು ಘೋಷಿಸಿದ ಬಗ್ಗೆ.

**ಉಲ್ಲೇಖ** : 1. ಈ ಆಯುಕ್ತಾಲಯದ ಪತ್ರದ ಸಂಖ್ಯೆ: ಗ್ರಾಅಪ 858 ಉಖಾಯೋ 2016 ದಿನಾಂಕ 18-10-2016.

2. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 259 ಟಿಎನ್‌ಆರ್ 2016 (ಭಾಗ-1) ಬೆಂಗಳೂರು ದಿನಾಂಕ: 29-10-2016.

**********

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ರಾಜ್ಯದ 25 ಜಿಲ್ಲೆಗಳ 110 ತಾಲ್ಲೂಕುಗಳನ್ನು ಸರ್ಕಾರವು ಬರಪೀಡಿತ ಪ್ರದೇಶಗಳೆಂದು ಘೋಷಿಸಿದ್ದು, ಸದರಿ ಬರಪೀಡಿತ ತಾಲ್ಲೂಕುಗಳ ಪ್ರದೇಶಗಳಲ್ಲಿ ನರೇಗಾ ಯೋಜನೆಯಡಿ ಕೈಗೊಳ್ಳಬೇಕಾದ ಬರಪರಿಹಾರದ ಕ್ರಮಗಳನ್ನು ತಮಗೆ ತಿಳಿಸಿರುವುದು ಸರಿಯಷ್ಟೇ. ಮುಂದುವರೆದು, ಉಲ್ಲೇಖ (2)ರಲ್ಲಿ ರಾಜ್ಯ ಸರ್ಕಾರವು ಹೆಚ್ಚುವರಿಯಾಗಿ 29 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಘೋಷಿಸಿರುತ್ತದೆ, ಹೀಗಾಗಿ ಒಟ್ಟು ರಾಜ್ಯದಲ್ಲಿ ಈ ತಹಲ್‌ವರೆಗೂ 139 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳನ್ನಾಗಿ ಘೋಷಿಸಲಾಗಿರುತ್ತದೆ. ರಾಜ್ಯ ಸರ್ಕಾರವು ಹೆಚ್ಚುವರಿ ತಾಲ್ಲೂಕುಗಳಿಗೆ ಹೊರಡಿಸಿರುವ ಆದೇಶ ಪ್ರತಿ ಮತ್ತು 139 ಬರಪೀಡಿತ ತಾಲ್ಲೂಕುಗಳ ಪಟ್ಟಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಲಗತ್ತಿಸಿ ಸಲ್ಲಿಸಿದೆ.

ಅಗತ್ಯ ಕ್ರಮಗಳನ್ನು ಬರಪೀಡಿತ ಪ್ರದೇಶಗಳಲ್ಲಿ ಕೈಗೊಳ್ಳುವ ಕುರಿತು, ಈಗಾಗಲೇ, ಉಲ್ಲೇಖ (1)ರಲ್ಲಿ ತಿಳಿಸಲಾಗಿರುವುದನ್ನು ಸ್ಮರಿಸಬಹುದಾಗಿರುತ್ತದೆ. ಸದರಿ ಪತ್ರದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ವಲಸೆ ಹೋಗದಂತೆ, ಎಲ್ಲಾ ಕೂಲಿ ಕಾರ್ಮಿಕರ ಕುಟುಂಬಗಳಿಗೆ ಉದ್ಯೋಗವನ್ನು ನಿರಾಕರಿಸದೇ, ತಪ್ಪದೇ ಒದಗಿಸಲು ಕ್ರಮ ವಹಿಸುವಂತೆ ಈ ಮೂಲಕ ಸೂಚಿಸಿದೆ. ಜನರ ಸಂಕಷ್ಟಗಳನ್ನು ದೂರ ಮಾಡಲು, ನರೇಗಾ ಯೋಜನೆಯ ಎಲ್ಲಾ ಅರ್ಹ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ, ಈ ಮೂಲಕ ಮಾನವ ದಿನಗಳನ್ನು ಸೃಜಿಸಿ ಉದ್ಯೋಗವನ್ನು ಒದಗಿಸಲು ಕ್ರಮ ವಹಿಸುವಂತೆ ಈ ಮೂಲಕ ಸೂಚಿಸಿದೆ.

ತಮ್ಮ ವಿಶ್ವಾಸಿ,

ವಿಶೇಷ ಆಯುಕ್ತರು (ಎಂಜಿಎನ್‌ಆರ್‌ಇಜಿಎ)
ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಅನುಬಂಧ

## ಸರ್ಕಾರದ ಆದೇಶ ಸಂಖ್ಯೆ : No: RD 259 TNR 2016 dated 06-10-2016 (68 Tqs), order No: RD 259 TNR 2016 (Part-I) dated: 06-10-2016 (42 Tqs) and Order number RD 259 TNR 2016(part-I) dated: 29-10-2016 ( 29 Tqs)

## 2016–17ನೇ ಸಾಲಿಗೆ ರಾಜ್ಯದ ಕೆಲವು ಜಿಲ್ಲೆಗಳ ತಾಲ್ಲೂಕುಗಳನ್ನು ಹೆಚ್ಚುವರಿಯಾಗಿ ಬರಪೀಡಿತ ಪ್ರದೇಶಗಳೆಂದು ಘೋಷಿಸಿದ ವಿವರಗಳು

| ಕ್ರಮ ಸಂಖ್ಯೆ | ಜಿಲ್ಲೆ | ತಾಲ್ಲೂಕುಗಳು | ಕ್ರಮ ಸಂಖ್ಯೆ | ಬರಪೀಡಿತ ಪ್ರದೇಶಗಳೆಂದು ಘೋಷಿಸಿದ ತಾಲ್ಲೂಕುಗಳು |
|---|---|---|---|---|
| **1** | **2** | **3** | **4** | **5** |
| 1 | ಬೆಂಗಳೂರು (ಗ್ರಾಮಾಂತರ) | 4 | 1 | ಹೊಸಕೋಟೆ |
| | | | 2 | ದೊಡ್ಡಬಳ್ಳಾಪುರ |
| | | | 3 | ನೆಲಮಂಗಲ |
| | | | 4 | ದೇವನಹಳ್ಳಿ |
| 2 | ರಾಮನಗರ | 4 | 5 | ಚನ್ನಪಟ್ಟಣ |
| | | | 6 | ಕನಕಪುರ |
| | | | 7 | ಮಾಗಡಿ |
| | | | 8 | ರಾಮನಗರ |
| 3 | ಕೋಲಾರ | 5 | 9 | ಕೋಲಾರ |
| | | | 10 | ಮಾಲೂರು |
| | | | 11 | ಮುಳಬಾಗಿಲು |
| | | | 12 | ಶ್ರೀನಿವಾಸಪುರ |
| | | | 13 | ಬಂಗಾರಪೇಟೆ |
| 4 | ಚಿಕ್ಕಬಳ್ಳಾಪುರ | 6 | 14 | ಚಿಕ್ಕಬಳ್ಳಾಪುರ |
| | | | 15 | ಚಿಂತಾಮಣಿ |
| | | | 16 | ಗುಡಿಬಂಡೆ |
| | | | 17 | ಶಿಡ್ಲಘಟ್ಟ |
| | | | 18 | ಬಾಗೆಪಲ್ಲಿ |
| | | | 19 | ಗೌರಿಬಿದನೂರು |
| 5 | ತುಮಕೂರು | 10 | 20 | ಚಿಕ್ಕನಾಯಕನಹಳ್ಳಿ |
| | | | 21 | ಗುಬ್ಬಿ |
| | | | 22 | ಕೊರಟಗೆರೆ |
| | | | 23 | ಕುಣಿಗಲ್ |
| | | | 24 | ಮಧುಗಿರಿ |
| | | | 25 | ಪಾವಗಡ |
| | | | 26 | ತಿಪಟೂರು |
| | | | 27 | ತುಮಕೂರು |
| | | | 28 | ತುರುವೇಕೆರೆ |
| | | | 29 | ಸಿರಾ |
| 6 | ದಾವಣಗೆರೆ | 6 | 30 | ಜಗಳೂರು |
| | | | 31 | ಹರಪನಹಳ್ಳಿ |
| | | | 32 | ಚೆನ್ನಗಿರಿ |

| ಕ್ರಮ ಸಂಖ್ಯೆ | ಜಿಲ್ಲೆ | ತಾಲ್ಲೂಕುಗಳು | ಕ್ರಮ ಸಂಖ್ಯೆ | ಬರಪೀಡಿತ ಪ್ರದೇಶಗಳೆಂದು ಘೋಷಿಸಿದ ತಾಲ್ಲೂಕುಗಳು |
|---|---|---|---|---|
| **1** | **2** | **3** | **4** | **5** |
| 7 | ಚಿತ್ರದುರ್ಗ | 6 | 33 | ಹೊಸದುರ್ಗ |
| | | | 34 | ದಾವಣಗೆರೆ |
| | | | 35 | ಹರಿಹರ |
| | | | 36 | ಹೊನ್ನಾಳಿ |
| | | | 37 | ಚಳ್ಳಕೆರೆ |
| | | | 38 | ಹೊಳಲ್ಕೆರೆ |
| | | | 39 | ಚಿತ್ರದುರ್ಗ |
| | | | 40 | ಹಿರಿಯೂರು |
| | | | 41 | ಮೊಳಕಾಲ್ಮೂರು |
| 8 | ಮಂಡ್ಯ | 7 | 42 | ಮದ್ದೂರು |
| | | | 43 | ನಾಗಮಂಗಲ |
| | | | 44 | ಮಂಡ್ಯ |
| | | | 45 | ಕೃಷ್ಣರಾಜಪೇಟೆ |
| | | | 46 | ಮಳವಳ್ಳಿ |
| | | | 47 | ಪಾಂಡವಪುರ |
| | | | 48 | ಶ್ರೀರಂಗಪಟ್ಟಣ |
| 9 | ಹಾವೇರಿ | 7 | 49 | ಹಾವೇರಿ |
| | | | 50 | ಶಿಗ್ಗಾವಿ |
| | | | 51 | ಬ್ಯಾಡಗಿ |
| | | | 52 | ಹಾನಗಲ್ |
| | | | 53 | ಹಿರೇಕೆರೂರು |
| | | | 54 | ಸವಣೂರು |
| | | | 55 | ರಾಣೆಬೆನ್ನೂರು |
| 10 | ಧಾರವಾಡ | 5 | 56 | ಧಾರವಾಡ |
| | | | 57 | ಕಲಘಟಗಿ |
| | | | 58 | ಕುಂದಗೋಳ |
| | | | 59 | ನವಲಗುಂದ |
| | | | 60 | ಹುಬ್ಬಳ್ಳಿ |
| 11 | ಶಿವಮೊಗ್ಗ | 7 | 61 | ಶಿಕಾರಿಪುರ |
| | | | 62 | ಶಿವಮೊಗ್ಗ |
| | | | 63 | ಸೊರಬ |
| | | | 64 | ಹೊಸನಗರ |
| | | | 65 | ಸಾಗರ |
| | | | 66 | ತೀರ್ಥಹಳ್ಳಿ |
| 12 | ಹಾಸನ | 8 | 67 | ಆಲೂರು |
| | | | 68 | ಹೊಳೆನರಸೀಪುರ |
| | | | 69 | ಚನ್ನರಾಯಪಟ್ಟಣ |
| | | | 70 | ಅರಕಲಗೂಡು |
| | | | 71 | ಅರಸೀಕೆರೆ |
| | | | 72 | ಬೇಲೂರು |
| | | | 73 | ಹಾಸನ |

| ಕ್ರಮ ಸಂಖ್ಯೆ | ಜಿಲ್ಲೆ | ತಾಲ್ಲೂಕುಗಳು | ಕ್ರಮ ಸಂಖ್ಯೆ | ಬರಪೀಡಿತ ಪ್ರದೇಶಗಳೆಂದು ಘೋಷಿಸಿದ ತಾಲ್ಲೂಕುಗಳು |
|---|---|---|---|---|
| **1** | **2** | **3** | **4** | **5** |
| 13 | ಬಳ್ಳಾರಿ | 7 | 74 | ಸಂಡೂರು |
| | | | 75 | ಬಳ್ಳಾರಿ |
| | | | 76 | ಹಡಗಲಿ |
| | | | 77 | ಹೊಸಪೇಟೆ |
| | | | 78 | ಕೂಡ್ಲಗಿ |
| | | | 79 | ಸಿರಗುಪ್ಪಾ |
| | | | 80 | ಹಗರಿಬೊಮ್ಮನಹಳ್ಳಿ |
| 14 | ಚಾಮರಾಜನಗರ | 4 | 81 | ಚಾಮರಾಜನಗರ |
| | | | 82 | ಗುಂಡ್ಲುಪೇಟೆ |
| | | | 83 | ಕೊಳ್ಳೇಗಾಲ |
| | | | 84 | ಯಳಂದೂರು |
| 15 | ಮೈಸೂರು | 7 | 85 | ಹೆಗ್ಗಡದೇವನಕೋಟೆ |
| | | | 86 | ಹುಣಸೂರು |
| | | | 87 | ಕೃಷ್ಣರಾಜನಗರ |
| | | | 88 | ಮೈಸೂರು |
| | | | 89 | ನಂಜನಗೂಡು |
| | | | 90 | ಪಿರಿಯಾಪಟ್ಟಣ |
| | | | 91 | ತಿ. ನರಸೀಪುರ |
| 16 | ಕೊಪ್ಪಳ | 4 | 92 | ಗಂಗಾವತಿ |
| | | | 93 | ಯಲಬುರ್ಗಾ |
| | | | 94 | ಕೊಪ್ಪಳ |
| | | | 95 | ಕುಷ್ಟಗಿ |
| 17 | ರಾಯಚೂರು | 5 | 96 | ದೇವದುರ್ಗ |
| | | | 97 | ಲಿಂಗಸಗೂರು |
| | | | 98 | ಸಿಂಧನೂರು |
| | | | 99 | ಮಾನ್ವಿ |
| 18 | ಯಾದಗಿರಿ | 3 | 100 | ಶಹಾಪೂರ |
| 19 | ಬೆಳಗಾವಿ | 10 | 101 | ಬೈಲಹೊಂಗಲ |
| | | | 102 | ಬೆಳಗಾವಿ |
| | | | 103 | ಗೋಕಾಕ |
| | | | 104 | ಖಾನಾಪೂರ |
| | | | 105 | ರಾಮದುರ್ಗ |
| | | | 106 | ಸವದತ್ತಿ |
| | | | 107 | ಹುಕ್ಕೇರಿ |
| | | | 108 | ರಾಯಭಾಗ |
| 20 | ಬಾಗಲಕೋಟೆ | 6 | 109 | ಬಾದಾಮಿ |
| | | | 110 | ಬೀಳಗಿ |
| | | | 111 | ಹುನಗುಂದ |
| | | | 112 | ಮುಧೋಳ |
| | | | 113 | ಬಾಗಲಕೋಟೆ |
| | | | 114 | ಜಮಖಂಡಿ |

| ಕ್ರಮ ಸಂಖ್ಯೆ | ಜಿಲ್ಲೆ | ತಾಲ್ಲೂಕುಗಳು | ಕ್ರಮ ಸಂಖ್ಯೆ | ಬರಪೀಡಿತ ಪ್ರದೇಶಗಳೆಂದು ಘೋಷಿಸಿದ ತಾಲ್ಲೂಕುಗಳು |
|---|---|---|---|---|
| **1** | **2** | **3** | **4** | **5** |
| 21 | ವಿಜಯಪುರ | 5 | 115 | ವಿಜಯಪುರ |
| | | | 116 | ಇಂಡಿ |
| | | | 117 | ಮುದೆಬಿಹಾಳ |
| | | | 118 | ಸಿಂಧಗಿ |
| | | | 119 | ಬಸವನಬಾಗೇವಾಡಿ |
| 22 | ಗದಗ | 5 | 120 | ಗದಗ |
| | | | 121 | ಮುಂಡರಗಿ |
| | | | 122 | ನರಗುಂದ |
| | | | 123 | ರೋಣ |
| | | | 124 | ಶಿರಹಟ್ಟಿ |
| 23 | ಚಿಕ್ಕಮಗಳೂರು | 7 | 125 | ಚಿಕ್ಕಮಗಳೂರು |
| | | | 126 | ಕಡೂರ |
| | | | 127 | ಮೂಡಿಗೆರೆ |
| | | | 128 | ನರಸಿಂಹರಾಜಪುರ |
| 24 | ಕೊಡಗು | 3 | 129 | ಮಡಿಕೇರಿ |
| | | | 130 | ವಿರಾಜಪೇಟೆ |
| | | | 131 | ಸೋಮವಾರಪೇಟೆ |
| 25 | ಉತ್ತರ ಕನ್ನಡ | 11 | 132 | ಹಳಿಯಾಳ |
| | | | 133 | ಸಿದ್ದಾಪುರ |
| | | | 134 | ಮುಂಡಗೋಡ |
| | | | 135 | ಯಲ್ಲಾಪುರ |
| 26 | ಬೆಂಗಳೂರು (ನಗರ) | 4 | 136 | ಆನೇಕಲ್ |
| | | | 137 | ಬೆಂಗಳೂರು ಉತ್ತರ |
| | | | 138 | ಬೆಂಗಳೂರು ದಕ್ಷಿಣ |
| | | | 139 | ಬೆಂಗಳೂರು ಪೂರ್ವ |
| ಒಟ್ಟು | | 156 | | |

ಡಾ॥ ಎನ್. ನಾಗಾಂಬಿಕಾದೇವಿ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆರವರು
ಬೆಳಗಾವಿ ಜಿಲ್ಲೆಯ ಶಗಣಮಟ್ಟಿ ಗ್ರಾಮದ ಶಾಲಾಮಕ್ಕಳಿಗೆ ಸ್ವಚ್ಛತೆ ಬಗ್ಗೆ
ತಿಳುವಳಿಕೆ ನೀಡಿದರು.







ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ
ನಿರ್ಮಿಸಲಾಗುತ್ತಿರುವ ಶಾಲಾ ರಕ್ಷಣಾ ತಡೆಗೋಡೆ ಕಾಮಗಾರಿಗೆ ಸರ್ಕಾರದ ಪ್ರಧಾನ
ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆರವರು ಚಾಲನೆ ನೀಡಿದರು.

# KARNATAKA VIKAS : DECEMBER 2016

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
Date of Publication : 8th of Every Month.
RNI No. : 28103 / 1974 Total No. Pages 52, Posted at Bengaluru PSO, Mysore Road, Bengaluru
on 9th, 10th, 11th of every month.


## ದುಡಿಯುವ ಕೈಗಳಿಗೆ ಉದ್ಯೋಗ ಖಾತರಿ ನೆರವು




Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Mubarak Ahmed**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347


Price : ಬೆಲೆ : 10.00